ಅಪರಂಜಿ

ತಿಳಿನಗೆಯ ಕಾರಂಜಿ

ಜನವರಿ 2023

ರೀ ಖನ್ನಾ, ಸ್ವಲ್ಪ ಅನ್‌ಮ್ಯೂಟ್ ಮಾಡ್ರಿ, ನನ್ನ ಜೋಕ್‌ಗೆ ನೀವು ನಗೋದು ನನಗೆ ಕೇಳಿಸ್ತಾನೇ ಇಲ್ಲ !

ಬಿಡಿ ಪ್ರತಿ: ರೂ. 10/-

TEMPLE OF KNOWLEDGE

Beechi Systems & Services

Email : admin@beechi.in
Web : www.beechi.in
Mob : 9845264304, 9035302302, 9035007003

PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

BEECHI PRAKASHANA

ಬೀchi ಪ್ರಕಾಶನ,

BOOKS AVAILABLE

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

Email : admin@beechi.in | www.beechi.in | 9845264304

Ravi Graphics
OFFSET PRINTERS

Bringing colours alive

What we specialize into :

- Books
- Brochures
- Catelogues
- Boxes
- Mono Cartons

53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com

Bag is everything

bag factory
bagfactory.co.in

Our Promise

- 100% recyclable paper bags & pouches
- Pan-India delivery
- Premium customisation for high-street brands

Reach us for your paper bag requirements

+91 89719 95599 | sales@bagfactory.co.in | bagfactory.co.in

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
RNI NO. KAR-KAN/2005/15457

Certificate No.: MC-2068

ಮಲ್ಲಿಗೆ ಆಸ್ಪತ್ರೆ

ವೈಯಕ್ತಿಕ ಸಂಪೂರ್ಣ ಆರೋಗ್ಯ ಆರೈಕೆ

MALLIGE HOSPITAL

PERSONALISED COMPLETE HEALTHCARE

ಮಲ್ಲಿಗೆ ಮೆಡಿಕಲ್ ಸೆಂಟರ್ ಪ್ರೈವೆಟ್ ಲಿಮಿಟೆಡ್
೩೧ ಮತ್ತು ೩೨ ಕ್ರೆಸೆಂಟ್ ರಸ್ತೆ, ಬೆಂಗಳೂರು ೫೬೦೦೦೧, ಭಾರತ
ದೂರವಾಣಿ - +೯೧.೮೦.೬೭೧೬೫೫೫೫, +೯೧.೮೦.೨೨೨೦೩೩೩೩ ಮಿಂಚಂಚು - info@ಮಲ್ಲಿಗೆ.com ಜಾಲತಾಲ - www.ಮಲ್ಲಿಗೆ.com

MALLIGE MEDICAL CENTRE PVT. LTD.
31 & 32 Crescent Road, Bangalore 560001, India
Phone: +91.80.67165555, +91.80.22203333 Email: info@mallige.com Web: www.mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages: 40+4 APARANJI KANNADA MONTHLY.

ಸಂಪಾದಕ ಮಂಡಳಿ

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

ಚಂದಾ ವಿವರ :

ಬಿಡಿ ಪ್ರತಿ : ರೂ. 10/–

ವಾರ್ಷಿಕ ಚಂದಾ : ರೂ. 100/–

ಹತ್ತು ವರ್ಷದ ಚಂದಾ: ರೂ. 750/–

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 41

ಸಂಚಿಕೆ – 4

ಜನವರಿ–2023

ಈ ಸಂಚಿಕೆಯಲ್ಲಿ...

ಅಪರಂಜಿ ಕಿಡಿ	ಪ್ರಕಾಶ್	2
ನಮ್ಮನಮ್ಮಲ್ಲಿ	ಶಿವಕುಮಾರ್	3
ಹ್ಯಾಪಿ ನ್ಯೂ ಇಯರ್	ಸಿ.ಆರ್. ಸತ್ಯ	5
ಸಹಕಾರ ನಗರದಲ್ಲಿ ಬೀಚಿ ಉತ್ಸವ	ಸುಕೇಶವ	8
ಚಳಿಯೋ ಚಳಿ ಚಳಿರಪ್ಪೋ ಚಳಿ	ವಸುಮತಿ ಉಡುಪ	9
ಕ್ಷುರಸ್ಯ ಧಾರಾ	ಶಿವಕುಮಾರ್	12
ಚಳಿ ಸ್ವಾರಸ್ಯ	ಎಚ್. ಗೋಪಾಲಕೃಷ್ಣ	16
ಚಳಿಗಾಲವಯ್ಯ ಚಳಿಗಾಲ	ನಳಿನಿ. ಟಿ. ಭೀಮಪ್ಪ	18
ಮಲೆನಾಡಿನ ಛಳಿಗಾಲ	ಬೇಲೂರು ರಾಮಮೂರ್ತಿ	20
ಚಳಿರಾಯನದ ಕಂಡು	ಕವಿತ ಹೆಗಡೆ ಅಭಯಂ	23
ತುಂತುರು	ದಂನಆ	26
ಚಳಿಯ ಹಾಡು ಪಾಡು	ಕಂ.ಕ. ಮೂರ್ತಿ	27
ಚಳಿಗಾಲದ ಚರುಮುರಿ	ಇ. ಆರ್ ರಾಮಚಂದ್ರನ್	29
ಆಹಾ ಥಂಡಿ ಹಾ ಥಂಡಿ	ಆರ್ನ	32
ಯಮ ನನ್ನ ಬೆನ್ನು	ಪ್ರಕಾಶ್ ಶೆಟ್ಟಿ	34
ಚೆಂಗನ ಭಯೋತ್ಪಾದನೆ	ಜಿ.ವಿ. ಅರುಣ	36
ಸವಿ ನೆನಪಿನ ಸಂಗಡ	ಮಂಗಳ ಎಂ. ನಾಡಿಗ್	38

ವ್ಯಂಗ್ಯ ಚಿತ್ರಗಳು:

ಆದರ್ಶ ಪೈ, ರಘುಪತಿ ಶೃಂಗೇರಿ

ಹಾಗೂ ಇಂಟರ್ನೆಟ್ ಕೃಪೆ

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ ಮಲ್ಲೇಶ್ವರಂ, ಬೆಂಗಳೂರು – 560 003, email: koravanjiaparanji@gmail.com ಮೊಬೈಲ್:9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488. email:belururamamurthy@gmail.com

For Online payment of ubscription: Name : KORAVANJI APARANJI TRUST

Current Account No.: 109804180000056, IFS Code : SVCB0000098

SVC Co-operative Bank Ltd., Branch: Malleshwaram

Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, ಸಹಕಾರನಗರ

ಅಪರಂಜಿ ಕಿಡಿ

● ಪ್ರಕಾಶ್

ನಮ್ಮ ಜನ ಚಳಿ, ನಡುಕ ಅಂತ ಒದ್ದಾಡೋದು ನೋಡಿ
ಅಪರಂಜಿ ಹೀಗಂದಳಂತೆ !

ಸಿಯಾಚಿನ್ ಸೈನಿಕ : ಮೈನಸ್ 20 ಡಿಗ್ರಿ ದೆಹಲಿ : 3 ಡಿಗ್ರಿ
ಬೆಂಗಳೂರು : 20 ಡಿಗ್ರಿ ! ಸಾಪೇಕ್ಷ ವಾದ ಅಂದರೆ ಇದೇ!!

****

49 ಕೆಜಿ ಮೀರಾ ಬಾಯಿ 200 ಕೆಜಿ ಎತ್ತಿದ ಸಾಹಸಕ್ಕೆ
ಅಪರಂಜಿ ಸಂತಸ ಪಟ್ಟಳಂತೆ !

****

ಕ್ಲೀನ್ ಸ್ವೀಪ್ ನತ್ತ ಬಾಂಗ್ಲಾ ಚಿತ್ತ !!
ಕ್ರಿಕೆಟ್ ಸುದ್ದಿ ಆಹ ಎಂಥ ಶೀರ್ಷಿಕೆ !

****

ಕೇಂದ್ರ ಚುನಾವಣಾ ಆಯೋಗ ನಿರ್ದೇಶನ : ತವರಿನಿಂದ
ಅಧಿಕಾರಿಗಳ ವರ್ಗ. ಪತ್ರಿಕೆ ಅಯ್ಯೋ, ಇದರಿಂದ ಸಮಸ್ಯೆ
ಹರಡಿದಂತೆ ಆಗುವುದಿಲ್ಲವೇ ?!

****

ಕತಾರ್ನಲ್ಲಿ ಆಟದ ವೇಗಗಳನ್ನು ನೋಡಿ ನಲಿಯುವರೆಲ್ಲ
ಕ್ರಿಕೆಟ್ಟಿಗೆ ಮರಳುವರೋ, ಅಂತ ಅಪರಂಜಿ ಆತಂಕ ಪಟ್ಟಳಂತೆ !!

****

ಕ್ಯಾಮೆರಾ ಕಂಡು ಓಡಿದ ಅರ್ ಟಿ ಓ ಸಿಬ್ಬಂದಿ ಪತ್ರಿಕೆ
ಫೋಟೋ ತೆಗೆಸಿಕೊಳ್ಳಲು ನಾಚಿಕೆ, ಪಾಪ !!

****

ವಿಜ್ಞಾನಿಗಳೇ ಪವಾಡ ಸೃಷ್ಟಿಸುವಂತೆ ಹೇಳಿದರೆ ಹೇಗೆ ?!
ದಿನ ಪತ್ರಿಕೆಯಲ್ಲಿ ಹೇಳಿಕೆ ಏಕೋ ಡಾ॥ ನರಸಿಂಹಯ್ಯನವರ
ನೆನೆಪು ಬರುತ್ತಿದೆ. !!

****

■

"ನಮ್ಮ ನಿಮ್ಮಲ್ಲಿ"

● ಎಂ. ಶಿವಕುಮಾರ್

ಈ ಸಂಚಿಕೆ ನಿಮ್ಮ ಕೈ ಸೇರುವ ಹೊತ್ತಿಗೆ ಹೊಸ ವರ್ಷ ಪ್ರಾರಂಭವಾಗಿರುತ್ತದೆ. " ಹೋದೆಯಾ ..... ಅಂದರೆ ಬಂದೇ ಗವಾಕ್ಷೀಲಿ" ಅಂದಂತೆ ಕರೋನಾದ ಛಾಯೆ ನಮ್ಮನ್ನೆಲ್ಲಾ ಮಸುಕುವಂತೆಯೇ ಕಾಣುತ್ತಿದೆ. ಹಾಗಾಗದಿರಲಪ್ಪಾ, ಹೊಸವರ್ಷದಲ್ಲಿ ಎಲ್ಲಗೂ ಆರೋಗ್ಯದಿಂದ ಸಂತಸದಿಂದ ಇರುವಂತಾಗಲಿ ಎಂದು ಅಪರಂಜಿ ಹಾರೈಸುತ್ತಾಳೆ.

ಅಪರಂಜಿಯ ಪ್ರಾರಂಭದಲ್ಲಿ (1983ರಲ್ಲಿ) ಅಕ್ಷರಜೋಡಣೆ ಅಚ್ಚುಮೊಳೆಗಳಿಂದ ನಡೆಯುತ್ತಿತ್ತು. ಹತ್ತು ವರುಷಗಳ ನಂತರ ನಮ್ಮ ಮುದ್ರಣ ಆಫ್‌ಸೆಟ್‌ಗೆ ಬದಲಾದಾಗ ಅಕ್ಷರಜೋಡಣೆಗೆ ಸಂಸ್ಥೆಯೊಂದನ್ನು ಹುಡುಕುವ ಅಗತ್ಯ ಒದಗಿಬಂತು. ಆಗ ನಮ್ಮ ಮುದ್ರಕ ನಾಥ್ ನನಗೆ ಒಮೇಗಾ ಲೇಸರ್‌ಟೆಕ್‌ನ ರವೀಂದ್ರರನ್ನು ಸಂಪರ್ಕಿಸಲು ಸಲಹೆ ಮಾಡಿದರು. ಸರಿ, ಡಿಟಿಪಿ ವ್ಯವಸ್ಥೆ ಮಾಡುವ ಸಲುವಾಗಿ ಶಾಂತಿನಗರದಲ್ಲಿದ್ದ ಲೇಸರ್‌ಟೆಕ್ ಆಫೀಸಿಗೆ ಹೋದೆ. ಅಲ್ಲಿ ರವಿ ಮತ್ತು ಆಚಾರ್ ಎಂಬ ಇಬ್ಬರು ಉತ್ಸಾಹೀ ತರುಣರು ನನ್ನನ್ನು ಇದಿರುಗೊಂಡರು. ಅಂದು ರವೀಂದ್ರರೊಂದಿಗೆ ಪ್ರಾರಂಭವಾದ ನಮ್ಮ ವೃತ್ತಿಪರ ಬಾಂಧವ್ಯ ಕ್ರಮೇಣ ಸ್ನೇಹಕ್ಕೆ ತಿರುಗಿದ್ದು ಅತೀ ಸಹಜ ಅನ್ನಿಸುತ್ತದೆ. ಇದರಲ್ಲಿ ಆಶ್ಚರ್ಯವೇನಿಲ್ಲ ಬಿಡಿ. ನನ್ನ ಸುದೀರ್ಘ ಜೀವಯಾತ್ರೆಯಲ್ಲಿ ನಾನು ಭೇಟಿಮಾಡಿದ ಅನೇಕ ಪರಿಚಿತರು, ಗೆಳೆಯರಲ್ಲಿ ಅತ್ಯಂತ ಸಾತ್ವಿಕ, ಸದಾನಗುಮುಖದ ವ್ಯಕ್ತಿ ರವೀಂದ್ರರೆಂದರೆ ಅದು ಖಂಡಿತ ಉತ್ಪ್ರೇಕ್ಷೆಯ ಮಾತಲ್ಲ.

ಅಪರಂಜಿಯ ಸಲುವಾಗಿ ಅವರೊಂದಿಗಿನ ನನ್ನ ಸಂಪರ್ಕ ತಿಂಗಳಲ್ಲಿ ಹಲವಾರು ಬಾರಿ ನಡೆಯಲೇ ಬೇಕಾಗಿತ್ತು. ಪತ್ರಿಕೆ ಸಮಯಕ್ಕೆ ಸರಿಯಾಗಿ ಮುದ್ರಣಕ್ಕೆ ಸಿದ್ಧವಾಗಬೇಕಾದ್ದರಿಂದ ನಾನು ಡಿಟಿಪಿ ಕೆಲಸದ ಮೇಲೆ ಒತ್ತಡ ಹಾಕಬೇಕಾದದ್ದೂ ಅನಿವಾರ್ಯವೇ ಆಗಿತ್ತು. ಈ ಒತ್ತಡವನ್ನೆಲ್ಲಾ ನಗು ನಗುತ್ತಲೇ ಸಹಿಸಿಕೊಂಡು ದಕ್ಷತೆಯಿಂದ ಕೆಲಸ ನೆರವೇರಿಸುತ್ತಿದ್ದದ್ದು ರವೀಂದ್ರರ ಹೊಣೆಗಾರಿಕೆಯ ನಿದರ್ಶನ.

ರವೀಂದ್ರರ ಹಾಸ್ಯಪ್ರಜ್ಞೆ ಬಹಳ ನವಿರು. ಹಾಗಾಗಿ ಸಂಶಯ ಬಂದಾಗಲೆಲ್ಲಾ, ದ್ವಂದ್ವ ಇದಿರಾದಾಗಲೆಲ್ಲಾ ನಾನು ನಮ್ಮ ಲೇಖನಗಳ ಬಗ್ಗೆ ಅವರ ಅಭಿಪ್ರಾಯವನ್ನು ಪಡೆದೇ ಮುಂದುವರಿದಿದ್ದೇನೆ. ಒಮ್ಮೆ ತುಂಬಾ ಚೆನ್ನಾಗಿದೆ ಅಂತ ಅನಿಸಿದ್ದ ಸುಭಾಷಿತಗಳ ಗೊಂಚಲೊಂದನ್ನು ಮುದ್ರಣಕ್ಕೆ ಕಳಿಸಿದ್ದೆ. ರವಿ ಫೋನ್ ಮಾಡಿ ಅಪರಂಜಿಯ ಪ್ರಬುದ್ಧ, ಸದಭಿರುಚಿಯ ಮಾನದಂಡಕ್ಕೆ ಇವು ಸರಿಬರಲಾರವು ಎಂಬ ಸಂಶಯವನ್ನು ವ್ಯಕ್ತಪಡಿಸಿದ ನಂತರ ಅವನ್ನು ಕೈಬಿಟ್ಟೆವು.

ಸತತವಾಗಿ ಇಪ್ಪತ್ತೇಳು ವರ್ಷಗಳ ಸೇವೆಯ ನಂತರ ಈಗ ಕಾರಣಾಂತರದಿಂದ ಡಿಟಿಪಿಯ ಕೆಲಸವನ್ನು ಇನ್ನೊಬ್ಬ ರವಿ (ಶ್ರೀ ರವಿಕುಮಾರ್) ಅವರಿಗೆ ವಹಿಸಬೇಕಾಗಿದೆ. ಹಾಗಾಗಿ ಅಪರಂಜಿ ಬಳಗ ರವೀಂದ್ರರ ಕಾರ್ಯ ದಕ್ಷತೆ, ಅಪರಂಜಿಯ ಬಗ್ಗೆ ಇಟ್ಟಿರುವ ಅಭಿಮಾನ ಇವುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ, ಭಾರವಾದ ಹೃದಯದಿಂದಲೇ ರವೀಂದ್ರರಿಗೆ ವಿದಾಯ ಹೇಳುತ್ತಿದ್ದೇವೆ. ಸಂತಸದ ಸಂಗತಿಯೆಂದರೆ

ರವೀಂದ್ರರು ಇನ್ನು ಮುಂದೆಯೂ ನಮ್ಮ ಟ್ರಸ್ಟಿಯಾಗಿ ಮುಂದುವರಿಯುತ್ತಿದ್ದು ಅವರ ಅಮೂಲ್ಯ ಸಲಹೆ ಮಾರ್ಗದರ್ಶ ಅಪರಂಜಿಗೆ ಎಂದಿನಂತೆ ದೊರಕಲಿದೆ. ಡಿಜಿಟಲ್ ಆರ್ಟ್ ಅನ್ನು ಅಭ್ಯಸಿಸುತ್ತಿರುವ ರವೀಂದ್ರರಿಂದ , ಅಪರಂಜಿಗೆ ಡಿಜಿಟಲ್ ವ್ಯಂಗ್ಯಚಿತ್ರಗಳ ಮಹಾಪೂರ ಹರಿದುಬರಲಿ ಎಂದು ಆಶಿಸುವೆ.

ನಿನ್ನೆ ಸಂಜೆ ನಾನು ರವೀಂದ್ರರನ್ನು ಭೇಟಿಮಾಡಲು ಅವರ ಮನೆಗೆ ಹೋಗಿದ್ದೆ. ರವೀಂದ್ರ ಮತ್ತು ಲತಾ ದಂಪತಿಗಳು ನನ್ನನ್ನು ಬಹು ಆದರದಿಂದ ಬರಮಾಡಿಕೊಂಡರು. ಕನ್ನಡ ಅಧ್ಯಾಪಕಿಯಾಗಿರುವ ಶ್ರೀಮತಿ ಲತಾರವರು ಈಗಿನ ಪಠ್ಯಪುಸ್ತಕಗಳಲ್ಲಿ ಆಯ್ಕೆಯಾಗಿರುವ ಲೇಖನಗಳ ಬಗ್ಗೆ ತಮ್ಮ ಮುಕ್ತ ಅಭಿಪ್ರಾಯವನ್ನು ಹಂಚಿಕೊಂಡರು. ಬಹು ಸ್ವಾರಸ್ಯಕರವಾದ ಮಾತು, ಸುಸಂಸ್ಕೃತ, ಸಜ್ಜನಿಕೆಯೇ ಘನೀಕರಿಸಿದಂತಹ ದಂಪತಿಗಳೊಂದಿಗಿದ್ದದ್ದರಿಂದ ಕಾಲ ಸರಿದದ್ದೆ ತಿಳಿಯಲಿಲ್ಲ. ಬದಲಾಗುವುದೇ ಜೀವನದ ನಿಯಮ. ಇದೊಂದು ಅಂತಹ ಮಜಲು ಎಂದುಕೊಳ್ಳುತ್ತಾ ಮನೆಗೆ ಹಿಂತಿರುಗಿದೆ.

■



ಸಂಪಾದಕರೊಡನೆ ಶ್ರೀ ರವೀಂದ್ರರಾವ್



ಅದೆಂಥಾ ಹ್ಯಾಪಿ ನ್ಯೂ ಇಯರ್ ರೀ.....?

● ಸಿ.ಆರ್.ಸತ್ಯ

ಜನವರಿ ಒಂದನೆ ತಾರೀಖು ನನ್ನ ಹಿರಿಯ ಸ್ನೇಹಿತರಾದ ಶ್ರೀಪಾದರಾಯರಿಗೆ– ಈಗ 80 ವರುಷ ವಯಸ್ಸು– ಹೊಸ ವರುಷದ ಶುಭಾಶಯಗಳನ್ನು ತಿಳಿಸೋಕ್ಕೆ ಅಂತ ಅವರ ಮನೆಗೆ ಹೋದೆ. "ರಾಯರೇ, ಹ್ಯಾಪಿ ನ್ಯೂ ಇಯರ್" ಅಂತ ಹೇಳಿದೆ. ಅದಕ್ಕೆ ಅವರು ನನಗೆ ಝಾಡಿಸಿದ್ದು ಹೀಗೆ:

"ಅದೆಂತಾ ಹ್ಯಾಪಿ ನ್ಯೂ ಇಯರ್ ಕಣಯ್ಯಾ? ನನಗೆ ಯಾವ ಹ್ಯಾಪಿನೆಸ್ ಕೊಡುತ್ತೆ ಈ ವರುಷ?" ಅಂತ ಕೋಪದಲ್ಲೇ ಕೇಳಿದರು.

" ಹಾಗೆಂದರೆ ಹೇಗೆ ರಾಯರೇ? ಹೊಸ ವರುಷ ಏನಾದರೂ ಸಂತೋಷ ಕೊಡೋದಿಲ್ಲವೆ?" ಅಂತ ಕೇಳಿದೆ. "ಸಂತೋಷಾನೇ?, ಏನು ಸಂತೋಷಾ? ನಿನಗೇನಾದರು ಆರ್ಥರೈಟಿಸ್ ಇದೆಯೇನಯ್ಯಾ?"

"ಇನ್ನೂ ಬಂದಿಲ್ಲ ರಾಯರೆ" ಅಂತ ಅಂದೆ.

"ಬಂದಾಗ ಗೊತ್ತಾಗುತ್ತೆ. ನನಗೆ ಎಡಗಾಲಿನ ಮಂಡಿಗೆ ಹೋದ ವರುಷ ಹೊಸ ಕ್ಯಾಪ್ ಹಾಕಿದರು. ಈಗ ಇನ್ನೊಂದು ಮಂಡಿಗೆ ಜನವರಿನಲ್ಲಿ ಹಾಕ್ತಾರಂತೆ. ಈ ನೋವಿನಲ್ಲಿ ನನಗೆ ಹೋದ ವರುಷಾನೂ ಒಂದೇ, ಹೊಸ ವರುಷಾನೂ ಒಂದೇ. ಇನ್ನು ವರ್ಷಪೂರ್ತಿ ನನಗೆ ಕುಂಟೋ ಜೀವನವೇ ಕಾದಿದೆ. ಅಂದ ಹಾಗೆ, ನಿನಗೆ ಎಷ್ಟು ಹಲ್ಲುಗಳು ಬಿದ್ದಿವೆ? " ಅಂತ ಕೇಳಿದರು.

"ಇನ್ನೂ ಬಿದ್ದಿಲ್ಲ ರಾಯರೆ. ಒಂದೆರಡು ಹಲ್ಲುಗಳು ಅಲ್ಲಾಡುತ್ತಾ ಇವೆ ಅಷ್ಟೆ" ಅಂದೆ.

"ಅಲ್ಲಾಡಲಿ, ಚೆನ್ನಾಗಿ ಆಲ್ಲಾಡಿ ಬೀಳಲಿ. ಆಗ ಡೆಂಟಿಸ್ಟ್ ಹತ್ತಿರ ಹೋದಾಗ ನಿನಗೂ ಗೊತ್ತಾಗುತ್ತೆ–ನೋವು ಅಂದರೆ ಏನೂ ಅಂತ. ನನಗೆ ಈ ತಿಂಗಳು ಕೊನೆಯಲ್ಲಿ ಅವನ ಹತ್ತಿರ ಅಪಾಯಿಂಟ್ಮೆಂಟ್ ಇದೆ. ಗಟ್ಟಿ ಮಣ್ಣಿನಲ್ಲಿ ಗಿಡಕ್ಕೆ ಪಾತಿ ಮಾಡೋಕ್ಕೆ ಅಗೆಯೋ ಹಾಗೆ ಇನ್ನೊಂದು ಎರಡು ಹಲ್ಲುಗಳಿಗೆ ರೂಟ್ ಕೆನಾಲ್ ಟ್ರೀಟ್ಮೆಂಟ್ ಬೇರೇ ಮಾಡ್ತಾನಂತೆ. ಇವನ್ನೆಲ್ಲಾ ಫೆಬ್ರವರಿ ತಿಂಗಳಲ್ಲಿ ಸಹಿಸಿಕೊಂಡಾದ ಮೇಲೆ ಮಾರ್ಚ್ ತಿಂಗಳಲ್ಲಿ ನನಗೆ ಏನು ಕಾದಿದೆ ಗೊತ್ತೇನಯ್ಯಾ ನಿನಗೆ?" ಅಂತ ಕೇಳಿದರು.

"ಇಲ್ಲ ರಾಯರೇ" ಅಂದೆ.

"ನನ್ನ ಮಗ ಆಗಲೇ ನನಗೆ ಎರಡು ಕಣ್ಣುಗಳಿಗೂ ಕ್ಯಾಟರಾಕ್ಟ್ ಆಪರೇಶನ್ ಮಾಡಿಸೋದಕ್ಕೆ ರೆಡಿಯಾಗ್ತಿದಾನೆ. ಆಮೇಲೆ ಹೊಸ ಕನ್ನಡಕ ಕೊಡ್ತಾರಂತೆ. ಅಲ್ಲಿ ತನಕ ಅಂಧಕಾರದಲ್ಲೇ ಜೀವನ ಸಾಗಿಸಬೇಕು. ಕಣ್ಣು ಕಾಣಿಸದೆ ನೀನು ಯಾವತ್ತಾದರೂ ಓಡಾಡಿದೆಯೇನು?"

"ಇಲ್ಲ ರಾಯರೆ. ಯಾವಾಗಲಾದರೂ ಸಿನಿಮಾ ಥಿಯೇಟರ್‌ನಲ್ಲಿ ಸೀಟ್ ನಂಬರ್ ಹುಡುಕೋವಾಗ ಕತ್ತಲಿನಲ್ಲಿ ಓಡಾಡಿದ್ದು ಅಷ್ಟೆ" ಅಂತ ಅಂದೆ.

" ನಿನಗೆ ಇನ್ನೂ ಜೀವನದ ಅನುಭವಗಳು ಆಗಿಲ್ಲ. ಹುಡುಗು–ಹುಡುಗು.

ಏಪ್ರಿಲ್ ನಲ್ಲಿ ನನ್ನ ಫ್ಯಾಮಿಲಿ ಡಾಕ್ಟರ್ ಪೈಲ್ಸ್ ಆಪರೇಶನ್ ಕಡ್ಡಾಯವಾಗಿ ಮಾಡಿಸ್ಕೊಳ್ಳಿ. ಇಲ್ಲದಿದ್ದರೆ ನಿಮಗೆ ಕೂತು ಏಳೋಕ್ಕೆ ತುಂಬಾ ಕಷ್ಟ ಆಗುತ್ತೆ ಅಂತಿದ್ದಾರೆ. ನನ್ನ ಒಪ್ಪಿಗೇನೂ ಕೇಳದೆ ನನ್ನ ಮಗ ಅದಕ್ಕೆ ಒಪ್ಪಿಕೊಂಡಿದ್ದಾನೆ. ಅವನಿಗೆ ಆಗಲೀ, ನಿನಗೇ ಆಗಲಿ, ಪೈಲ್ಸ್ ಅಂದರೆ ಏನೂ ಅಂತ,

"ಏನಾದರೂ ಐಡಿಯಾ ಇದೆಯೇನಯ್ಯಾ?"

"ಇಲ್ಲಾ ರಾಯರೇ. ಇನ್ನೂ ಅದು ಬಂದಿಲ್ಲ" ಅಂದೆ.

"ಅದು ಬರಲಿ, ಗೊತ್ತಾಗುತ್ತೆ. ಬರೀ ಕೂತು ಏಳೋಕ್ಕೆ ಆಗೋ ಕಷ್ಟ ಮಾತ್ರ ಅಲ್ಲ ಮಲಗಿರೋದಕ್ಕೂ ಹಿಂಸೆ ಆಗ್ತಿರುತ್ತೆ. ಆ ಸಮಯದಲ್ಲಿ ನೀನೇನಾದರೂ ನಮ್ಮ ಮನೆಗೆ ಬಂದು ಹೇಗಿದೀರಾ ರಾಯರೇ ಅಂತ ವಿಚಾರಿಸಿದರೆ ನಾನು ಸುಮ್ಮನೆ ಇರೋಲ್ಲ. ಬೈ ದ ವೇ, ಮೇ ತಿಂಗಳಲ್ಲಿ ನನ್ನ 81 ನೇ ವರುಷದ ಹುಟ್ಟಿದ ಹಬ್ಬ ಬರುತ್ತೆ ಕಣಯ್ಯ" ಅಂತ ಜ್ಞಾಪಿಸಿಕೊಂಡರು.

"ಬಹಳ ಸಂತೋಷ ರಾಯರೇ! ಇತ್ತೀಚೆಗೆ 80 ವರುಷ ದಾಟಿದವರನ್ನು ರಸ್ತೇನಲ್ಲಿ ನೋಡೋದೆ ಅಪರೂಪವಾಗಿದೆ. ನೀವು ಚಟುವಟಿಕೆಯಿಂದ ಓಡಾಡೋದನ್ನು ನೋಡೋದಕ್ಕೆ ಕಾಯ್ತಾ ಇರ್ತೀನಿ" ಅಂತ ಅಂದೆ.

"ನನ್ನನ್ನು ನೋಡೋದಕ್ಕೆ ನೀನೊಬ್ಬ ಬಾಕಿ ಅಂತ ಅಂದುಕೊಂಡಿದ್ದೀಯಾ?. ನನ್ನ ಮಗ ನನಗೆ ಬರ್ತ್ ಡೇ ಪ್ರೆಸೆಂಟ್ ಅಂತ ನನಗೆ ಒಂದು ವಾಕರ್ ಕೊಡ್ತಾನಂತೆ. ನನಗೆ ಈಚೀಚೆಗೆ ನಡೆದರೆ ಬ್ಯಾಲೆನ್ಸ್ ಇಲ್ಲವಂತೆ ಅದಕ್ಕೆ. ಅದನ್ನು ಹಿಡಿದುಕೊಂಡು ನಾನು ವಾಕ್ ಮಾಡಿದರೆ, ನಾನು ಸರಿಯಾಗಿ undefined ನಡೀತೀನೋ ಅಥವಾ ನಮ್ಮ ಕಾರ್ಪೋರೇಶನ್ ರಸ್ತೇಲಿ ಕೆಳಕ್ಕೆ ಉರುಳಿಕೊಳ್ತೀನೋ ಅಂತ ನೋಡೋದಕ್ಕೆ ನೀನು ಬರ್ತೀಯಾ?"

"ಇದೆಲ್ಲಾ ವಯಸ್ಸಾದ ಮೇಲೆ ಆಗೋದೇ ಅಲ್ಲವೆ ರಾಯರೆ? ಅದ್ಯಾಕೆ ಹೊಸ ವರುಷದ ಮೇಲೆ ಕೋಪ ಮಾಡ್ಕೋತೀರಿ?" ಅಂತ ಸಮಾಧಾನ ಹೇಳೋಕ್ಕೆ ಹೋದೆ.

" ಸುಮ್ನಿರಯ್ಯ. ಇನ್ನು ಈ ವರುಷದ ಹಬ್ಬದ ಸಾಲು ಬರಲಿ, ನನ್ನ ಹೆಂಡತಿ, ಸೊಸೆ ಇಬ್ಬರೂ ಸೇರಿಕೊಂಡು ಮನಸ್ಸಿಗೆ ತೋಚಿದ ಸಿಹಿ ತಿಂಡಿಗಳನ್ನು ಮಾಡಿ ನನಗೆ ತಿನ್ನಿ, ತಿನ್ನಿ ಅಂತ ಬಲವಂತ ಮಾಡ್ತಾರೆ–"

"ಸಂತೋಷದಿಂದ ತಿನ್ನಿ ರಾಯರೇ"

"ಸಂತೋಷದಿಂದಲೆ?..... ಏನಯ್ಯಾ ನೀನು ಹೇಳೋದು? ಮೊನ್ನೆ ತಾನೇ, ಡಾಕ್ಟರು ನನಗೆ ಸಕ್ಕರೆ ಖಾಯಿಲೆ ವಕ್ಕರಿಸಿದೆ, ಈ ವರುಷದಿಂದ ಇನ್ಸುಲಿನ್ ಟ್ರೀಟ್ಮೆಂಟ್ ಶುರು ಮಾಡ್ತೀನಿ ಅಂತ ನಗು ನಗುತ್ತಾ ಹೇಳಿದ್ದು ಇನ್ನೂ ಕಿವಿಯಲ್ಲಿ ಗುಂಗರಿಸ್ತಾ ಇದೆ. ಡಾಕ್ಟರ್ ಗೆ ಸಂತೋಷ ಆಗುತ್ತೆ ಅಷ್ಟೆ.. ಇನ್ನಷ್ಟು ಕನ್ಸಲ್ಟೇಶನ್ ಫೀಸ್ ಸಿಗುತ್ತೆ ಅಂತ."

"ಅಂದ ಹಾಗೆ, ಈ ವರುಷ ರಾಮೋತ್ಸವದ ಸಂಗೀತ ಕಛೇರಿಗೆ ಯಥಾ ಪ್ರಕಾರ ಹೋಗ್ತೀರೇನು?"

"ಇನ್ನು ಮೇಲೆ ಇನ್ಯಾವ ಸಂಗೀತಾನ ನಾನು ಕೇಳೋಕ್ಕೆ ಆಗುತ್ತೆ ಅಂತ

ಅಂದುಕೊಂಡಿದ್ದೀಯಾ? ಈಗ ನಾನು ಹಾಕ್ಕೊಂಡಿರೋ ಹಿಯರಿಂಗ್ ಏಡ್ಸ್‌ನ ಬದಲಾಯಿಸಬೇಕಂತೆ. ಮುಂಚಿನ ಹಾಗೆ ಈಗ ಸರಿಯಾಗಿ ಕಿವಿ ಕೇಳಿಸೋದಿಲ್ಲ. ಬರೀ ಮೃದಂಗ ಮಾತ್ರ ಕೇಳುತ್ತೆ. ಹೊಸ ವರುಷಕ್ಕೆ ಇದೊಂದು ದೊಡ್ಡ ಖರ್ಚು ಕಾದಿದೆ"

"ಹೋಗಲಿ ಬಿಡಿ ರಾಯರೆ. ನಿಮ್ಮ ಮಾಮೂಲಿ ಇಸ್ಪೀಟ್ ಸ್ನೇಹಿತರ ಜೊತೆ ಸೇರ್ಕೊಂಡು ರಮ್ಮಿ ಆಡ್ಕೊಂಡು ಇರಿ ಅಷ್ಟೆ."

"ಇನ್ನಾವ ಇಸ್ಪೀಟಯ್ಯ? ಎಲೆಗಳನ್ನು ಕೈನಲ್ಲಿ ಹಿಡಿದುಕೊಳ್ಳೋ ಕಾಲ ಎಲ್ಲಾ ಮುಗೀತು. ಈಗ ಕೈ ತುಂಬಾ ನಡುಗುತ್ತೆ, ನೋಡಿಲ್ವಾ?"

"ಒಟ್ಟಿನಲ್ಲಿ ಈ ವರುಷ ನೀವು ಚೆನ್ನಾಗಿ ಸಂತೋಷದಿಂದ ಇರಿ ಅನ್ನುವ ಆಸೆಯಿಂದ ನಿಮಗೆ ಹೊಸ ವರುಷದ ಶುಭಾಶಯಗಳನ್ನು ಹೇಳಿದೆ ರಾಯರೆ. ಅಷ್ಟೆ"

"ಒಳ್ಳೇದು ಕಣಯ್ಯ. ಆದರೆ ಒಂದು ವಿಷಯ. ಹೊಸ ವರುಷದಲ್ಲಿ ನಾವೆಲ್ಲಾ ಬದುಕಿರ್ತಿವೇನಯ್ಯಾ?"

"ಅಯ್ಯೋ! ಹಾಗೆಂದರೇನು ರಾಯರೇ?" ಅಂತ ಗಾಭರಿಯಿಂದಲೇ ಕೇಳಿದೆ.

"ಆ ರಷ್ಯಾದ ಹುಚ್ಚ, ಪ್ಯೂಟಿನ್, ಅಣು ಬಾಂಬ್ ದಾಳಿ ಮಾಡ್ತಾನಂತೆ. ನಾವೆಲ್ಲಾ ಜೀವಂತವಾಗಿ ಇರುತ್ತೀವೋ ಅಥವಾ ದೇವರ ಸನ್ನಿಧಿಯಲ್ಲಿ ಇರುತ್ತೀವೋ ಅಂತ ನಿನಗೇನಾದರೂ ಐಡಿಯಾ ಇದ್ಯೇ?. ನಿನ್ನ ತಲೇಲಿ ಇಂತಹ ಯೋಚನೆಗಳಿಗೆ ಜಾಗ ಎಲ್ಲಿದೆ ಬಿಡು.ಇನ್ನು ಮೇಲಿಂದಾದರೂ ಕಂಡ ಕಂಡವರಿಗೆ ಹ್ಯಾಪಿ ನ್ಯೂ ಇಯರ್ ಅಂತ ಹೇಳುವುದಕ್ಕೆ ಹೋಗದೆ ಗಂಭೀರವಾಗಿ ಇರು" ಅಂತ ಹೇಳಿ ಸುಮ್ಮನಾದರು.

ನಾನೂ ಸುಮ್ಮನಾದೆ.

■



ಸಹಕಾರ ನಗರದಲ್ಲಿ ಬೀಚಿ ಅವರ ನೆನಪಿನ ನಗುವಿನ ಉತ್ಸವ

● ಸುಕೇಶವ

ಇದೇ ಡಿಸೆಂಬರ್ 18ರಂದು ಸಹಕಾರ ನಗರದಲ್ಲಿ ಬೀಚಿ ಟ್ರಸ್ಟ್ ವತಿಯಿಂದ ನಗುವಿನ ಉತ್ಸವ ಕಾರ್ಯಕ್ರಮ ನಡೆಯಿತು. ಕೊರವಂಜಿ ಅಪರಂಜಿ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟ್ ಉಲ್ಲಾಸ್ ರಾಯಸಂ ಅವರು ಅವರ ತಾತ ಬೀಚಿ ಅವರ ನೆನಪಿನ ಉತ್ಸವವನ್ನು ಬಹಳ ಚನ್ನಾಗಿ ಆಯೋಜಿಸಿದ್ದರು. ಸುಮಾರು 5000ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಹಾಸ್ಯಪ್ರಿಯರು ಸೇರಿದ್ದ ವೇದಿಕೆಯಲ್ಲಿ ಹಾಸ್ಯ ದಿಗ್ಗಜರಾದ ಶ್ರೀ ಗಂಗಾವತಿ ಪ್ರಾಣೇಶ್, ಶ್ರೀ ಬಸವರಾಜ ಮಹಾಮನ, ಶ್ರೀ ಡುಂಡಿರಾಜ್, ಶ್ರೀ ವೈ.ವಿ.ಗುಂಡೂರಾವ್, ಶ್ರೀ ಬೇಲೂರು ರಾಮಮೂರ್ತಿ ಮುಂತಾದವರು ಬೀಚಿಯ ಒಂದೊಂದು ವಿಶೇಷತೆಯನ್ನು ಕುರಿತು ಮಾತಾಡಿ ಸಭಿಕರನ್ನು ರಂಜಿಸಿದರು. ಅಣುಕು ರಾಮನಾಥ್ ಅವರು ಚುರುಕು ನಿರೂಪಣೆಯ ಜೊತೆಗೆ ನವಿರಾದ ಹಾಸ್ಯದ ತುಣುಕುಗಳು ಸಭಿಕರನ್ನು ಮನಬಿಚ್ಚಿ ನಗುವಂತೆ ಮಾಡಿದವು. ಕಡೆಯಲ್ಲಿ ಶ್ರೀ ಬಾಬು ಹಿರಣ್ಣಯ್ಯ ತಂಡದವರಿಂದ ಬೀಚಿ ರಸಾಯನ ನಾಟಕ ನಡೆಯಿತು.

ಇದೇ ಸಂದರ್ಭದಲ್ಲಿ ಅಪರಂಜಿಯ ಸಂಪಾದಕರಾದ ಶ್ರೀ ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು. ಜೊತೆಗೆ ಸಹಕಾರ ನಗರದ ಅನೇಕ ಗಣ್ಯರನ್ನೂ ಗೌರವಿಸಲಾಯಿತು. ಒಟ್ಟಿನಲ್ಲಿ ಇದೊಂದು ಸದಭಿರುಚಿಯ ಕಾರ್ಯಕ್ರಮವಾಗಿ ಹೊರಹೊಮ್ಮಿ ಪ್ರೇಕ್ಷಕರು ಆನಂದಿಸಿದರು.



ಚಳಿಯೋಚಳಿ.., ಚಳಿರಪ್ಪೋಚಳಿ..

● ವಸುಮತಿ ಉಡುಪ

ಮಲೆನಾಡಿನ ಹಳ್ಳಿಯಲ್ಲಿ ಹುಟ್ಟಿ ಬೆಳೆದವಳಿಗೆ ಚಳಿಗಾಲದೊಂದಿಗೆ ತಳುಕು ಹಾಕಿಕೊಂಡ ನೆನಪುಗಳು ಹತ್ತು ಹಲವು. ಮಳೆಗಾಲದ ಅಬ್ಬರ ಮುಗಿದು ಚಳಿರಾಯ ಕಾಲಿಡುವುದರೊಂದಿಗೆ ಅಡಿಕೆಕೊಯ್ಲಿನ ಭರಾಟೆ ಶುರು. ಹಗಲಿನ ಆಳುಕೆಲಸ ಮುಗಿಸಿ ಬಿಡಾರಕ್ಕೆ ಹೋಗಿ ಉಂಡು ಬರುವ ಆಳುಗಳು ಮೂರುಸಂಜೆಯಾಗಿ ಕತ್ತಲು ಮುಸುಕುತ್ತಿದ್ದಂತೆ ಅಡಿಕೆಸುಲಿತಕ್ಕೆ ಹಾಜರು. ಕೊಳಗಕ್ಕಿಂತಿಷ್ಟು' ಎಂದು ಜಮಾವಣೆಯಾಗುವ ಹಣ ಅವರ ಹೆಚ್ಚುವರಿ ಕಮಾಯಿ. ರಕ್ತ ಹೆಪ್ಪುಗಟ್ಟಿಸುವಂತಾ ಚಳಿಯಲ್ಲಿ ಕಂಬಳಿ ಬುಗುರು ಹಾಕಿಕೊಂಡು ನಡುರಾತ್ರಿಯವರೆಗೆ ಕೂತು ಅಡಿಕೆ ಸುಲಿದು ದೈತ್ಯ ಹಂಡೆ ತುಂಬಿಸುವವರ ಬಾಯಲ್ಲಿ ಜನಪದ ಕತೆ, ಒಗಟು, ಆಗೀಗ ಹಡೆ ಮಾತುಗಳ ಪಟ್ಟಾಂಗ. ಅಡಿಕೆ ಸುಲಿತ ಪೂರೈಸಿದ ಮೇಲೆ ಲೆಕ್ಕ ಬರೆದುಕೊಳ್ಳಲು ಅನಿವಾರ್ಯವಾಗಿ ಜಾಗರಣೆ ಮಾಡುವ ಮನೆ ಯಜಮಾನರೊಂದಿಗೆ ಕಥನ ಕುತೂಹಲಿಗಳಾದ ನಮ್ಮಂತಾ ಹದಿಹರೆಯಕ್ಕೆ ಕಾಲಿಡುತ್ತಿರುವ ಮಕ್ಕಳೂ ಮೆಟ್ಟುಗತ್ತಿ ಹೂಡಿಕೊಂಡು ಕುಗುರುತ್ತಾ ಕೂತು ನಮ್ಮಿಂದಾದಷ್ಟು ಅಡಿಕೆ ಸುಲಿತ ಮಾಡುವ ಉಮೇದು. ತೀರ್ಥಹಳ್ಳಿ ಪೇಟೆಯಲ್ಲಿ ಓದುತ್ತಿದ್ದವರಿಗೆ ಆಗ ನವರಾತ್ರಿಯ ರಜಾ. ಮಜಾ. ದೀಪಾವಳಿಯವರೆಗೆ ವಿಸ್ತರಿಸಿರುತ್ತಿದ್ದ ರಜೆಯ ದಿನಗಳು. ಅಡಿಕೆ ಚೊಗರಿನಿಂದ ಕಲೆಯಾದ ಬಟ್ಟೆಗಳು ಮುಂದೆ ವರಸರಿವೆಗಷ್ಟೇ ಲಾಯಖ್ಖಾಗುವ ಕಾರಣದಿಂದ ಅಡಿಕೆ ಸುಲಿತಕ್ಕೆಂದೇ ಮೀಸಲಾದ ಹಳೆಯ ಉಡುಪು. ಕಂಡಿ ಬಿಟ್ಟುಕೊಂಡು ಜೂಲುಜೂಲಾದ ಸ್ವೆಟರು. ರಕ್ಷಣಾಕವಚವನ್ನು ಯಾವ ಮಾಯಕದಲ್ಲೋ ಬೇಧಿಸಿ ಹೊಟ್ಟೆಯೊಳಗೆ ಹೊಕ್ಕು ಗದಗುಟ್ಟಿಸುವ ಯಮಚಳಿ. ರಾತ್ರಿಯ ಊಟದ ನಂತರ ಕೆಲಸದವರಿಗೆ ಹಂಚಲೆಂದು ಅಮ್ಮ ಕಲೆಸುತ್ತಿದ್ದ ಖಾರ ಮುಂದಾದ ನೀರುಳ್ಳಿ, ಹಸಿಮೆಣಸಿನ ಅವಲಕ್ಕಿ ಉಪ್ಕರಿ. ಬೆಲ್ಲ ಹಾಕಿ ಕುದಿಸಿದ ಹೊಗೆ ಹಾಯುವ ಚಾ. ಈ ಆಕರ್ಷಣೆಯಿಂದಲೇ ಅಮ್ಮನ ಸೆರಗು ಹಿಡಿದು ಬಾಲದಂತೆ ಬರುತ್ತಿದ್ದ ಮಕ್ಕಳು ತಿಂಡಿಯ ಕಲಾಪ ಮುಗಿಯುತ್ತಿದ್ದಂತೆ ಅಮ್ಮಂದಿರು ತಂತಮ್ಮ ಮೆಟ್ಟುಗತ್ತಿಯ ಪಕ್ಕ ಹಾಸಿಕೊಟ್ಟ ಗೋಣೀಚೀಲದ ಸುಪ್ಪತ್ತಿಗೆಯ ಮೇಲೆ ಕೊಕ್ಕರಿಸಿಕೊಂಡು ಮಲಗಿ, ಹರಕು ಗೋಣೀಚೀಲವನ್ನೇ ಹೊದ್ದು ಲೋಕ ಮರೆಯುವ ತಂದ್ರಿ. ಅಡಿಕೆರಸ ತಾಗಿ ಕಪ್ಪಾಗಿರುತ್ತಿದ್ದ ಕೈಗಳನ್ನು ಬಚ್ಚಲ ಕಲ್ಲಿಗೆ ತಿಕ್ಕಿ ತಿಕ್ಕಿ ತೊಳೆದು, ಚಳಿರಾಯನ ಪ್ರತಾಪದಿಂದ ತುಟಿಯಗಲಿಸಿ ನಕ್ಕರೆ ಮತ್ತಷ್ಟು ಸೀಳಿ ಯಮಯಾತನೆ ಕೊಡುವ ತುಟಿಗಳಿಗೆ, ಒಡೆದು ತುರಿಮಣೆಯಾದ ಹಿಮ್ಮಡಿಗಳಿಗೆ ವ್ಯಾಸಲೆಣ್ಣೆಯ ಇಲಾಜು ಪೂರೈಸಿ, ಜೋಡಿ ಕಂಬಳಿಯ ಮುಸುಕು ಹಾಕಿ ಮಲಗಿದರೆ ನಿಧನಿಧಾನವಾಗಿ ಕಂಬಳಿ ಮುಸುಕಿನೊಳಗೆ ಶಾಖ ಏರುತ್ತಾ, ಮಂಪರಿನೊಳಗೆ ಜಾರುತ್ತಾ, ಸುಖ, ಆಹಾ ಸುಖ.

ಬೆಳಗಿನ ನಾಲ್ಕಕ್ಕೇ ಎದ್ದು ಅಡಿಕೆ ಬೇಯಿಸಲು ಒಲೆ ಉರಿಸುತ್ತಿದ್ದ ಅಪ್ಪ. ಚಟಪಟಗುಟ್ಟುತ್ತಾ, ಕಿಡಿ ಹಾರಿಸುತ್ತಾ, ಉರಿಯುವ ಕುಂಟೆಗಳು. ನಿಗಿನಿಗಿಸುವ ಕೆಂಡಗಳು. ಚಳಿಯ ಹೊಡೆತಕ್ಕೆ ಕಂಗೆಟ್ಟು ಇನ್ನೇನು ಒಲೆಯೊಳಗೇ ಹೋಗಿ ಸೇರಿಕೊಂಡುಬಿಡುತ್ತವೆಯೇನೋ ಎನ್ನುವಷ್ಟು ಹತ್ತಿರ ಮಲಗಿರುತ್ತಿದ್ದ ಮನೆಯ ನಾಯಿಗಳು. ಬೆಳಿಗ್ಗೆದ್ದು ಮುಖಕ್ಕೆ ನೀರು ತೋರಿಸಿ, ಎಮ್ಮೆ ಹಾಲು ಬೆರೆಸಿದ

ಮಂದಗಿನ ಬೆಲ್ಲದ ಕಾಫಿ ಕುಡಿಯುತ್ತಿದ್ದಂತೆ ಅಡಿಕೆ ಒಲೆಯೆದುರು ಸ್ಥಾಪನೆಯಾಗುವ ಸೆಳೆತ. 'ಹಹ್ಹಹ್ಹಾ , ಹುಹ್ಹುಹ್ಹೂ..' ಗಳೊಂದಿಗೆ ಎದೆಗೆ ಕೈ ಬಿಗಿದು ಒಮ್ಮೆ ಒಲೆ ಬೆಂಕಿಗೆ ಮುಖಾಮುಖಿಯಾಗಿ, ಮತ್ತೊಮ್ಮೆ ಬೆನ್ನು ತೋರಿಸಿ, ಮೈಯಿಡೀ ಶಾಖವನ್ನು ಆವಾಹಿಸಿಕೊಳ್ಳುವ ತವಕ. ಕುಟ್ಟಿ ಬಾರಿಸುವ ಚಳಿ ಉಗ್ರರೂಪ ತಾಳಿರುವಾಗಲೇ ಬಲಿರಾಯನಿಗೆ ಭೂಲೋಕ ನೋಡಬೇಕೆಂಬ ಹುಮ್ಮಸ್ಸು. ಎರೆದುಕೊಳ್ಳುವ ಹಬ್ಬದ ದಿನ ಮಕ್ಕಳೆಲ್ಲರಿಗೂ ಸ್ವತಾ ತಲೆಗೆ ಎಣ್ಣೆ ಹಚ್ಚಿ ಎರೆಯುವುದು ಅಮ್ಮನ ಹುರುಪು. ಹುಣಿಸೆಹಣ್ಣು, ಉಮಿಕರಿ ಬೂದಿಯಿಂದ ಫಳ್ಳನೆ ಬೆಳಗಿಸಿಕೊಂಡ, ಕುತ್ತಿಗೆಗೆ ಹಿಂಡ್ಕಚ್ಚಿಬಳ್ಳಿಯ ಹಾರ ಹಾಕಿಸಿಕೊಂಡ, ಒಲೆಯಲ್ಲಿ ಅರ್ಧ ಹುಗಿದ ತಾಮ್ರದ ದೊಡ್ಡ ಹಂಡೆಯಲ್ಲಿ ಕೊತಗುಟ್ಟುವಂತೆ ಕಾದಿರುತ್ತಿದ್ದ ನೀರು. ಒಲೆಯಲ್ಲಿ ನಿರಂತರವಾಗಿ ಉರಿಯುತ್ತಿದ್ದ ಕೊನಮಟ್ಟೆ, ಅಡಿಕೆದಬ್ಬೆ, ಕುಂಟೆಗಳು. ಕಾದ ನೀರನ್ನು ಮತ್ತೊಂದು ದೊಡ್ಡ ಕಡಾಯಿಯಲ್ಲಿ ಹವಣ ಮಾಡಿಕೊಂಡು, ಒಂದು ತಂಬಿಗೆ ನೀರು ರಪ್ಪನೆ ತಲೆಗೆ ಹಾಕಿ ಮತ್ತೊಂದು ತಂಬಿಗೆ ನೀರು ತಲೆಯ ಮೇಲೆ ಬೀಳುವ ಕ್ಷಣಾರ್ಧದ ಅವಧಿಯಲ್ಲಿ ಚಳಿಯಿಂದ ಮೈ ಚುಂಗರಿಸಿ, ತಲೆ ತಿಕ್ಕಲು ಹಾಕಿದ ಮತ್ತಿಸೊಪ್ಪಿನ ಗುಳ ಐಸ್ ನೀರಿನಂತೆ ತಣ್ಣಗೆ ಕೊರೆಯುತ್ತಾ ಮೈ ಮರಗಟ್ಟಿ ಹೋಯಿತೆನ್ನಿಸುವ ನಡುಕ. ಚಳಿಯೋ ಚಳಿ. ಚಳಿರಪ್ಪೋ ಚಳಿ.

ತಮ್ಮ ಹೇಳಿದ ಒಂದು ಜೋಕು ಅಶ್ಲೀಲವೆನ್ನಿಸಲಿಕ್ಕಿಲ್ಲ ಎನ್ನುವ ಭರವಸೆಯೊಂದಿಗೆ ಅದನ್ನಿಲ್ಲಿ ಹಂಚಿಕೊಳ್ಳುತ್ತಿದ್ದೇನೆ. ತೀರ್ಥಳ್ಳಿಪೇಟೆಗೆ ಹೋಗಿ ರಾತ್ರಿ ವಾಪಸು ಬಂದು ಬಸ್ಸಿಳಿದವನು ಮೂತ್ರಶಂಕೆಗೆ ಅವಸರವಾಗಿ ಅದನ್ನು ನಿವಾರಿಸಿಕೊಳ್ಳಲು ನಿಂತರೆ ಹೊರ ಬಂದ ನೀರು ಚಳಿಗೆ ಗಡ್ಡೆ ಕಟ್ಟಿ ಅದನ್ನು ಪುಡಿ ಪುಡಿ ಮಾಡಬೇಕಾಯಿತೆನ್ನುವುದು ಅವನ ಉತ್ಪ್ರೇಕ್ಷೆ ಮಾತು. ಚಳಿಯ ತೀಕ್ಷ್ಣತೆಯನ್ನು ಮನದಟ್ಟು ಮಾಡಿಸಲು ಇದಕ್ಕಿಂತಾ ಹೆಚ್ಚಿನ ಉದಾಹರಣೆ ಬೇರೇನೂ ಬೇಕಾಗಿಲ್ಲ, ಅಲ್ಲವೇ?

****

ತೀರ್ಥಹಳ್ಳಿಯಲ್ಲಿ ಓದುತ್ತಿದ್ದಾಗಿನ ಕಾಲ. ಸುಮಾರಾಗಿ ಡಿಸೆಂಬರ್ ಕೊನೆಯಲ್ಲಿ ಬರುವ ಎಳ್ಳಮಾವಾಸ್ಯೆ ಜಾತ್ರೆ ಅಂದರೆ ನಮ್ಮಂತಾ ಮಕ್ಕಳಿಗೆ ಇನ್ನಿಲ್ಲದ ಸಂಭ್ರಮ. ರಾತ್ರಿ ಬೆಳಗಾಗುವುದರೊಳಗೆ ಕಣ್ಕಟ್ಟು, ಕಣ್ಣುಮಾಯ ಅನ್ನುವಂತೆ ರಸ್ತೆಯ ಇಕ್ಕೆಲಗಳ್ಲೂ ಉದ್ಭವಿಸಿರುತ್ತಿದ್ದ ನಾನಾ ನಮೂನಿಯ ವಸ್ತುಗಳ ಮಾರಾಟದ ಅಂಗಡಿಗಳು, ಸಿನಿಮಾ, ನಾಟಕ, ನೆಂಟರು, ಇಷ್ಟರು, ಜಾತ್ರೆಗೆಂದೇ ಖಾಯಿಷ್ಟಟ್ಟು ಹೊಲಿಸಿಕೊಂಡಿರುತ್ತಿದ್ದ ಫಳಗುಟ್ಟುವ ಬಟ್ಟೆಯ ಲಂಗ, ಕುಪ್ಪಸ. ಒಂದೊಂದಲ್ಲ ವೈಭೋಗ. ಎಳ್ಳಮಾವಾಸ್ಯೆ ಜಾತ್ರೆ ಅಂದರೆ ಮತ್ತದೇ ಕುಟ್ಟಿ ಬಾರಿಸುವ ಚಳಿ, ಮೂಳೆ ಕೊರೆಯುವ ಥಂಡಿ, ಬಾಯಿ ತೆಗೆದರೆ ಹಬೆ, ಹಲ್ಲುಗಳು ಕಟಕಟ. ಪರಶುರಾಮ ತಂದೆಯ ಆಜ್ಞೆಯಂತೆ ತನ್ನ ತಾಯಿಯನ್ನು ಕೊಂದ ಪಾಪಕ್ಕೆ ಪರಿಹಾರಾರ್ಥವಾಗಿ ನಾನಾ ಕ್ಷೇತ್ರಗಳನ್ನು ಸುತ್ತಿ ಕೊನೆಯಲ್ಲಿ ಇಲ್ಲಿನ ತುಂಗಾನದಿಯಲ್ಲಿ ಕೊಡಲಿ ಸಮೇತ ಮುಳುಗು ಹಾಕಿದಾಗ ಕೊಡಲಿಗಂಟಿದ ರಕ್ತದ ಕಲೆ ಮಾಯವಾಗಿ ಅವನ ಪಾಪ ವಿಮೋಚನೆಯಾಯಿತೆಂಬುದು ಪುರಾಣ ಕತೆ. ಪರಶುರಾಮ ಮುಳುಗು ಹಾಕಿದ ಸ್ಥಳ ರಾಮಕೊಂಡವೆಂದು ಪ್ರಸಿದ್ಧ. ರಥೋತ್ಸವದ ಹಿಂದಿನ ದಿನ ಆಸ್ತಿಕ ಜನ ಚಳಿಗೆ ಕ್ಯಾರೇ ಅನ್ನದೆ ತಂಡೋಪತಂಡವಾಗಿ ತುಂಗಾನದಿಯ ರಾಮಕೊಂಡದಲ್ಲಿ ಪುಣ್ಯಸ್ನಾನ ಮಾಡಿ ಪುನೀತರಾಗುತ್ತಾರೆ. 'ಹಾ..' ಎಂದು ಬಾಯಿ ತೆಗೆದು ಹಬೆಯುಸಿರು ಬಿಡುತ್ತಾ,

ಮಳೆಯಲ್ಲಿ ನೆಂದ ಕಾಗೆಯಂತೆ ಗದಗದಗುಟ್ಟುತ್ತಾ ಕೆಲ ವರ್ಷ ಮನೆಯ ಹಿರಿಯರೊಡನೆ ನಾನೂ ಈ ಸ್ನಾನದ ಕಲಾಪದಲ್ಲಿ ಭಾಗಿಯಾಗಿ ನನ್ನ ಖಾತೆಗೆ ಒಂದಿಷ್ಟು ಪುಣ್ಯವನ್ನು ಜಮಾವಣೆ ಮಾಡಿಕೊಂಡೆ. ಯಾವಾಗ ಪೋಲೀಸರು ನಮ್ಮಂತಾ ಮಕ್ಕಳನ್ನು ಅನಾಮತ್ತಾಗಿ ಎತ್ತಿ ನೀರಲ್ಲಿ ಮುಳುಗಿಸಿ ಮೇಲೆ ಬಿಡತೊಡಗಿದರೋ ಅಲ್ಲಿಗೆ ಈ ಪುಣ್ಯಸಂಪಾದನೆಗೆ ಪೂರ್ಣವಿರಾಮ ಬಿತ್ತು. ಚಳಿಗಾಲ ಅಂದರೆ ಎಳ್ಳಮಾವಾಸ್ಯೆ ಜಾತ್ರೆ, ಆ ದಿನಗಳು ನೆನಪಿಗೆ ಬರದಿರಲು ಸಾಧ್ಯವೇ ಇಲ್ಲ. ನೆನಪು ಸಾಯುವುದಿಲ್ಲ.

****

ಚಳಿ ಅಂದರೆ ಹೇಗಿರುತ್ತದೆಯೆಂದು, ಎಷ್ಟಿರುತ್ತದೆಯೆಂದು ಮನವರಿಕೆಯಾದದ್ದು ಹಿಮಗಿರಿಯ ಹೂವಿನ ಕಣಿವೆಗೆ ಪ್ರವಾಸ ಹೋದ ಸಂದರ್ಭದಲ್ಲಿ. ಸೆಪ್ಟೆಂಬರ್ ತಿಂಗಳ ಮೊದಲ ವಾರ. ಕರುಳು ನಡುಗಿಸುವ ಚಳಿ. ಹಿಂಡಿ ಹಿಪ್ಪೆ ಮಾಡುವ ಥಂಡಿ. ವರ್ಷದಲ್ಲಿ ಆರು ತಿಂಗಳಷ್ಟೇ ವ್ಯವಹಾರ ನಡೆಸುವ ಫಾಂಘರಿಯಾದಲ್ಲಿ, ಮುಚ್ಚಿದ ಚೌಕಾಕಾರದ ದೊಡ್ಡ ಪೆಟ್ಟಿಗೆಯಂತಿರುವ ಹೋಟೆಲು ಕೋಣೆಯಲ್ಲಿ ನಮ್ಮ ಗುಂಪಿನ ವಾಸ್ತವ್ಯ. ಹಿಮ ಸುರಿಯುತ್ತಿದ್ದಂತೆ ಎಲ್ಲವೂ ಹಿಮದಲ್ಲಿ ಮುಚ್ಚಿ ಹಿಮಪರ್ವತವಾಗಿ ಜನ ಕೆಳಗಿನ ಜಾಗಕ್ಕೆ ಇಳಿದು ಹೋಗಬೇಕಾದ್ದು ಅನಿವಾರ್ಯ. ಈ ಫಾಂಘರಿಯಾದಿಂದ ಸಿಖ್ಖರ ಪವಿತ್ರಕ್ಷೇತ್ರ ಹೇಮಕುಂಡದ ದಾರಿ ಒಂದೆಡೆ ಮೇಲಕ್ಕೇರಿದರೆ ಹೂವಿನಕಣಿವೆಯ ಹಾದಿ ಪಕ್ಕಕ್ಕೆ ಕವಲೊಡೆಯುತ್ತದೆ. 'ಅಜ್ಜಗೊಂದು ಕೋಟು, ಕೋಟಿನೊಳಗೆ ಮೀಸೆ, ಮೀಸೆ ಬಿಡಿಸೆ ಹಲ್ಲು, ಹಲ್ಲು ಕಡೆಯೆ ಹಿಟ್ಟು, ಹಿಟ್ಟು ತಟ್ಟೆ ರೊಟ್ಟಿ' ಎನ್ನುವ ಒಗಟಿನಂತೆ ಥರ್ಮಾಲ್ವೇರ್ನ ಮೇಲೆ ಚೂಡೀದಾರ್, ಅದರ ಮೇಲೆ ಸ್ವೆಟರ್, ಅದರ ಮೇಲೆ ಶಾಲು, ಅದರ ಮೇಲೆ ಸೊಂಟದುದ್ದಕ್ಕೂ ಬರುವ ತಲೆ ಮುಚ್ಚುವ ಜಾಕೆಟ್, ಚಳಿಯೊಂದಿಗೆ ಸೆಣಸಾಡಲು ಇಷ್ಟೆಲ್ಲಾ ವೇಷ ಕಟ್ಟಿ ನಮ್ಮ ಗುಂಪು ಸಿದ್ಧವಾಗಿದ್ದರೂ ನೋಡದಂತೆ, ಉಸಿರಾಡದಂತೆ ಕಣ್ಣು, ಮೂಗು ಮುಚ್ಚಿಕೊಂಡು ಓಡಾಡಲಾಗುವುದಿಲ್ಲವಲ್ಲ? ಒಂದು ಸೂಜಿಮೊನೆಯಷ್ಟು ಜಾಗ ಸಿಕ್ಕರೂ ಚಳಿ ಒಳ ಹೊಕ್ಕು ದೇಹಾದ್ಯಂತ ನಡುಗಿಸಿ ಬಿಡುತ್ತಿತ್ತು. ರಕ್ತಪರಿಚಲನೆಯೇ ನಿಂತು ಹೋಗುತ್ತದೆಯೆನ್ನುವಂತೆನಿಸುವ ಚಳಿ, ಫ್ರೀಜರ್ನ ಒಳ ಹೊಕ್ಕು ಕೂತರೆ ಹೇಗೆನಿಸಬಹುದೋ ಅಂತಾದ್ದು. ಚಾಯ್ ಕುಡಿಯಲು ಹೋದರೆ ಗಣ ಬಂದವರಂತೆ ಗಡಗಡ ನಡುಗುತ್ತಾ ದೇಹಭಾರ ಹೊರಲಾರೆವೆನ್ನುವ ಕಾಲುಗಳು. ಕೈಗಳು ಯಾವ ರೀತಿ ನಡುಗುತ್ತಿದ್ದುವೆಂದರೆ ಟೀ ಕಪ್ಪು ಎತ್ತಿದರೆ ಒಮ್ಮೆಲೇ ಅರ್ಧ ಲೋಟ ತುಳುಕಿ ಮೈ ಮೇಲೆ ಚೆಲ್ಲೀತು ಎನಿಸುವಂತೆ ಅನೂಹ್ಯ, ಅಸಹನೀಯ ಚಳಿ. ಹಿಮದ ತುಣುಕುಗಳಂತಾಗಿದ್ದ ಕೈಕಾಲಿನ ಬೆರಳುಗಳು. ಪ್ರಚಂಡ ಚಳಿಯ ಅನುಭವದ ನೆನವರಿಕೆಯಿಂದ ಲೇಖನ ಮುಗಿಸುತ್ತೇನೆ.

****

■

ಕ್ಷುರಸ್ಯ ಧಾರಾ

● ಶಿವಕುಮಾರ್

ನಮ್ಮ ಚಿಕ್ಕಂದಿನಲ್ಲಿ ಚಳಿಗಾಲ ಬಂತೆಂದರೆ ನಮಗೆಲ್ಲಾ ಇನ್ನಿಲ್ಲದ ಖುಷಿ. ಆ ದಿನಗಳಲ್ಲಿ ಬೆಳ್ಳಂಬೆಳಗ್ಗೆ ನಮ್ಮಮ್ಮ ಬಚ್ಚಲುಮನೆ ಹಂಡೆ ಒಲೆಗೆ ಸೌದೆ ಉರಿಹಾಕಿರುತ್ತಿದ್ದರು. ಮನೆ ಮಕ್ಕಳಾದ ನಾವೆಲ್ಲಾ ಎದ್ದ ತಕ್ಷಣ ಬಚ್ಚಲುಮನೆಗೆ ಓಡಿ ಹೋಗಿ ಒಲೆಯ ಮುಂದೆ ಕೂತು ಬೆಂಕಿ ಕಾಯಿಸುತ್ತಿದ್ದೆವು. ಒಹ್! ಆ ಮಾಗಿಯ ಚಳಿಯಲ್ಲಿ ಬೆಂಕಿಯ ಕಾವು ಎಷ್ಟು ಹಿತವಾಗಿರುತ್ತಿತ್ತು ಅಂತೀರಿ. ಇದಾದನಂತರ ತಿಂಡಿ ತಿಂದು ನಾವೆಲ್ಲಾ ನಮ್ಮಪ್ಪ ಆಸ್ಪತ್ರೆಗೆ ಹೋಗುವುದನ್ನೇ ಕಾಯುತ್ತಿದ್ದೆವು. ಅವರು ಹೊರಟ ತಕ್ಷಣ ಮನೆಮುಂದಿನ ಮೆಟ್ಟಲುಗಳ ಮೇಲೆ ಕುಳಿತು ಬಿಸಿಲು ಕಾಯಿಸುವ ಪವಿತ್ರ ಕೆಲಸ. ಗಂಟೆಗಟ್ಟಲೆ ಬಿಸಿಲಿನಲ್ಲಿ ಕುಳಿತು, ನಮ್ಮಮ್ಮ "ಮೈಯ್ಯೆಲ್ಲಾ ಸುಟ್ಟು ಹೋಗುತ್ತೆ, ಸಾಕು ಒಳಗೆ ಬನ್ರೋ" ಎಂದು ಗದರಿಸಿಕೊಂಡಾಗಲೇ ಒಳಕ್ಕೆ ಪಯಣ. ಮತ್ತೆ ರಾತ್ರಿ ಮಲಗುವ ಸಮಯ ಬಂತೆಂದರೆ ಸರಿ. ಎಲ್ಲರೂ ನಮ್ಮ ನಮ್ಮಸುತ್ತಿಟ್ಟಿದ್ದ ಹಾಸಿಗೆಗಳನ್ನು ಭುಜದ ಮೇಲಿಟ್ಟು ಮನೆಯ ಹಜಾರಕ್ಕೆ ಸಾಗಿಸಿ ಅಲ್ಲಿ ಒಂದರ ಪಕ್ಕ ಒಂದರಂತೆ ಎಲ್ಲ ಹಾಸಿಗೆಗಳನ್ನೂ ಹರಡಿ ಮಧ್ಯಾಹ್ನ ಬಿಸಿಲಿನಲ್ಲಿ ಒಣಗಿಸಿಟ್ಟಿದ್ದ ಹೊದ್ದಿಗೆಗಳನ್ನು ಹೊದ್ದು ಮಲಗಿದಾಗಲಂತೂ ಆ ಬೆಚ್ಚಗಿನ ಅನುಭವವನ್ನು ವರ್ಣಿಸುವುದಕ್ಕೆ ಪದಗಳೇ ಇಲ್ಲವಾಗುತ್ತವೆ.

ಬಾಲ್ಯ ಕಳೆದು ವಿದ್ಯಾಭ್ಯಾಸ ಮುಗಿಸಿ ಕೆಲಸಕ್ಕೆ ಸೇರಿದ ಮೇಲೆ ನನಗೆ ಉನ್ನತ ಶಿಕ್ಷಣಕ್ಕೆ ಇಂಗ್ಲೆಂಡಿಗೆ ಹೋಗುವ ಅವಕಾಶ ಒದಗಿಬಂತು. ಅಲ್ಲಿ ಚೆಷ್ಟೈರಿನ ಹಳ್ಳಿಯೊಂದಾದ ಪಾಯಿಂಟನ್ ನಲ್ಲಿ ಪೇಯಿಂಗ್ ಗೆಸ್ಟ್ ವಸತಿ ಸಿಕ್ಕಿತ್ತು. ಅವರ ಮನೆಯ ಡ್ರಾಯಿಂಗ್ ರೂಮಿನಲ್ಲಿ ಒಂದು ಫೈರ್ ಪ್ಲೇಸ್. ನಾನು ಅಲ್ಲಿ ವಾಸಿಸಲು ಪ್ರಾರಂಭಿಸಿದಾಗ ಫೆಬ್ರುವರಿ ತಿಂಗಳು. ಚಳಿಗಾಲದ ಉತ್ತುಂಗದ ಕಾಲ. ಸಂಜೆ ಮನೆಗೆ ಬಂದತಕ್ಷಣ, ಹಿಂದಿನ ಹಿತ್ತಲಿನಲ್ಲಿದ್ದ ಇದ್ದಲಿನ ಕ್ಯಾಬಿನ್ನಿಗೆ ಹೋಗಿ ಬಕೆಟ್ ತುಂಬಾ ಇದ್ದಲನ್ನು ಹೊತ್ತು ತಂದು ಫೈರ್‌ಪ್ಲೇಸಿನಲ್ಲಿ ಹರಡಿ, ಹಳೇ ದಿನಪತ್ರಿಕೆಗಳನ್ನು ಹರಿದು ಉಂಡೆ ಮಾಡಿ ಇದ್ದಲಿನ ಮೇಲೆ ಚೆಲ್ಲಿ ಬೆಂಕಿ ಹತ್ತಿಸಿದರೆ ಮುಗಿಯಿತು. ಒಳ್ಳೆ ನಿಗಿ ನಿಗಿ ಕೆಂಡಗಳಿಂದ ಆ ಫೈರ್‌ಪ್ಲೇಸ್ ರಾರಾಜಿಸತೊಡಗುತ್ತಿತ್ತು. ಮನೆಯ ಮೇಲೆ ಕುಳಿರ್ಗಾಳಿ ವೇಗದಿಂದ ಬೀಸಿದಾಗಂತೂ ಒಲೆಯ ಚಿಮಣಿಯ ಮೂಲಕ ಹೊಗೆ ಮೇಲಕ್ಕೆ ರಭಸದಿಂದ ಸಾಗಿ ಮುಂಡಕದಲ್ಲಿ ಹೇಳುವ ಕಾಲೀ, ಕರಾಲೀಯೇ ಮೊದಲಾಗಿ ವಿವಿಧ ರೀತಿಯ ಜ್ವಾಲೆಗಳನ್ನು ಆ ಬೆಂಕಿಯ ಕೆನ್ನಾಲಿಗೆಗಳಲ್ಲಿ ಕಾಣಬಹುದಾಗಿತ್ತು. ಅಷ್ಟು ಹೊತ್ತಿಗೆ ನಮ್ಮ ಮನೆಯೊಡತಿ ಡಾರೊಥಿ ಬಿಸಿ ಬಿಸಿ ಚಹಾ ತಂದು ಮೇಜಿನ ಮೇಲಿರಿಸಿ , ಕೊಠಡಿಯ ಬಲ ಮೂಲೆಯಲ್ಲಿದ್ದ ಕಪ್ಪು ಬಿಳುಪು ಟಿ.ವಿ.ಯನ್ನು ಚಾಲನೆಗೊಳಿಸುತ್ತಿದ್ದರು. ಚಹಾ ಸೇವಿಸುತ್ತ ಮನೆಯೊಡತಿ ಮತ್ತು ನಾನು ಆ ದಿನಗಳಲ್ಲಿ ಬಿತ್ತರವಾಗುತ್ತಿದ್ದ ಯೂನಿವರ್ಸಿಟ್ ಛಾಲೆಂಜ್ ಎಂಬ ಬಿಬಿಸಿ ಕಾರ್ಯಕ್ರಮವನ್ನು ಉತ್ಸುಕತೆಯಿಂದ ನೋಡುತ್ತಿದ್ದ ಅನುಭವ ಇಂದಿಗೂ ಮನದಲ್ಲಿ ಹಸಿರಾಗಿದೆ.

ಈಗ ವಾನಪ್ರಸ್ಥದಲ್ಲಿ ನೆಲಸಿದ ನಂತರ ಚಳಿಗಾಲ ಬಂತೆಂದರೆ ಅಂಗಿ ಮೇಲೊಂದಂಗಿ (ನಮ್ಮಪ್ಪ ಯಾವಾಗಲೂ ಅಂಗಿ ಮೇಲೊಂದಂಗಿ, ಶ್ಯಾನುಭೋಗರ ತಂಗಿ ಅಂತ ಹೇಳುತ್ತಿದ್ದ ನೆನಪು) ಧರಿಸಿ, ಅದರ ಮೇಲೆ ಶಾಲು ಹೊದ್ದು ಟಿ.ವಿ.,ನೋಡುವ ರೂಟಿನ್ ಚಾಲನೆಯಲ್ಲಿದೆ. ಟಿ.ವಿ.ಕಾರ್ಯಕ್ರಮಗಳೆಲ್ಲಾ

ಬೇಸರವಾಗಲು ಶುರುವಾದರೆ ಸಿದ್ಧೌಷಧ ಇದ್ದೇ ಇದೆಯಲ್ಲಾ. ಕರ್ಲ್ ಅಪ್ ವಿತ್ ಎ ಗುಡ್ ಬುಕ್. ಮೊನ್ನೆ ಮೂರು ನಾಲ್ಕುದಿನ ಜಡಿಮಳೆ ಸುರಿದಾಗ, ಮಧ್ಯಾಹ್ನದ ಸಮಯದಲ್ಲೇ ಚಳಿಯಿಂದ ನಡುಕ ಶುರುವಾಯಿತು. ಡಬ್ಬಲ್ ಸ್ವೆಟರ್ ಧರಿಸಿ ಶಾಲು ಹೊದ್ದು, ಸಾಮರ್ಸೆಟ್ ಮಾಮ್ ನ " ದ ರೇಸರ್ಸ್ ಎಡ್ಜ್ " ಎಂಬ ಕಾದಂಬರಿಯನ್ನು ಮೂರನೆಯ ಬಾರಿಗೆ ಓದಲು ಪ್ರಾರಂಭಿಸಿದೆ. ನನಗೆ ಬಹು ಪ್ರಿಯವಾದ ಪುಸ್ತಕ ಇದು. ಯೌವ್ವನದಲ್ಲಿ ಮೊದಲ ಬಾರಿ ಓದಿದ ನೆನಪು ಮನದಲ್ಲಿ ಅಚ್ಚಳಿಯದೆ ನಿಂತುಬಿಟ್ಟಿತ್ತು. ಅನಂತರ ನನಗೆ ಎಪ್ಪತ್ತು ತುಂಬಿದಾಗ ಗೆಳೆಯ ಶ್ರೀಹರಿ ಇದರ ಪ್ರತಿಯೊಂದನ್ನು ನನಗೆ ಉಡುಗೊರೆಯಾಗಿ ನೀಡಿದ್ದ. ಈಗ ಮತ್ತೆ ಈ ಪುಸ್ತಕವನ್ನು ಓದಲು ಕೈಗೆತ್ತಿಕೊಂಡಿದ್ದೆ. ಮಾಮ್‌ನ ಬರಹದ ಶೈಲಿಯ ಸೊಬಗನ್ನು ಓದಿಯೇ ಸವಿಯಬೇಕು. ಶೈಲಿಯ ಜೊತೆಗೆ ತೀರ ಆಪ್ತರಾಗುವಂತಹ ಜೀವಂತ ಪಾತ್ರಗಳನ್ನು ಸೃಷ್ಟಿಸಿ ಮಾಮ್ ನಮ್ಮ ಮನವನ್ನು ಕಲಕಿಬಿಡುತ್ತಾನೆ.

ಕಾದಂಬರಿಯ ಒಂದು ಸನ್ನಿವೇಶದಲ್ಲಿ ಕಾದಂಬರಿಯ ನಾಯಕಿ ಇಸಬೆಲ್ ತನ್ನ ಪ್ರೇಮಿ ಲ್ಯಾರಿಯೊಂದಿಗೆ ನಿಶ್ಚಯವಾಗಿದ್ದ ಮದುವೆಯನ್ನು ರದ್ದುಗೊಳಿಸಬೇಕಾದ ಪ್ರಸಂಗ ಒದಗಿಬರುತ್ತದೆ. ಆಗ ಅವರಿಬ್ಬರ ನಡುವಣ ಸಂಭಾಷಣೆಯನ್ನು ಇಲ್ಲಿ ನೋಡಿ.

"ಇಷ್ಟು ದಿನ ಪ್ಯಾರಿಸ್‌ನಲ್ಲಿ ನೀನು ಏನು ಮಾಡ್ಕೊಂಡಿದೀಯಾ ಹೇಳಕ್ಕಾಗತ್ತಾ?"

"ತುಂಬಾ ಓದ್ತಾ ಇದೀನಿ. ದಿನಕ್ಕೆ ಎಂಟು ಹತ್ತು ಗಂಟೆ ಕಾಲ. ಸಾರ್ಬಾನ್ನಲ್ಲಿ ಅನೇಕ ಪ್ರವಚನಗಳನ್ನ ಕೇಳಿಸ್ಕೊಂಡಿದೀನಿ. ಓದಿ ಅರ್ಥ ಮಾಡ್ಕೊಳ್ಳೋ ಅಷ್ಟು ಲ್ಯಾಟಿನ್ ಬರುತ್ತೆ. ನನಗೊಬ್ಬರು ಲ್ಯಾಟಿನ್ ಟೀಚರ್ ಇದಾರೆ. ನೀ ಇಲ್ಲಿಗೆ ಬರುಕ್ಕೆ ಮುಂಚೆ ನಾನು ವಾರಕ್ಕೆ ಮೂರುಬಾರಿ ಅವರಲ್ಲಿಗೆ ಹೋಗ್ತಾ ಇದ್ದೆ. "

"ಅದರಿಂದೇನು ಸಾರ್ಥಕ?"

"ಜ್ಞಾನಾರ್ಜನೆ" ನಸುನಗುತ್ತಾ ಲ್ಯಾರಿ ಉತ್ತರಿಸಿದ.

"ಅದರಿಂದೇನು ಪ್ರಯೋಜನ?"

"ಪ್ರಯೋಜನ ಇದೆಯೋ ಇಲ್ಲವೋ ನನಗೆ ತಿಳೀದು. ಆದರೆ ತುಂಬಾ ಸಂತಸ ಸಿಗುತ್ತೆ ಅನ್ನೋ ಮಾತು ನಿಜ. ಒಡಸ್ಸಿ ಗ್ರಂಥದ ಮೂಲ ಪ್ರತಿನ ಓದುಕ್ಕೆ ಆದಾಗ ಅದರಿಂದ ಸಿಗೋ ಆನಂದಾನೇ ಬೇರೆ. ಮೆಲ್ಲಗೆ ತುದಿಗಾಲಿನಲ್ಲಿ ನಿಂತು ನಕ್ಷತ್ರಗಳೆಡೆಗೆ ಕೈಚಾಚುವಂತಹ ಅನುಭವ ಅದು."

ಆ ಓದಿನ ನೆನಪಿನ ಸಂಭ್ರಮದಿಂದ ಲ್ಯಾರಿ ಕುರ್ಚಿಯಿಂದೆದ್ದು ಆ ಚಿಕ್ಕ ಕೋಣೆಯಲ್ಲಿ ಆಚೀಚೆ ಓಡಾಡಲು ಪ್ರಾರಂಭಿಸಿದ.

"ಕಳೆದ ಎರಡು ತಿಂಗಳಗಳಿಂದ ನಾನು ಸ್ಪಿನೋಜಾ ಓದ್ತಾ ಇದೇನೆ. ಇನ್ನೂ ಪೂರ್ತಿ ಅರ್ಥ ಆಗ್ತಾ ಇದೆ ಅಂತ ಹೇಳಲಾರೆ. ಆದರೂ ಅದು ಹೃದಯದಲ್ಲಿ ಹಿಗ್ಗನ್ನು ತುಂಬುತ್ತೆ. ಒಂದು ಬೆಟ್ಟದ ಶಿಖರದಲ್ಲಿನ ಸಮತಟ್ಟಾದ ನೆಲದ ಮೇಲೆ ವಿಮಾನದಿಂದ ಇಳಿದು. ಏಕಾಂತತೆಯಲ್ಲಿ ಶುಭ್ರ ಗಾಳಿಯ ಹಗುರವಾದ ಬೀಸುವಿಕೆಯಲ್ಲಿ ಮತ್ತು ಬರಿಸುವಂತಹ ಅನುಭವ"

" ಲ್ಯಾರಿ, ಚಿಕಾಗೋಗೆ ಯಾವಾಗ ಬರ್ತೀಯ ಸ್ವಲ್ಪ ಹೇಳ್ತೀಯಾ?"

"ಚಿಕಾಗೋನ? ಗೊತ್ತಿಲ್ಲಮ್ಮ, ಆ ಬಗ್ಗೆ ನಾನು ಯೋಚನೇನೆ ಮಾಡಿಲ್ಲ"

"ನೀನೇ ಹೇಳಿದ್ದೆ, ಎರಡು ವರ್ಷ ಕೊಡು. ಪ್ಯಾರಿಸ್‌ನಲ್ಲಿ ನನ್ನ ಗುರಿ ಸಾಧನೆಗೆ ಪ್ರಯತ್ನ ಮಾಡ್ತೀನಿ. ಏನೂ ಆಗದೇ ಇದ್ರೆ ಹಿಂದಕ್ಕೆ ಬಂದ್ಬಿಡ್ತಾನಿ ಅಂತ"

"ಈಗ ನಾನು ಹಿಂದಕ್ಕೆ ಬರೋದು ಅಸಾಧ್ಯ. ನಾನು ಈಗ ನನ್ನ ಪ್ರಯತ್ನದ ಹೊಸ್ತಿಲಿನಲ್ಲಿ ನಿಂತಿದೀನಿ. ನನ್ನ ಮುಂದೆ ವಿಶಾಲವಾದ ಅಧ್ಯಾತ್ಮದ ಹರಹು ಕೈ ಬೀಸಿ ಕರೀತಾ ಇದೆ. ಪಯಣಿಸೋ ಉತ್ಸಾಹ ನನ್ನಲ್ಲಿ ತುಂಬಿದೆ."

"ಏನು ಸಿಗತ್ತೆ ನಿನಗೆ ಈ ಪಯಣದಿಂದ?"

"ನನ್ನ ಎಲ್ಲ ಪ್ರಶ್ನೆಗಳಿಗೆ ಉತ್ತರ". ಲ್ಯಾರಿ ಅವಳೆಡೆಗೆ ತುಂಟನೋಟವೊಂದನ್ನು ಬೀರಿದ.

"ಏನವು?"

"ದೇವರಿದ್ದಾನೆಯೋ ಇಲ್ಲವೋ ಎಂಬುದರ ಬಗ್ಗೆ ನನಗೆ ಖಚಿತವಾಗಬೇಕು. ದುಷ್ಟತನದ ಕಾರಣ ನನಗೆ ಬೇಕು. ನನ್ನಲ್ಲಿ ಅಮರ ಆತ್ಮವಿದೆಯೋ ಅಥವಾ ನಾನು ಕಾಲವಾದಾಗ ಅದೇ ಅಂತಿಮ ಕೊನೆಯೋ ಎಂಬುದರ ಬಗ್ಗೆ ಸ್ಪಷ್ಟ ತಿಳಿವು ಬೇಕು"

ಇಸಬೆಲ್ ಮೇಲುಸಿರೆಳೆದಳು. ಲ್ಯಾರಿಯ ಮಾತುಗಳು ಅವಳಲ್ಲಿ ಮುಜುಗರವನ್ನುಂಟುಮಾಡಿದಂತೆ ಕಂಡಿತು. ಅವರುಗಳ ನಡುವಣ ಸಂಭಾಷಣೆ ಹಗುರವಾದ ದನಿಯಲ್ಲೇ ಇದ್ದುದರಿಂದ ಸಮಾಧಾನ ತಂದುಕೊಂಡು,

"ನೀ ಯಾಕೆ ಹೀಗೆ ಮಾತಾಡ್ತೀಯಾ ಲ್ಯಾರಿ, ನಿನ್ನ ಆ ಮಾತುಗಳಲ್ಲಿ ಎಂಥದೂ ಹುರುಳಿಲ್ಲ. ಸಂಪಾದನೆ ಮಾಡಬೇಕಾದ ಗಂಡಸರು ಹೀಗೆಲ್ಲಾ ಮಾತಾಡ್ತಾರೇನು?" ಅಂತ ಇಸಬೆಲ್ ಕೇಳಿದಳು.

"ನನಗೆ ನಿಜವಾಗಿ ಅನಿನ್ನಿಸಿದ್ದನ್ನ ನಾನು ಹೇಳ್ದೆ " ಲ್ಯಾರಿ ನಸುನಗುತ್ತಾ ಹೇಳಿದ."

"ಈ ಪರಿಸ್ಥಿತೀಲಿ ಅದು ಹೇಗೆ ನಗುಕ್ಕಾಗುತ್ತೆ ನಿನಗೆ ? ನಾವು ನಮ್ಮ ಬಾಳಹಾದಿಯ ಕವಲಿನಲ್ಲಿ ಬಂದು ನಿಂತಿದ್ದೇವೆ. ನಾವು ಈಗ ತೆಗೆದುಕೊಳ್ಳೋ ನಿರ್ಧಾರ ನಮ್ಮ ಭಾವಿ ಜೀವನವನ್ನ ನಿರ್ಣಯ ಮಾಡುತ್ತೆ"

"ಅದು ನನಗೆ ತಿಳಿದಿದೆ ಇಸಬೆಲ್ ಡಾರ್ಲಿಂಗ್, ನಾನು ತುಂಬಾ ಯೋಚಿಸಿಯೇ ಮಾತಾಡಿರೋದು"

"ಆದರೆ ಅದು ವ್ಯಾವಹಾರಿಕ ದೃಷ್ಟೀನೇ ಅಲ್ಲ. ಲ್ಯಾರಿ ನಿನಗೇನೋ ಹುಚ್ಚು"

ಇಸಬೆಲ್ ಮೆಲ್ಲನೆ ತನ್ನ ಬೆರಳಿನಿಂದ ಉಂಗುರವನ್ನು ಹೊರತೆಗೆದು, ಅದನ್ನು ತನ್ನ ಅಂಗೈಯ್ಯಲ್ಲಿರಿಸಿ, ಅದನ್ನೊಮ್ಮೆ ನೋಡಿದಳು.. ಅದೊಂದು ಚಚ್ಚೌಕನೆಯ ಕೆಂಪುಹರಳನ್ನು ಪ್ಲಾಟಿನಮ್ ನಲ್ಲಿ ಕಟ್ಟಿದ್ದ ಉಂಗುರ. ಇಸಬೆಲ್ಲಳಿಗೆ ತುಂಬ ಪ್ರಿಯವಾದ ಉಂಗುರವದು.

"ನೀನು ನನ್ನನ್ನ ನಿಜವಾಗಿ ಪ್ರೇಮಿಸಿದ್ದರೆ ನನಗೆ ಇಷ್ಟು ದುಃಖವನ್ನ ಉಂಟುಮಾಡುತ್ತಿರಲಿಲ್ಲ." ಉಕ್ಕಿಬರುತ್ತಿದ್ದ ಅಳುವನ್ನು ತಡೆಹಿಡಿದು ಇಸಬೆಲ್ ಹೇಳಿದಳು

"ಖಂಡಿತ ನಿನ್ನನ್ನು ನಾನು ಪ್ರೇಮಿಸುವೆ. ಆದರೆ ಹಲವು ಬಾರಿ ನಮ್ಮ ಧ್ಯೇಯ ಸಾಧನೆಗಾಗಿ ಹಲವರನ್ನು ದುಃಖಿಗಳನ್ನಾಗಿಸಬೇಕಾಗುತ್ತೆ"

ಅಲುಗುವ ತುಟಿಗಳಿಂದ ಇಸಬೆಲ್, "ಇಗೋ ನಿನ್ನ ಉಂಗುರ" ಎನ್ನುತ್ತ ಕೈಯನ್ನು ಮುಂದೆ ಚಾಚಿದಳು

"ಅದರಿಂದ ನನಗೇನೂ ಪ್ರಯೋಜನವಿಲ್ಲ. ನಮ್ಮ ಗೆಳೆತನದ ಕುರುಹಾಗಿ ನೀನೇ ಅದನ್ನ ಇರಿಸಿಕೊ. ಕಿರುಬೆರಳಿಗೆ ಧರಿಸಿದರಾಯಿತು. ನಮ್ಮ ಸ್ನೇಹ ಏನೂ ನಿಲ್ಲಬೇಕಾಗಿಲ್ಲ ತಾನೆ?"

"ಎಂದಿಗೂ ನಾನು ನಿನ್ನ ಗೆಳತಿ ಲ್ಯಾರಿ"

"ಹಾಗಾದರೆ ಉಂಗುರ ನಿನ್ನಲ್ಲಿರಲಿ"

"ಸರಿ"

ಮಾಮ್ ನ ಪುಸ್ತಕದ ಶೀರ್ಷಿಕೆ ಹಾಗೂ ಈ ಬರಹದ ಶೀರ್ಷಿಕೆಯನ್ನ ಕಠೋಪನಿಷತ್ತಿನ ಶ್ಲೋಕವೊಂದರಿಂದ ಆರಿಸಿದ್ದು. ಶ್ಲೋಕದ ಪೂರ್ಣಪಾಠ ಹೀಗಿದೆ. ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ, ದುರ್ಗಂ ಪಥಸ್ತಾತ್ ಕವಯೋ ವದಂತಿ (ಕತ್ತಿಯ ಹರಿತವಾದ ಅಲಗಿನ ಮೇಲೆ ನಡೆಯುವಂತೆ (ಆತ್ಮಜ್ಞಾನದ) ಹಾದಿಯು ದುರ್ಗಮವಾದದ್ದೆಂದು ಜ್ಞಾನಿಗಳು ಹೇಳುವರು.)

ಅವಕಾಶವಾದಾಗ ನೀವೂ ಮಾಮ್ ನನ್ನು ಓದಿ. ಈ ಚಳಿಗಾಲದಲ್ಲಿ ಬೆಚ್ಚಗೆ ಕುಳಿತು ಓದಬೇಕಾದ ಪುಸ್ತಕಗಳ ಪಟ್ಟಿಯಲ್ಲಿ ಇವನ ಪುಸ್ತಕಗಳು ಖಂಡಿತವಾಗಿ ಸೇರುತ್ತವೆ.



ಚಳಿ ಸ್ವಾರಸ್ಯ.....

●ಹೆಚ್. ಗೋಪಾಲಕೃಷ್ಣ

ಚಳಿ ಸ್ವಾರಸ್ಯಅಂದ ಕೂಡಲೇ ನನ್ನ ಮನಸ್ಸಿನಲ್ಲಿ ಒಂದು ದೊಡ್ಡ ನೆನಪಿನ ಗುಹೆಯ ಬಾಗಿಲು ತೆರೆದುಕೊಳ್ಳುತ್ತದೆ. ಚಳಿ ಅಂದ ಕೂಡಲೇ ನನ್ನ ನೆನಪಿಗೆ ಬರುವ ಮೊಟ್ಟ ಮೊದಲ ಪದ ಅಂದರೆ ಊದು ಕೊಳವಿ. ಊದು ಕೊಳವಿ ಹೆಸರು ಹೆಚ್ಚೂ ಕಡಿಮೆ ಮರೆತೇ ಹೋಗಿರುವ ಪದ. ನಾವು ಪುಟ್ಟವರಿದ್ದಾಗ ನಮ್ಮ ಮನೆಗಳಲ್ಲಿ ಸ್ನಾನದ ನೀರು ಕಾಯಿಸಲು ಬಚ್ಚಲು ಮನೆಯಲ್ಲಿ ಹಂಡೆ ಇರುತ್ತಿತ್ತು. ಈಗ ಹಂಡೆ ಪದ ಸಹ ಕಣ್ಮರೆ ಆಗುತ್ತಿದೆ. ಈ ಹಂಡೆ ಯನ್ನು ನೆಲದಲ್ಲಿ ಕಾಲುಭಾಗ ಹೂಣಿ ಸುತ್ತಲೂ ಮುಚ್ಚಿ ಸೌದೆ ಇಡಲು ಸ್ವಲ್ಪ ಜಾಗ ಬಿಡುತ್ತಿದ್ದರು. ಕೆಲವು ಮನೆಯಲ್ಲಿ ಮೂರು ಕಲ್ಲುಗಳ ಮೇಲೆ ಈ ಹಂಡೆ ಸ್ಥಾಪಿತವಾಗಿರುತ್ತಿತ್ತು. ಸೌದೆ ಜೋಡಿಸಲು ಮತ್ತು ಬೆಂಕಿ ಹಚ್ಚಿ ಸಲು ಸ್ವಲ್ಪ ಸ್ಥಳ ಇರುತ್ತಿತ್ತು. ಅದರಲ್ಲಿ ಸೌದೆ ತುರುಕಿ ಸೀಮೆ ಎಣ್ಣೆ ಸುರಿದು ಬೆಂಕಿ ಕಡ್ಡಿ ಗೀರಿ ಇಟ್ಟರೆ ಭಗ್ ಎಂದು ಹತ್ತಿಕೊಳ್ಳುತ್ತಿತ್ತು. ಸೀಮೆಎಣ್ಣೆ ಉರಿದು ಹೋಗುವಷ್ಟರಲ್ಲಿ ಸೌದೆ ನಿಗಿನಿಗಿಸಬೇಕು. ಇಲ್ಲ ಅಂದರೆ ಊದು ಕೊಳವೆಯಿಂದ ಊದಬೇಕು. ನಮ್ಮ ಮನೆಯಲ್ಲಿ ಸೌದೆ ಸ್ಟಾಕ್ ಇಡುತ್ತಿರಲಿಲ್ಲ. ವಾರಕ್ಕೊ ಹದಿನೈದು ದಿವಸಕ್ಕೆ ಸೌದೆ ಅಂಗಡಿಯಿಂದ ತರಿಸುವ ಸಂಪ್ರದಾಯ. ಹಾಗೆ ತರುವ ಸೌದೆ ಹಸಿ ಅಂದರೆ ಹಸಿ. ಬೆಂಕಿ ಉರಿಸಲು ಅಮ್ಮ ಊದು ಕೊಳವಿ ಇಂದ ಊದುತ್ತಾ ಕೂರುವಳು. ಅವಳ ಪಕ್ಕ ನಾವೂ ಕೂತು ಕೊಂಚ ಸಮಯ ಕಳೆದ ನಂತರ ಊದು ಕೊಳವೆ ನಮ್ಮ ಕೈಗಿಟ್ಟು ಊದುತ್ತಾ ಇರಿ ಬಂದೆ ಎಂದು ಅಡಿಗೆ ಮನೆ ಸೇರುತ್ತಿದ್ದಳು. ನಾವು ಊದೀ ಊದೀ ಬೆಂಕಿ ಆರದಿರುವ ಹಾಗೆ ಹರ ಸಾಹಸ ಪಡುತ್ತಿದ್ದೆವು. ಕಣ್ಣು ಕೆಂಪಗಾಗಿ ಹೊಗೆ ಗಂಟಲಿಗೆ ಹೋಗಿ ಬಿಡದೆ ಕೆಮ್ಮು ಬರುತ್ತಿದ್ದರೂ ನಾವು ಚಲ ಬಿಡದ ತ್ರಿವಿಕ್ರಮರು!

ಊದು ಕೊಳವೆ ಅಂದರೆ ಒಂದು ನೀರಿನ ಪೈಪ್ ತುಂಡು. ಎರಡು ಮೂರು ಅಡಿ ಉದ್ದದ ಕೊಳವೆ. ಒಂದು ತುದಿಯಲ್ಲಿ ನಿಮ್ಮ ಬಾಯಿ, ಆಕಡೆ ತುದಿಯಲ್ಲಿ ಬೆಂಕಿ ಉರಿಯಲು ಇರುವ ಸೌದೆ. ನೀವು ಎಷ್ಟು ಬೇಗ ಮತ್ತು ಒತ್ತಡದಿಂದ ಊದುತ್ತಿರೋ ಅಷ್ಟು ಬೇಗ ಬೆಂಕಿ ಹತ್ತುವ ಸಾಧ್ಯತೆ. ನಾನು ಊದು ಕೊಳವೆ ನೋಡಿಯೇ ಅದೆಷ್ಟೋ ದಶಕಗಳು ಆಗಿವೆ!

ಒಲೆ ಹೊತ್ತಿತಾ, ಅದರ ನಂತರ ಸೌದೆ ಕೆಂಡವಾಗಿ ನಿಗಿನಿಗಿ ಹೊಳೆಯು ವಾಗ ನಮ್ಮ ನಾಲಗೆ ಏನಾದರೂ ಕೊಡು ಎಂದು ಗೋಗರೆಯತ್ತದೆ. ನಾಲ್ಕು ಈರುಳ್ಳಿ ಕೆಂಡದ ಮಧ್ಯೆ ಹಾಕಿ ಸುಟ್ಟ ನಂತರ ತಿಂದರೆ... ಅದರ ಮಜವೇ ಮಜಾ. ಈರುಳ್ಳಿ, ಹಲಸಿನ ಬೀಜ ಕಡಲೇ ಕಾಯಿ ಇವೆಲ್ಲ ಆಗ ನಮಗೆ ಒಲೆ ಮುಂದೆ ಕೂತು ನಾವೇ ಸುಟ್ಟು ಬಾಯಿಗೆ ಹಾಕ ಬಹುದಾದ ಬೆಳಗಿನ ಕುರುಕಲು.

ಇಷ್ಟು ಹೊತ್ತಿಗೆ ಅಮ್ಮನ ಬೆಳಗಿನ ಕೆಲಸ ಒಂದು ಹಂತಕ್ಕೆ ತಲುಪಿದೆ. ಬಚ್ಚಲಿಗೆ ಬರುವಳು. ಕೈಯಲ್ಲಿ ಒಂದು ಸೌಟು, ಪಾತ್ರೆಯಲ್ಲಿ ಹಿಟ್ಟು ಉಪ್ಪು. ಅಲ್ಲೇ ಕೂತು ಹಿಟ್ಟು ಕಲಸಿ ಸೌಟಿಗೆ ತಟ್ಟಿ ಅದನ್ನು ಕೆಂಡದ ಮೇಲೆ ಇಡುತ್ತಿದ್ದಳು. ಕೆಲವೇ ಕ್ಷಣದಲ್ಲಿ ರೊಟ್ಟಿ ರೆಡಿ. ಸೌಟಿನ ರೊಟ್ಟಿ. ರೊಟ್ಟಿ ಮಾಡಿ ಮಾಡಿ ಕೊಡುತ್ತಾ ಇದ್ದರೆ ಲೆಕ್ಕ ಇಲ್ಲದ ಹಾಗೆ ನಾವು ಖಾಲಿ ಮಾಡಿದ್ದೇ ಮಾಡಿದ್ದು..!

ಮತ್ತೆ ಕೆಲವು ಸಲ ಹಂಡೆ ಒಲೆಯಲ್ಲಿ ಕೆಂಡದ ರೊಟ್ಟಿ ಮಾಡ್ತಾ ಇದ್ದರು. ಅದು ಹೇ ಗೇ ಅಂದರೆ ರೊಟ್ಟಿ ಹಿಟ್ಟನ್ನು ಮುತ್ತುಗದ ಎಲೆಯ ಮೇಲೆ ತಟ್ಟುವುದು. ಅದನ್ನು ಅರ್ಧಕ್ಕೆ ಮಡಚಿ ಕೆಂಡದ ಮೇಲೆ ಬೇಯಿಸುವುದು. ಅದರ ಮೇಲೂ ಕೆಂಡ ಜೋಡಿಸಿದರೆ ಕೆಲವೇ ನಿಮಿಷದಲ್ಲಿ ಕೆಂಡದ ರೊಟ್ಟಿ ರೆಡಿ. ಆಚೆ ತೆಗೆದು ಕಪ್ಪಗೆ ಸುಟ್ಟಿದ್ದ ಎಲೆಯ ಚೂರು ಬಿಡಿಸಿ ಒಂದು ದೊಡ್ಡ ಚಮಚ ತುಪ್ಪವನ್ನೋ ಒಂದು ಲಿಂಬೆ ಗಾತ್ರದ ಬೆಣ್ಣೆಯ ನ್ನೋ ಹಾಕಿಕೊಂಡು ಬಾಯಿಗೆ ಇರಿಸಿದರೆ ಸ್ವರ್ಗ ಹತ್ತಿರ ಇದ್ದಂತೆ...

ನಾವು ಈಗ ಬೆಳೆದವರು. ಕೆಂಡದ ರೊಟ್ಟಿ, ಸೌಟಿನ ರೊಟ್ಟಿ ಕಾಲಗರ್ಭ ಸೇರಿದೆ. ಈಗ ಚಳಿ ಆದರೆ....

ಸಂಜೆ ಆಗುತ್ತಿದ್ದ ಹಾಗೇ ಮೋಡ ಮುಸುಕಿ ಮೈ ಕೈ ಕೊರೆಯಲು ಶುರು ಆಗುತ್ತೆ. ಮೊನ್ನೆ ತಂದಿರೋ ಈರುಳ್ಳಿ ಕೈ ಬೀಸುತ್ತ ಕರೆಯುತ್ತೆ. ಅದನ್ನ ಉದ್ದುದ್ದಕ್ಕೆ ಸಣ್ಣಗೆ ಹಚ್ಚಿಟ್ಟುಕೊಳ್ಳಿ. ಅದಕ್ಕೆ ಕೊಂಚ ಓಂ ಕಾಳು ಪುಡಿ ಮಾಡಿ ಕಡಲೆ ಹಿಟ್ಟು, ಅಕ್ಕಿ ಹಿಟ್ಟು ಸೇರಿಸಿ, ಕೊಂಚ ಅಚ್ಚ ಮೆಣಸಿನ ಪುಡಿ ಕಲೆಸಿ. ಚೂರು ಉಪ್ಪು ಉದುರಿಸಿ. ಒಲೆ ಮೇಲೆ ಕಾಯುತ್ತಿರುವ ಬಾಂಡ ಲಿಯಲ್ಲಿನ ಎಣ್ಣೆ ಒಳಗೆ ಈ ಹಿಟ್ಟನ್ನು ಪಿಡಿಚೆ ಮಾಡಿ ಮಾಡಿ ಮಾಡಿ ಹಾಕಿ. ಒಂದೊಂದು ಒಬ್ಬೆ ರೆಡಿ ಆಗ್ತಾ ಆಗ್ತಾ ಹಾಲಿನಲ್ಲಿ ಕೂತು ಹರಟೆ ಹೊಡೆಯುತ್ತ ಇರುವ ಬಂಧುಗಳಿಗೆ ತಟ್ಟೆಯಲ್ಲಿ ಹಾಕಿ ಕೊಡ್ತಾ ಇರಿ.... ಹತ್ತು ಕೇಜಿ ಈರುಳ್ಳಿ ಒಂದು ಗಂಟೆ ಯಲ್ಲಿ ಖಾಲಿ ಆಗಲಿಲ್ಲ ಅಂದರೆ ಕೇಳಿ..

ಈರುಳ್ಳಿ ಮುಗೀತಾ ಚಿಂತೆ ಬೇಡ ಅದರ ಜತೆ ಆಲೂಗೆಡ್ಡೆ ಸಹ ತಂದಿದೀರಿ ತಾನೇ.. ಅದನ್ನ ಸಣ್ಣದಾಗಿ ಗುಂಡಗೆ ಹೆಚ್ಚಿಕೊಳ್ಳಿ. ಕಡಲೆಹಿಟ್ಟು, ಅಕ್ಕಿಹಿಟ್ಟು ಅಚ್ಚ ಮೆಣಸಿನಪುಡಿ ಹಾಕಿ ಚೂರು ಉಪ್ಪು ಸೇರಿಸಿ ಅಲ್ಲಕ ವಾಗೀ ಕಲೆಸಿ. ಕಾದ ಬಾಂಡಲೀ ಎಣ್ಣೆಗೆ ಆಲೂಗೆಡ್ಡೆ ಹಿಟ್ಟಿನಲ್ಲಿ ಅದ್ದಿ ಅದ್ದಿ ಬಿಡಿ. ಅದು ಹೇಗೆ ಖರ್ಚಾಯಿತು ಅಂತಲೇ ನಿಮಗೆ ತಿಳಿಯದ ಹಾಗೆ ಅದು ಖಾಲಿ. ಸ್ವಲ್ಪ ಶಾನ್ಯಾ ಇದ್ದರೆ ನೀವು ಮೊದಲೇ ಒಂದು ತಟ್ಟೆ ತುಂಬಿಸಿ ಬಚ್ಚಿಡಿ, ಆಮೇಲೆ ನಿಮಗೂ ಬೇಕು ಅಲ್ವಾ..

ಚಳಿಗೆ ಒಂದು ಸೊಬಗು ನೀಡುವ ತಿನಿಸಿನಲ್ಲಿ ಬೋಂಡಾ ಪಕೋಡಾ ನಂತರ ಮಿರ್ಚಿ, ಮಿರ್ಚಿ ಜತೆಗೆ ಖಾರಾ ಪುರಿ, ಚುರುಮುರಿ ಇವೆಲ್ಲಾ ಸಾಥ್ ಕೊಡುತ್ತವೆ. ತುಂಬಾ ಈ ಚೆಗೆ ಪಾನಿಪೂರಿ ಮಾಸಾಲಾಪುರಿ ಈ ಗುಂಪಿಗೆ ಸೇರಿದೆ. ಅದರ ಜತೆಗೆ ಎಂದೂ ಮಾಸದ ಒಂದು ಇದ್ದರೆ ಅದು ಬೇಯಿಸಿದ ಕಡಲೆಕಾಯಿ. ಒಂದೊಂದೇ ಕಾಯಿ ಬಿಡಿಸುತ್ತಾ ಉಪ್ಪು ನೀರನ್ನು ಒಳಗೆ ಹೀರುತ್ತಾ ಬೇಯಿಸಿದ ಕಡಲೆ ಬೀಜ ಆಗಿಯುತ್ತಿದ್ದರೆ... ಹಾ ಹಾ.

ಕಾಂಗ್ರೆಸ್ ಕಡಲೆ ಬೀಜ ಮತ್ತೊಂದು ಸಾಥ್ ನೀಡುವ ಗುಂಪಿಗೆ ಸೇರುತ್ತದೆ. ಅದರೊಂದಿಗೆ ಗರಮಾಗರಂ ಕಡ್ಲೆ ಕಾಯಿ.. ಇವು ಇಲ್ಲದೇ ಯಾವುದೇ ಚಳಿಗಾಲವೂ ಪೂರ್ಣ ಆಗದು.

ಸ್ವಲ್ಪ ಹೈ ಟೆಕ್ ಗುಂಪಿಗೆ ನೀವು ಸೇರಿದ್ದರೆ, ಸಂಜೆ ಚಳಿಯಲ್ಲಿ ಗುಂಡು ಸೇವೆ ಬಾರೀ ಮಜಾ ಕೊಡುತ್ತೆ ಅಂತ ಪ್ರಾಜ್ಞರು ಅಪ್ಪಣೆ ಕೊಡಿಸುತ್ತಾರೆ.

ಚಳಿಯ ಸೊಬಗನ್ನು ಸ್ವಾದಿಸಲು ಚಳಿ ಕಾಲ ವರ್ಷಕ್ಕೆ ಐದಾರು ಬಾರಿ ಆದರೂ ಬರಬೇಕು ಅಂತ ಪ್ರಕೃತಿ ದೇವತೆಗೆ ಯಾರಾದರೂ ಹಕ್ಕೊತ್ತಾಯ ಮಾಡುವ ಹಾಗಿದ್ದರೆ ಮೊದಲು ನನ್ನ ಸೇರಿಸಿಕೊಳ್ಳಿ ಅಂತ ನನ್ನ ಕೋರಿಕೆ. ■

ಚಳಿಗಾಲವಯ್ಯ ಚಳಿಗಾಲ...

● ನಳಿನಿ ಟಿ. ಭೀಮಪ್ಪ

ದೀಪಾವಳಿಯ ನೀರು ತುಂಬುವ ಹಬ್ಬದ ದಿನ ಚಳಿಯೂ ಪ್ರವೇಶಿಸುತ್ತದೆ, ಆಗ ಕಾಗೆಯ ಬಣ್ಣ ಮನುಷ್ಯನಿಗೆ ಮನುಷ್ಯನ ಬಣ್ಣ ಕಾಗೆಗೆ ಬರುತ್ತದೆ ಎಂದು ಹಿರಿಯರು ಹೇಳುವುದುಂಟು. ಕಾಗೆ ಬೆಳ್ಳಗಾಗುತ್ತೋ ಇಲ್ಲವೋ, ಮನುಷ್ಯನಿಗೆ ಮಾತ್ರ ಕಾಗೆಯ ಬಣ್ಣ ಬರುವುದು ಖಂಡಿತ.

ಚಳಿಗಾಲ ಬಂತೂ ಎಂದರೆ, ಬಹುತೇಕ ಹಿರಿಯರಿಗೆ ಟ್ರಾಫಿಕ್ ಜಾಮ್ ಆದಾಗ ವಾಹನಗಳು ಸಿಲುಕಿ, ಕೊಂಚ ಕೊಂಚವೇ ಆಮೆಯ ರೀತಿ ಇಂಚಿಂಚೇ ತೆವಳುತ್ತ, ದಾರಿ ಕ್ಲಿಯರ್ ಆಗುವುದಕ್ಕೆ ಗಂಟೆಗಟ್ಟಲೆ ಸಮಯ ತೆಗೆದುಕೊಳ್ಳುವ ಹಾಗೆ, ಬೆಳಿಗ್ಗೆ ಏಳುವ ಹೊತ್ತಿಗೆ ಕೈಕಾಲುಗಳ ಕೀಲುಗಳೆಲ್ಲ ಅಲ್ಲಲ್ಲೇ ಹಿಡಿದು ಸೆಟೆದುಕೊಂಡಂತಾಗಿ, ನಿಧಾನವಾಗಿ ಸಹಜ ಸ್ಥಿತಿಗೆ ಬರುವಷ್ಟರಲ್ಲಿ ಹೊತ್ತು ನೆತ್ತಿಗೇರಿರುತ್ತದೆ. ಹಳೆಯ ನೋವುಗಳೆಲ್ಲ ನಾಮುಂದೆ ತಾಮುಂದೆ ಎಂದು ಕುಣಿಕುಣಿಯುತ್ತಾ ಹೊರಬರುತ್ತಿರುತ್ತವೆ. ದಮ್ಮಿನಿಂದ ಬಳಲುವವರಿಗೆ ಮತ್ತಷ್ಟು ಉಸಿರುಕಟ್ಟಿಸುತ್ತದೆ. ಹಾಗಾಗಿ ಚಳಿಗಾಲಕ್ಕೂ ಇಳಿಗಾಲಕ್ಕೂ ಒಂದು ರೀತಿಯ ಎಣ್ಣೆ ಶೀಗೇಕಾಯಿ ಸಂಬಂಧ ಎನ್ನಬಹುದು. ಮನೆಯ ಕಿಟಕಿ ಬಾಗಿಲುಗಳೂ ಸಹ ಥಂಡಿ ಹಿಡಿದು ಒಂದು ಸುತ್ತು ಊದಿಕೊಂಡು, ಹಾಕುವುದಕ್ಕೂ ತೆಗೆಯುವುದಕ್ಕೂ ಸರ್ಕಸ್ ಮಾಡಿಸುತ್ತವೆ. ಕೆಲವು ಎಣ್ಣೆಗಳು ತಂಪಿಗೆ ಮುದುರಿ ಗಟ್ಟಿಯಾಗಿ ಕುಳಿತು ಹೊರಬರಲಾರೆ ಎಂದು ಸ್ಟ್ರೈಕ್ ಮಾಡುತ್ತವೆ.

ತಣ್ಣಗೆ ಐಸ್ ತರಹ ಕೊರೆಯುವ ನೀರು, ಮುಖ ಸೋಕಿದರೂ ಬೆಚ್ಚುವಂತೆ, ಬುಡಕ್ಕೆ ಬಿದ್ದರೂ ಬೆದರುವಂತೆ ಮಾಡುತ್ತದೆ. ಬಾಯಿಗೆ ಹಾಕಿಕೊಂಡರಂತೂ ಸುಮ್ಮನಿದ್ದ ಹಲ್ಲುಗಳೆಲ್ಲ ಶಾಕ್ ಹೊಡೆದಂತೆ ಎಚ್ಚರಗೊಂಡು ಪಿಟೀಲು ಕೊಯ್ಯಲು ಶುರುಮಾಡುತ್ತವೆ. ಚಳಿಗಾಳಿಗೂ ಸಹ ಮರಕುಟಿಕ ಹಕ್ಕಿ ಮರಕ್ಕೆ ಕೊಕ್ಕಿನಿಂದ ಕುಟ್ಟಿ ಸದ್ದು ಮಾಡುವಂತೆ ಹಲ್ಲುಗಳು ಮಾಡುತ್ತಲೇ ಇರುತ್ತವೆ. ಚರ್ಮ ಬರಬಿದ್ದ ಭೂಮಿಯಂತೆ ಪಾಳುಬಿಟ್ಟು, ಇಟ್ಟಿಗೆಗಳ ನಡುವಿನ ಬಿರುಕಿನೊಳಗೆ ಗಾರೆ ತುಂಬುವ ಹಾಗೆ ಏನಾದರೊಂದು ಮುಲಾಮನ್ನು ತುಂಬುತ್ತಲೇ ಇರಬೇಕು. ತುರಿಕೆಯ ಕಿರಿಕಿರಿಯಂತೂ ಸಾಮಾನ್ಯ. ಹಾಗಾಗಿ ಉಗುರುಗಳು 24*7 ಸನ್ನದ್ಧ ಶಸ್ತ್ರಸಜ್ಜಿತ ಸೈನಿಕರಂತೆ ಯಾವಾಗ ದೇಹದ ಯಾವ ಭಾಗದಿಂದ ಬುಲಾವ್ ಬರುವುದೋ ಎಂದು ಕಾಯಬೇಕಾದ ಅನಿವಾರ್ಯತೆ. ಕೆರೆದೂ ಕೆರೆದೂ ಮೈಕೈ ಎಲ್ಲ ಟಾರ್ ಕಿತ್ತು ಹೋದ ರಸ್ತೆಯ ಮೇಲೆ ವಾಹನಗಳು ಧೂಳೆಬ್ಬಿಸಿದಂತೆ, ಬೂದಿ ಅಡರಿದಂತಾಗಿರುತ್ತವೆ. ಶೀತ, ಕೆಮ್ಮು, ನೆಗಡಿ, ಜ್ವರಗಳು ಒಂದರ ಹಿಂದೊಂದು ಒದ್ದುಕೊಂಡು ಬರುತ್ತಿರುತ್ತವಾದ್ದರಿಂದ ಮೂಗು, ಗಂಟಲು, ಕಿವಿಗಳಿಗೆ ಆಗಾಗ ಬ್ಲಾಕ್ ಭಾಗ್ಯ ದೊರೆಯುತ್ತಿರುತ್ತದೆ. ಕ್ಲಿನಿಕ್ಕು, ಆಸ್ಪತ್ರೆಗಳ ಮುಂದೆ ಜಾತ್ರೆಯೋ ಜಾತ್ರೆ. ವೈದ್ಯರುಗಳಿಗೆ ಸುಗ್ಗಿಯೋ ಸುಗ್ಗಿ.

ಚಳಿಗಾಲಕ್ಕೆ ಮನುಷ್ಯನಿಗೆ ಎರಡು ಹೊಟ್ಟೆ ಎಂದು ಹೇಳುತ್ತಾರೆ. ಹಸು, ಎಮ್ಮೆಗಳು ಮೆಲುಕು ಹಾಕುತ್ತಿರುವಂತೆ ಬಾಯಿಗೆ ಸದಾ ಏನಾದರೊಂದು ಮೇವು ಹಾಕುತ್ತಲೇ ಇರಬೇಕೆನಿಸುತ್ತದೆ. ಅಗತ್ಯಕ್ಕಿಂತ ಹೆಚ್ಚು ಸಿಹಿ, ಕರಿದ ತಿಂಡಿಗಳನ್ನು ತಿಂದೂ ತಿಂದೂ ದೇಹಕ್ಕೆ ಒಂದೆರಡು ಟಯರ್‌ಗಳು ಸೇರ್ಪಡೆಗೊಳ್ಳುವುದು ಖಚಿತ.

ವಿಚಿತ್ರ ಏನೂ ಎಂದರೆ, ಹೊಟ್ಟೆಗೆ ಇನ್‌ಕಮಿಂಗ್ ಹೆಚ್ಚಿದ್ದರೂ ಔಟ್ ಗೋಯಿಂಗ್ ಕಡಿಮೆ. ಅದೇ ನೀರಿನ ವಿಷಯದಲ್ಲಿ ಸಂಪೂರ್ಣ ಉಲ್ಟಾ, ಇನ್‌ಕಮಿಂಗ್ ಕಡಿಮೆ ಆದರೆ ಔಟ್‌ಗೋಯಿಂಗ್ ಹೆಚ್ಚು.

ಈ ಚಳಿಗೆ ಪ್ರಕೃತಿಯೂ ಸಹ ಮುಂಜಾನೆ ಹಿಮದ ಚಾದರನ್ನು ಹೊಚ್ಚಿ ಮಲಗಿರುತ್ತದೆ. ಗಿಡಮರದ ಎಲೆಗಳು ದೇವರಿಗೆ ಮುಡಿಕೊಟ್ಟಂತೆ ಬೋಳುಬೋಳಾಗಿರುತ್ತವೆ. ಪ್ರಯಾಸವಿಲ್ಲದ ಪ್ರವಾಸಕ್ಕೆ ಚಳಿಗಾಲವೇ ಚಂದ. ಸೂರ್ಯ ಕೂಡಾ ಮುಂಜಾನೆ ಬೇಗ ಏಳುವುದಿಲ್ಲ, ಎದ್ದರೂ ಸಂಜೆಯ ತನಕವೂ ರಣರಣ ಉರಿಯದೆ ಸ್ವಲ್ಪ ಮಬ್ಬಾಗಿಯೇ ಇರುತ್ತಾನೆ. ಸಂಜೆಯೂ ಸಹ ಊರಿಗೆ ಮುಂಚೆ ಮುಳುಗುತ್ತಾನೆ. ಹಾಗಾಗಿ ಹಗಲು ಕಡಿಮೆ, ದೀರ್ಘ ರಾತ್ರಿ. ಸೊಂಪಾಗಿ ನಿದ್ರಿಸುವವರಿಗೆ ಮತ್ತಷ್ಟು ಸ್ವರ್ಗಸುಖ. ರಗ್ಗು, ಸ್ವೆಟರ್, ಶಾಲು, ಟೋಪಿ, ಮಫ್ಲರ್ ಎಲ್ಲವೂ ಮೂಲೆ ಮುಕ್ಕಟಿನಿಂದ ಮೈಕೊಡವಿಕೊಂಡು ಹೊರಬರುತ್ತವೆ. ಕೆಲವೊಮ್ಮೆ ಬಟ್ಟೆ, ಬಾಚಣಿಕೆಗಳೂ ಮಿಂಚಿನಂತೆ ಶಾಕ್ ಹೊಡೆದ ಅನುಭವ ನೀಡುತ್ತಿರುತ್ತವೆ. ಬಹುತೇಕ ಜನರು, ಯಾಕಾದರೂ ಬೆಳಕು ಹರಿಯುತ್ತದೆಯೋ ಎಂದು ಗೊಣಗುತ್ತಲೇ ಎದ್ದು, ಆಗಾಗ ಬಿಸಿಬಿಸಿ ಪಾನೀಯಗಳನ್ನು ಗುಟುಕರಿಸುತ್ತಲೇ ಕೆಲಸ ಕಾರ್ಯಗಳಲ್ಲಿ ತೊಡಗುತ್ತಾರೆ.

ಈ ಕಾಲದಲ್ಲಿ ಪುರುಸೊತ್ತು ಇಲ್ಲದ ಹಾಗೆ ಮದುವೆಗಳು ನಡೆಯುತ್ತಿರುತ್ತವಾದ್ದರಿಂದ, ಮನೆಯ ತುಂಬಾ ಆಮಂತ್ರಣ ಪತ್ರಿಕೆಗಳು, ಹೆಣ್ಣುಮಕ್ಕಳ ಶಾಪಿಂಗ್, ಊರೂರಿನ ಅಲೆದಾಟ ಸಾಮಾನ್ಯ. ನವಜೋಡಿಗಳು ಹೊಸ ಹೊಸ ಸ್ಥಳಗಳಿಗೆ ಮಧುಚಂದ್ರಕ್ಕೆ ಹಾರುತ್ತಿರುತ್ತಾರೆ. ಹಾಗಾಗಿ ವಯಸ್ಸಿನಲ್ಲಿರುವವರು ಮಾಗಿಯ ಈ ಕಾಲ ಮತ್ತಷ್ಟು ದೀರ್ಘವಾಗಿರಬೇಕೆಂದು ಹಂಬಲಿಸುವ, ವಯಸ್ಸು ಮಾಗಿದವರು ಬೇಗನೆ ಮುಗಿದು ಹೋಗಬಾರದೇ ಎಂದು ಹಲುಬುವ ಕಾಲವಿದು. ಅದೇನೇ ಅನುಕೂಲ ಅನಾನುಕೂಲ ಇದ್ದರೂ, ಬಹುತೇಕ ಜನರಿಗೆ ಇರುವ ಮೂರು ಕಾಲಗಳಲ್ಲಿ ಚಳಿಗಾಲವೇ ಅತ್ಯಂತ ಆಪ್ತ ಎನ್ನುವುದನ್ನು ತಳ್ಳಿಹಾಕಲಾಗದು ಅಲ್ಲವೇ?

ಮಲೆನಾಡಿನ ಛಳಿಗಾಲ

●ಬೇಲೂರು ರಾಮಮೂರ್ತಿ

ನಾನು ಹುಟ್ಟಿ ಬೆಳೆದದ್ದು ಮಲೆನಾಡಿನ ಪ್ರದೇಶಗಳಲ್ಲಿ. ಅಲ್ಲಿ ಎಲ್ಲವೂ ತುಸು ಹೆಚ್ಚೇ. ಮಳೆ, ಛಳಿ ಬಿಸಿಲು ಎಲ್ಲವೂ ವಿಪರೀತ. ನಾನು ಅನುಭವಿಸಿದ ಛಳಿಗಾಲವಂತೂ ಮರೆಯಲಾಗದ್ದು. ಆಗ ಸುಮಾರು 1962–63ರ ನೆನಪಿನ ದಿನಗಳು. ನಮ್ಮದು ನಾಟಿ ಹೆಂಚಿನ ಮನೆ. ಎಷ್ಟೇ ಹೊದಿಕೆ ಹೊದ್ದುಕೊಂಡು ಮಲಗಿದ್ದರೂ ಎಲ್ಲಿಂದಲೋ ಸುಯ್ಯನೆ ಗಾಳಿ ಬೀಸುತ್ತಿತ್ತು. ಈಗಿನಂತೆ ರಗ್ಗುಗಳು ಆಗ ಬಂದಿರಲಿಲ್ಲ. ನಮಗೆಲ್ಲಾ ಒಂದೊಂದು ಬೆಡ್ ಷೀಟು ಮಾತ್ರ ಹೊದೆಯೋಕೆ ಇದ್ದುದು. ನಾವು ಅದರ ಮೇಲೆ ನಮ್ಮ ತಂದೆಯ ಪಂಚೆಯನ್ನೂ ಸೇರಿಸಿಕೊಂಡು ಬಿಡುತ್ತಿದ್ದೆವು. ಹೊದಿಕೆಯ ಮೇಲೆ ಬಿಳಿ ಬಟ್ಟೆ ಇದ್ದರೆ ಜಾಸ್ತಿ ಛಳಿ ಆಗಲ್ಲ ಎನ್ನುವ ನಂಬಿಕೆ ಆಗ. ಬೆಳಗ್ಗೆ ಏಳು ಗಂಟೆಯಾದರೂ ದಾರಿಯಲ್ಲಿ ಮಂಜು ಕರಗಿರುತ್ತಿರಲಿಲ್ಲ. ಬಿಸಿಲೂ ಕಾಣಿಸುತ್ತಿರಲಿಲ್ಲ. ಆದರೂ ನಾವು ಆರು ಗಂಟೆಯೊಳಗೆ ಏಳಲೇಬೇಕು. ಅಂದಿನ ದಿನಗಳಲ್ಲಿ ದೇವರಿಗೆ ನಮಸ್ಕಾರ, ದೇವಸ್ಥಾನಕ್ಕೆ ಹೋಗುವುದು ನಮ್ಮ ನಿತ್ಯ ಕಾರ್ಯಕ್ರಮವಾಗಿತ್ತು. ಆದರೆ ಮಾಗಿಕಾಲ ಬಂತು ಅಂದರೆ ಮಾತ್ರ ನಮಗೆ ಬಹಳ ಕಷ್ಟಕಾಲ. ನಮ್ಮ ಊರಿನ ಚನ್ನಕೇಶವ ದೇವಸ್ಥಾನದಲ್ಲಿ ಮಾಗಿಕಾಲದ ಒಂದು ತಿಂಗಳಲ್ಲಿ ಮೊದಲ ಹತ್ತು ದಿನ ದೇವಸ್ಥಾನ ತೆಗೆಯುತ್ತಿದುದು ಬೆಳಗಿನ ನಾಲ್ಕು ಗಂಟೆಗೆ. ನಂತರ ದೇವರಿಗೆ ಸೂರ್ಯೋದಯಕ್ಕೆ ಮುಂಚೆ ಪೂಜೆ, ಮಹಾಮಂಗಳಾರತಿ ಆಗುತ್ತಿತ್ತು, ಅಂದರೆ ಆರು ಗಂಟೆಯ ಒಳಗೆ. ನಂತರ ಹತ್ತು ದಿನಗಳು ಬೆಳಗ್ಗೆ ಎಂಟು ಗಂಟೆಯ ಒಳಗೆ. ಮುಂದಿನ ಹತ್ತು ತಿಂಗಳು ರಾತ್ರಿ ವಿಶೇಷ ಪೂಜೆ, ಸ್ವರ್ಗದ ಬಾಗಿಲು ಅಂದರೆ ದೇವಾಲಯದ ಉತ್ತರ ದಿಕ್ಕಿನ ಬಾಗಿಲಲ್ಲಿ ದೇವರ ಉತ್ಸವ ಬರುತ್ತಿತ್ತು. ನಾನು ನಮ್ಮ ಅಕ್ಕ ಬೆಳಗಿನ ಝಾವದ ಮಧುರ ನಿದ್ದೆಯಲ್ಲಿರಬೇಕಾದರೆ ನಮ್ಮಮ್ಮ ನಮ್ಮಿಬ್ಬರನ್ನೂ ಎಬ್ಬಿಸೋಳು. ಏಳ್ರೀ ದೇವಸ್ಥಾನಕ್ಕೆ ಹೋಗಬೇಕಲ್ಲ ಅಂತ. ಗೊಣಗಿಕೊಂಡು, ಬೇಜಾರು ಮಾಡಿಕೊಂಡು ಎದ್ದು ತಣ್ಣೀರಿನಲ್ಲಿ ಮುಖ ತೊಳೆದುಕೊಂಡು ಇಬ್ಬರೂ ದೇವಸ್ಥಾನಕ್ಕೆ ಹೋಗುತ್ತಿದ್ದೆವು. ಹೋಗುವ ಮುಂಚೆ ಕಾಫಿ ಸಿಗುವ ಅವಕಾಶ ಇರಲಿಲ್ಲ. ಏಕೆಂದರೆ ಅಂದಿನ ದಿನಗಳಲ್ಲಿ ನಮ್ಮ ಮನೆಗೆ ಹಾಲು ಹಾಕುವ ವರ್ತನೆಯ ಹೆಂಗಸು ಬರುತ್ತಿದ್ದುದೇ ಆರು ಗಂಟೆಗೆ. ತಣ್ಣನೆಯ ಗಾಳಿ ತುಂತುರು ಹನಿಯಂತೆ ಮೈ ಮೇಲೆ ಸುರಿಯುತ್ತಿರುವ ಅನುಭವವಾಗುತ್ತಿರುವಾಗ ಬಿಗಿಯಾಗಿ ಕೈ ಕಟ್ಟಿಕೊಂಡು ಮೈ ನಡುಗಿಸಿಕೊಂಡು ದೇವಸ್ಥಾನಕ್ಕೆ ಹೋಗುತ್ತಿದ್ದೆವು. ಒಂದು ರೀತಿ ದೇವಸ್ಥಾನಕ್ಕೆ ಹೋಗುವುದರಲ್ಲಿ ನಮ್ಮ ಅಂತರಂಗದ ಆಸೆಯೂ ಇರುತ್ತಿತ್ತು. ಮಾಗಿಕಾಲದ ಒಂದು ತಿಂಗಳು ದೇವರ ನೈವೇದ್ಯಕ್ಕೆ ಹುಗ್ಗಿ (ಪೊಂಗಲ್ ಅಂತಾರಲ್ಲ ಅದು) ಮತ್ತು ಮೊಸರನ್ನ ಮಾಡುತ್ತಿದ್ದರು. ಅದರ ಆಸೆಗೆ ಅರ್ಧ ನಾವು ದೇವಸ್ಥಾನಕ್ಕೆ ಹೋಗುತ್ತಿದ್ದೆವು ಅಂದರೂ ತಪ್ಪಿಲ್ಲ. ನಾವು ದೇವಸ್ಥಾನಕ್ಕೆ ಹೋಗುವವರೆಗೂ ಛಳಿಯಲ್ಲಿ ಒದ್ದಾಡುತ್ತಿದ್ದೆವು. ನಮ್ಮ ಹಲ್ಲುಗಳು ಗಡಗಡ ನಡುಗುತ್ತಿದ್ದವು. ಆದರೆ ದೇವಸ್ಥಾನದೊಳಕ್ಕೆ ಕಾಲಿಟ್ಟೆವು ಎಂದರೆ ಛಳಿ ಮಂಗಮಾಯ. ದೇವಸ್ಥಾನದ ಒಳಾವರಣವಂತೂ ಓವನ್ ಇದ್ದ ಹಾಗಿರೋದು. ನಾವು ದೇವರಿಗೆ ನಮಸ್ಕಾರ ಮಾಡಿ ಬಹಳ ಕಷ್ಟಪಟ್ಟು ತೀರ್ಥ ಕುಡಿದು (ಯಾಕೆಂದರೆ ಅದೂ ತಣ್ಣಗಿರುತ್ತಿತ್ತು. ಒಂದು ಉದ್ದರಣೆ ನೀರು ನಮ್ಮ ಶರೀರದ ಯಾವ್ಯಾವ ಭಾಗಗಳಲ್ಲಿ ಸಂಚಾರ ಮಾಡುತ್ತೆ ಎನ್ನೋದು ಚನ್ನಾಗಿ ತಿಳಿಯೋದು) ಒಂದು ಕಡೆ ಮುದುರಿಕೊಂಡು ಕೂತುಬಿಡುತ್ತಿದ್ದೆವು.

ದೇವರಿಗೆ ನೈವೇದ್ಯ, ಮಹಾ ಮಂಗಳಾರತಿ ಆಗಿ ಒಬ್ಬರು ಪರಿಚಾರಕರು ದೊಡ್ಡ ದಬರಿಯಲ್ಲಿ ಹಾಕಿಕೊಂಡು ಅದಕ್ಕೆ ಬಟ್ಟೆ ಮುಚ್ಚಿಕೊಂಡು ಮಂಟಪಳ್ಳಿ ಕಡೆ (ಪ್ರಸಾದವನ್ನು ಭಕ್ತರಿಗೆ ವಿನಿಯೋಗಿಸುವ ಸ್ಥಳ) ಹೊರಟರೆ ನಾವು ಅವರನ್ನು ಹಿಂಬಾಲಿಸುತ್ತಿದ್ದೆವು. ದೇವಸ್ಥಾನದ ಹೊರಾವರಣಕ್ಕೆ ಬಂದರೆ ಮತ್ತೆ ಛಳಿ. ಆಗೆಲ್ಲಾ ಮಕ್ಕಳಿಗೆ ರಾತ್ರಿ ಉಡುಪು, ಪ್ಯಾಂಟು ಇರಲಿಲ್ಲ. ಏನಿದ್ರೂ ಚಡ್ಡಿ ಷರಟು. ಅದರಲ್ಲಿದ್ದರೆ ಮೈಯೆಲ್ಲಾ ನಡುಗುತ್ತಲೇ ಇರುತ್ತಿತ್ತು. ಒಂದೊಂದು ದಿನ ಮಂಟಪಳ್ಳಿಗೆ ಹೆಚ್ಚು ಜನ ಬರುತ್ತಿದ್ದರು. ಆಗ ನಮಗೆ ಸಿಗುತ್ತಿದ್ದ ಪ್ರಸಾದ ಬಹಳ ಕಮ್ಮಿ. ಅವರು ಕೊಟ್ಟೊಡನೆ ಗಬಕ್ಕಂತ ಬಾಯಿಗೆ ಹಾಕ್ಕೊಂಡು ಬಿಡುತ್ತಿದ್ದೆವು. ಕೈ ತೊಳೆದುಕೊಂಡು ಮತ್ತೆ ಕೈ ಒಡ್ಡುತ್ತಿದ್ದೆವು. ತಣ್ಣೀರಿನಲ್ಲಿ ಕೈ ತೊಳೆದುಕೊಳ್ಳುವ ಕಷ್ಟ ತಪ್ಪಿಸಿಕೊಳ್ಳಲು ಅಲ್ಲಿದ್ದ ಕಂಬಕ್ಕೇ ಕೈ ಒರೆಸುತ್ತಾ ಪೊಂಗಲೇ ಪ್ರಸಾದಂ ಕಂಬಮೇ ತಣ್ಣಿ ಎನ್ನುತ್ತಿದ್ದೆವು. ಐಯ್ಯಂಗಾರ್ ತಮಿಳು ಮಾತಾಡುತ್ತಿದ್ದ ಪರಿಚಾರಕರನ್ನು ನಮಗೆ ಬರುತ್ತಿದ್ದ ಹರುಕು ಮುರುಕು ತಮಿಳಿನಲ್ಲಿ ಮಾಮಾ ಇಂಗೆ ಒರು ಕೊಂಚ ಇನ್ನೂ ಒರು ಕೊಂಚ ಅಂದು ಕೈ ಒಡ್ಡುತ್ತಿದ್ದೆವು. ಅವರು ಒಂದೊಂದು ದಿನ ಎರಡೆರಡು ಸಾರಿ ಕೊಡುತ್ತಿದ್ದರು. ಇಲ್ಲದಿದ್ದರೆ ಹೋಗೋ ಮುಂಡೇಗಂಡ್ರಾ ಎಷ್ಟು ಸಾರಿ ಕೊಡೋದು ಅನ್ನುತ್ತಿದ್ದರು. ಮಂಟಪಳ್ಳಿಗೆ ಕಡಿಮೆ ಜನ ಬಂದ ದಿನ ನಮಗೆ ಹಬ್ಬ. ಪರಿಚಾರಕರು ಇಷ್ಟು ಪ್ರಸಾದವನ್ನು ಭಕ್ತರಿಗೆ ಹಂಚಬೇಕು ಅಂದು ತಂದಿರುತ್ತಿದ್ದರು. ಅಷ್ಟು ಪ್ರಸಾದವನ್ನು ಎಷ್ಟು ಜನ ಇರುತ್ತಿದ್ದರೋ ಅವರಿಗೆ ಹಂಚಿ ಮಂಟಪಳ್ಳಿ ಒಳಗೆ ಹೋದರೆ ಜಪ್ಪಯ್ಯಾ ಅಂದರೂ ಯಾರು ಬಂದು ಪ್ರಸಾದ ಕೇಳಿದರೂ ಮತ್ತೆ ಕೊಡುತ್ತಿರಲಿಲ್ಲ. ಕಡಿಮೆ ಜನ ಇದ್ದಷ್ಟೂ ನಮಗೆ ಹೆಚ್ಚು ಪ್ರಸಾದ ಸಿಗುತ್ತಿತ್ತು. ಒಂದೊಂದು ದಿನ ಎರಡೂ ಕೈ ಹಿಡಿಯೋ ಅಂದು ಭರ್ತಿ ಹುಗ್ಗಿ ಕೊಡೋರು. ಅದನ್ನು ಬಹಳ ಜಾಗರೂಕತೆಯಿಂದ ಮನೆ ತರೋದು ದೊಡ್ಡ ಕೆಲಸ. ಅಂದು ಮನೆಯಲ್ಲಿ ಎಲ್ಲರಿಗೂ ಹುಗ್ಗಿಯ ರುಚಿ ಸಿಗುತ್ತಿತ್ತು. ಅದಕ್ಕೇ ಮುಂದೆ ನಾವು ದೇವಸ್ಥಾನಕ್ಕೆ ಹೊರಟಾಗ ನಮ್ಮಮ್ಮ ಪ್ರಸಾದನ ಇಬ್ಬರೇ ತಿಂದುಕೊಂಡು ಬರಬೇಡಿ ಮನೆಗೂ ತನ್ನಿ ಅಂತ ಹೇಳಿ ಕಳಿಸುತ್ತಿದ್ದಳು. ಆದರೆ ಇದು ನಡೆದು ಸುಮಾರು ಐವತ್ತು ವರ್ಷಕ್ಕೂ ಹೆಚ್ಚಾಗಿದೆ. ಇಂದಿಗೂ ಬೇಲೂರಿನ ಚನ್ನಕೇಶವನ ದೇವಾಲಯದ ಮಾಗಿಕಾಲದ ಬೆಳಗಿನ ಝಾವದ ಹುಗ್ಗಿ ಪ್ರಸಾದದ ರುಚಿ ಮರೆತಿಲ್ಲ.

ನಾವೆಲ್ಲಾ ಛಳಿಗಾಲದಲ್ಲಿ ಮುದುರಿಹೋಗಿ ಸೂರ್ಯ ಯಾವಾಗ ಬರುವನೋ ಎಂದು ಕಾಯುತ್ತಿದ್ದೆವು. ನಮ್ಮ ಮನೆ ದಿಕ್ಕು ಪಶ್ಚಿಮ. ಹೀಗಾಗಿ ನಮಗೆ ಬೆಳಗಿನ ಸೂರ್ಯನ ದರ್ಶನ ಆಗುತ್ತಿರಲಿಲ್ಲ. ಆದಕ್ಕೆ ನಾವು ಹಿತ್ತಲ ಕಡೆ ಹೊರಟುಹೋಗುತ್ತಿದ್ದೆವು. ಇಲ್ಲದಿದ್ದರೆ ನಮ್ಮ ಮನೆ ಎದುರಿನ ಮನೆಯ ಜಗುಲಿಯ ಮೇಲೆ ಬಿಸಿಲು ಕಾಯಿಸಿಕೊಂಡು ಕೂತುಬಿಡುತ್ತಿದ್ದೆವು. ಮನೆ ಕೆಲಸ ಮಾಡಬೇಕು, ಸ್ಕೂಲಿಗೆ ಹೋಗಬೇಕು ಇವ್ಯಾವುದೂ ಗಮನಕ್ಕೆ ಇರುತ್ತಿರಲಿಲ್ಲ.

ಛಳಿಗಾಲದ ಇನ್ನೊಂದು ತಾಪತ್ರಯ ಅಂದರೆ ನಮಗೆ ಕಾಲು ಒಡೆಯುತ್ತಿತ್ತು. ಆಗೆಲ್ಲಾ ಮಣ್ಣಿನಲ್ಲಿ ಆಡಿ ಬರೋದು ಜಾಸ್ತಿ. ಸಂಜೆ ಐದು ಗಂಟೆಗೆ ಆಟಕ್ಕೆ ಎಂದು ಹೋದರೆ ಬರುವ ಹೊತ್ತಿಗೆ ಕತ್ತಲೆಯಾಗಿ ಕೈ ಕಾಲುಗಳೆಲ್ಲಾ ಧೂಳು ಮುತ್ತಿರುತ್ತಿತ್ತು. ಕೈ ಕಾಲು ಚನ್ನಾಗಿ ತೊಳ್ಕೊಳೋ ಅಂತ ಮನೇಲಿ ಹೇಳಿದರೂ ಒಂದು ಚೊಂಬು ನೀರು ಕಾಲಿಗೆ ಹಾಕಿಕೊಂಡು ಬರೋದಷ್ಟೆ ನಾವು ಮಾಡುತ್ತಿದ್ದುದು. ಹೀಗಾಗಿ ಹೆಜ್ಜೆಯ ಮೇಲ್ಭಾಗ ಸೀಳು ಬಿಟ್ಟು ನೀರು ಬಿದ್ದರೆ ಉರಿ ಕಿತ್ತುಕೊಳ್ಳೋದು. ನಮ್ಮಮ್ಮ

ಅದಕ್ಕೆ ರಾತ್ರಿ ಹರಳೆಣ್ಣೆ ಹಾಕುವಾಗ ಇನ್ನೂ ಉರಿ. ಜೊತೆಗೆ ಹೇಳಿದ್ರೆ ಕೇಳಲ್ಲ ಮಣ್ಣಲ್ಲಿ ಆಡ್ಕೊಂಡು ಬರ್ತೀಯ, ಇಗ ಅನುಭವಿಸು ಎನ್ನುವ ಬೈಗಳು ಬೇರೆ. ಬರೀ ಕಾಲು ಒಡೆದರೆ ಅದೊಂದು ತರಹ. ಆದರೆ ತುಟಿಯೂ ಒಡೆಯೋದು. ಮೇಲ್ತುಟಿ, ಕೆಳತುಟಿ ಎರಡೂ ಬಿಗಿಯುತ್ತಿತ್ತು. ಅದಕ್ಕೆ ನಮ್ಮಮ್ಮ ಕಂಡುಕೊಂಡಿದ್ದ ಔಷಧಿ ಎಂದರೆ ಹಾಲಿನ ಕೆನೆಯನ್ನು ಮಲಗುವ ಮೊದಲು ತುಟಿಗೆ ಸವರಿಕೊಳ್ಳೋದು. ಅದರಿಂದ ಅಷ್ಟೇನೂ ಪ್ರಯೋಜನ ಕಾಣುತ್ತಿರಲಿಲ್ಲ.

ಇದೇ ಛಳಿಗಾಲದಲ್ಲಿ ನಮ್ಮ ಊರಿನಲ್ಲಿ ಜಾತ್ರೆ. ದನಗಳ ಜಾತ್ರೆ ಮತ್ತು ವಸ್ತುಪ್ರದರ್ಶನ ಹೈಸ್ಕೂಲು ಮೈದಾನದಲ್ಲಿ ಒಂದು ಹತ್ತು ದಿನಗಳ ಕಾಲ ನಡೆಯುತ್ತಿತ್ತು. ಸಂಜೆಯ ಚುಮುಚುಮು ಛಳಿಯಲ್ಲಿ ಜಾತ್ರೆಯನ್ನು ಸುತ್ತುವರೆಯುವುದು ಬಹಳ ಖುಷಿ ಕೊಡುತ್ತಿತ್ತು. ಲೈಟ್ ಕಂಬವನ್ನು ನೋಡಿದರೆ ಮಂಜು ಎಷ್ಟು ಮುತ್ತಿದೆ ಎಂದು ತಿಳಿಯುತ್ತಿತ್ತು. ಜಾತ್ರೆಯಲ್ಲಿ ಇರುತ್ತಿದ್ದ ಆಟದ ಪದಾರ್ಥಗಳನ್ನು ಕೊಳ್ಳಲಾಗಲೀ, ಅಲ್ಲಿ ಮಾರುತ್ತಿದ್ದ ತಿನಿಸುಗಳನ್ನು ಕೊಳ್ಳಲಾಗಲೀ ಕೈಯಲ್ಲಿ ಮೂರು ಕಾಸು ಇರುತ್ತಿರಲಿಲ್ಲ. ಎಲ್ಲವನ್ನೂ ನೋಡಿ ಸಂತೋಷಪಡೋದು ಅಷ್ಟೇ. ನಮ್ಮ ತಂದೆ ಜಾತ್ರೆ ಷುರುವಾದ ಒಂದೆರಡು ದಿನದ ನಂತರ ನನಗೆ ಎರಡಾಣೆ ಕೊಟ್ಟು ಹೋಗು ಜಾತ್ರೆಲಿ ಏನಾದರೂ ತಗೊಂಡು ತಿನ್ನು ಅನ್ನುತ್ತಿದ್ದುದು ಇನ್ನು ನೆನಪಿದೆ.

ಇದು ಸಾಲದು ಅಂತ ನಮ್ಮಣ್ಣ ಅದ್ಯಾವುದೋ ಕ್ರಿಕೆಟ್ ಟೀಮಿಗೆ ಸೇರಿಕೊಂಡಿದ್ದ. ಅವನು ಬೆಳಗ್ಗೆ ಐದು ಗಂಟೆಗೇ ಎದ್ದು ಹೋಗುತ್ತಿದ್ದ. ಒಂದೆರಡು ದಿನ ಆದ ಮೇಲೆ ಏಯ್ ಸೋಮಾರಿ ತರಹ ಯಾಕೆ ಮಲಗಿರ್ತೀಯ ಬಾ ನನ್ನ ಜೊತೆ ಅಂತ ಬಲವಂತದಿಂದ ಕರ್ಕೊಂಡು ಹೋಗುತ್ತಿದ್ದ. ಅವರು ಕ್ರಿಕೆಟ್ ಆಡುತ್ತಿದ್ದರೆ ನಾನು ನಡುಗುತ್ತಾ ನೋಡುತ್ತಿದ್ದೆ. ಅದರಿಂದ ತಪ್ಪಿಸಿಕೊಳ್ಳೋಕೆ ಆಗಲೇ ಇಲ್ಲ. ಆದರೆ ಸಂತೋಷ ಎಂದರೆ ಒಂದೊಂದು ದಿನ ಬಸ್ ಸ್ಟಾಂಡ್ ಹೋಟೆಲಿನಲ್ಲಿ ಬಿಸಿ ಬಿಸಿ ಕಾಫಿ ಕೊಡಿಸೋರು.

ಕೆಲವು ದಿನಗಳಾದ ಮೇಲೆ ನಮ್ಮ ಊರಿನ ಹೈಸ್ಕೂಲಿನಲ್ಲಿ ಎರಡು ಬ್ಯಾಚ್ ಮಾಡಿದರು. ಬೆಳಗ್ಗೆ ಎಂಟರಿಂದ ಹನ್ನೆರಡು ಒಂದು ಬ್ಯಾಚು, ಒಂದು ಗಂಟೆಯಿಂದ ಐದು ಗಂಟೆಯವರೆಗೆ ಇನ್ನೊಂದು ಬ್ಯಾಚು. ಇದು ಯಾಕೆ ಎಂದು ನನಗೆ ಆಗ ಗೊತ್ತಿರಲಿಲ್ಲ ಈಗಲೂ ಗೊತ್ತಿಲ್ಲ. ಎಂಟು ಗಂಟೆಗೆ ಸ್ಕೂಲಿನಲ್ಲಿರಬೇಕು ಎಂದರೆ ಮನೆ ಏಳೂವರೆಗಂತೂ ಬಿಡಬೇಕು. ಅಂದರೆ ಮತ್ತೆ ಆರು ಗಂಟೆಗೆ ಏಳಬೇಕು. ಇವೆಲ್ಲಾ ಬಹಳ ಹಿಂಸೆಯ ದಿನಗಳು. ಕ್ಲಾಸ್ ರೂಮಿನಲ್ಲೂ ಛಳಿಯಲ್ಲಿ ನಡುಗುತ್ತಲೇ ಪಾಠ ಕೇಳಬೇಕಾಗಿತ್ತು. ಯಾವಾಗ ಬಿಸಿಲಿಗೆ ಮೈ ಒಡ್ಡುತ್ತೇವೋ ಎಂದು ಕಾಯುತ್ತಿದ್ದೆವು. ಇವೆಲ್ಲಾ ಅನುಭವಳಾಗಿ ಮನದಲ್ಲಿ ದಾಖಲಾಗಿರುವಾಗ ಈಗ ನೆನಪು ಮಾಡಿಕೊಂಡರೆ ಅಂಥಾ ದಿನಗಳು ಮತ್ತೆ ಮತ್ತೆ ಮಧುರತೆಯನ್ನು ತಂದುಕೊಡುತ್ತದೆ.

■

ಚಳಿರಾಯನಿದ ಕಂಡು!

● ಕವಿತಾ ಹೆಗಡೆ ಅಭಯಂ

ಈ ಚಳಿಗಾಲ ಬಂತೆಂದರೆ ನನಗಂತೂ ಖುಷಿಯೋ ಖುಷಿ. ಜುರುಜುರು ಮಳೆಯಲ್ಲಿ ನೆನೆದು ನುಗ್ಗೆಸೊಪ್ಪಾದ ಕರಾವಳಿಯ ಜನರಿಗೆ ಕೊಡೆಯನ್ನತ್ತ ಬಿಸಾಕಿ ಕೈಬೀಸಿಕೊಂಡು ಓಡಾಡಲು ಒಳ್ಳೆಯ ಅವಕಾಶ. ಊರಲ್ಲಿ ಮಳೆಗಾಲ ಬಂತೆಂದರೆ ಆ ಕೊಡೆಗಳೋ ಬ್ರಹ್ಮ ಕಪಾಲದ ಹಾಗೆ ಹೋದಲ್ಲಿ ಬಂದಲ್ಲಿ ಕೈಗಂಟಿಕೊಂಡೇ ಇರುತ್ತಿದ್ದವು. ಅಲ್ಲಿನ ಘನಘೋರ ಮಳೆಗೆ ಒಂದು ಕ್ಷಣ ಕೂಡ ಬಿಡುವ ಹಾಗಿರಲಿಲ್ಲ. ಚಿಕ್ಕವಳಿದ್ದಾಗ 'ಚಳಿಗಾಲ ಅಂದ್ರೆ ಮಸ್ತ್ ಸೀಸನ್ನಪ್ಪ, ಕೊಡೆ, ಬಿರು ಬಿಸಿಲು, ಸೆಕೆ ಅನ್ನೋ ಸಾಡೇಸಾತಿಗಳ ಕಾಟವಿಲ್ದೆ ಬೇಕುಬೇಕಾದ ಬಟ್ಟೆ ಹಾಕ್ಕೊಂಡು ಜುಮ್ ಅಂತ ಹೊರಗೆ ಹೋಗಬಹುದು' ಅನ್ನಿಸುತ್ತಿತ್ತು. ಆದರೆ ಇಡೀ ಚಳಿಗಾಲ ನನಗೂ ಚಳಿರಾಯನಿಗೂ ನಡುವಣ ಸವಾಲು, ಫೈಟಿಂಗು, ಸೋಲು ಮತ್ತು ಗೆಲುವಿನ ಆಟ ಅನ್ನುವುದು ಆಗ ಪಾಪಚ್ಚಿಯಾದ ನನಗೆ ಗೊತ್ತಿರಲಿಲ್ಲ. ನಾನು ಈ ಚಳಿರಾಯನಾಟಕ್ಕೆ ಅಪ್ಪಚ್ಚಿಯಾಗುತ್ತೇನೆ ಅಂತಲೂ ಗೊತ್ತಿರಲಿಲ್ಲ.

ಮಳೆ, ಸೆಕೆಗಳ ಕಾಟ ಮುಗಿದು ದೀಪಾವಳಿಯ ದೀಪಗಳು ಬೆಳಗಲು ಶುರುವಾದವು ಅಂದರೆ ಸಾಕು, ನಿಧಾನಕ್ಕೆ ಚಳಿರಾಯನೂ ನಮ್ಮನ್ನು ಆಕ್ರಮಿಸಿಕೊಳ್ಳುತ್ತಿದ್ದ. ರಾತ್ರಿ ಮಲಗಿದರೆ ಚಾದರಗಳಿಗೆಲ್ಲ ಕೇರ್ ಮಾಡೋ ಮಗನಲ್ಲ ಅವ. ಕಚ್ಚುವ ಕರೀ ಕಂಬಳಿ ಅಂದರೆ ಸ್ವಲ್ಪ ಹೆದರುತ್ತಿದ್ದ. ಕಂಬಳಿಯ ಕಾಟ ಬೇಡ ಅಂತ ಅದನ್ನು ಎಡಗಾಲಲ್ಲಿ ಒದ್ದು ಮಲಗಿದರೆ ಮಲಗಿ ಅರ್ಧ ತಾಸಲ್ಲೇ ಸುಂಯ್ ಎಂದು ಬೀಸುವ ಕುಳಿರ್ಗಾಳಿಯ ಆರ್ಭಟಕ್ಕೆ ಹೆದರಿ ಎರಡು ಮೂರು ಚಾದರವಿದ್ದರೂ ಸಾಲದೆ ಸುಮ್ಮನೆ ಕರೀ ಕಂಬಳಿಯನ್ನು ಮೆತ್ತಗೆ ಎಳೆದು ಹೊದ್ದುಕೊಂಡರೆ ಆ ಸುಡುಗಾಡು ಕಂಬಳಿ ವಿಜಯ ಗರ್ವದಿಂದ ಎದ್ದೆದ್ದು ಕುಣಿದು ಅಣಕಿಸುತ್ತ ಇದ್ದಕ್ಕಿದ್ದಂತೆ ಗಾಳಿಯಾಗಿ ಯಾರದೋ ಮೂಗು ಸೇರಿ ಗೊರಕೆಯಾಗಿ ಒಳಗೂ ಹೊರಗೂ ಓಡಾಡಿ ಕಾಡುತ್ತದೆಯೋ ಅನ್ನಿಸುತ್ತಿತ್ತು. ಅಧಿಕ ಪ್ರಸಂಗಿ ಚಳಿರಾಯನಿಗೂ ಕಂಬಳಿಯ ಒಳಕ್ಕೆ ನುಸುಳಿ ಬರುವ ಆಸೆ. ನನ್ನಂಥ ಕಂಬಳಿ ವೈರಿಗಳ ಮಿತ್ರನಾಗಲು ಮಾಡುವ ಪ್ರಯತ್ನದಲ್ಲಿ ಒಮ್ಮೊಮ್ಮೆ ಸಫಲನಾದರೂ ಹೆಚ್ಚಿನ ಸಲ ಸೋಲಬೇಕಾಗುತ್ತಿತ್ತು. ಅಷ್ಟಾಗಿ ಈ ಹೊಡೆದಾಟ ಮುಗಿಯುವಷ್ಟರಲ್ಲಿ ಬೆಳಗೇ ಆಗಿಬಿಡುತ್ತಿತ್ತು. ಇನ್ನೇನು ಹೊದಿಕೆ ತಗೆದವರ ಹೆಗಲೇರಿ ಕೂರಲು ಚಳಿರಾಯ ತಯಾರಾಗಿಯೇ ಇರುತ್ತಿದ್ದ. ಅಂತೂ ಇಂತೂ ಶಾಲೆಯ ನೆನಪಾಗಿ ಕಂಬಳಿಯನ್ನು ಕಿತ್ತೆಸೆದು ಓಡಿ ಮಿಂದು ಬಂದರೆ ಅಮ್ಮ ಮಾಡುವ ಬಿಸಿ ಬಿಸಿ ದೋಸೆ, ಚಟ್ನಿ, ಬೆಲ್ಲ, ತುಪ್ಪ, ಕಷಾಯಗಳ ಆರ್ಭಟಕ್ಕೆ ಚಳಿರಾಯ ಒಮ್ಮೆಯಾದರೂ ಸೋಲಲೇ ಬೇಕಿತ್ತು. ಅಂತೂ ಶಾಲೆ ಮುಗಿಸಿ ಮನೆಗೆ ಬರುವಷ್ಟರಲ್ಲಿ ಮತ್ತೆ ಮೋಹಿನಿಯ ಹಾಗೆ "ಕಾದಿರುವೆ .. ನಿನಗಾಗಿ," ಎನ್ನುವ ಚಳಿರಾಯ!

ಅಂತೂ ಸಂಜೆಯಲ್ಲಿ ಸುರಿವ ತಂಪನ್ನು ತಡೆಯಲು ಆಗದೆ ಹೊಡತ್ಲ ಎಂಬ ಅಗ್ನಿಷ್ಟಿಕೆಯಲ್ಲಿ ಗೇರು ಬೀಜ, ಹಲಸಿನ ಹಪ್ಪಳ, ಹಲಸಿನ ಬೇಳೆ ಸುಟ್ಟು ತಿನ್ನುತ್ತ "ಬಂದೆ, ಬಂದೆ" ಎಂದು ಹತ್ತಿರ ನಿಂತು ಹೆದರಿಸುವ ಚಳಿರಾಯನಿಗೆ ಸವಾಲು ಹಾಕುವ ಸುಖ ಮರೆಯಲಾಗದ ಹಿತವಾದ ನೆನಪು.

ಒಮ್ಮೆ ನಮ್ಮ ಊರಲ್ಲಿ ಒಂದು ಅಹೋರಾತ್ರಿ ನಾಟಕ ಪ್ರದರ್ಶನವಿತ್ತು. ಬರೀ ಹವ್ಯಾಸಿ ಕಲಾವಿದರು ಮಾಡಿದ ನಾಟಕ ಅದು. ಕಣ್ಣಲ್ಲಿ ನೋಡಲು, ಕಿವಿಯಲ್ಲಿ ಕೇಳಲು ಅಂಥಾ ಪುಣ್ಯ ಮಾಡಿರಬೇಕು. ಬೆಳಿಗ್ಗೆಯೇ ಬರುವೆ ಎಂದು ಹೇಳಿದ್ದೆ. ಅಮ್ಮ ಸಾರಿ ಸಾರಿ ಹೇಳಿದರೂ ಸೊಕ್ಕು ಮಾಡಿಕೊಂಡು ಹೊದೆಯಲು ಏನೂ ಒಯ್ಯದೆ ಹೋಗಿ ಗೆಳತಿಯ ಜೊತೆ ಕುಳಿತಿದ್ದೆ. ಮಧ್ಯ ರಾತ್ರಿ ಕಳಿಯುತ್ತಿದ್ದ ಹಾಗೇ ಅಸಾಧ್ಯ ಚಳಿ ಶುರುವಾಯಿತು. ಆ ಸಂಗೀತ ನಾಟಕವಂತೂ ಬಕ್ವಾಸ್ ಎಂದರೆ ಬಕ್ವಾಸ್. ಎರಡೂ ಅಸಾಧ್ಯ ಟಾರ್ಚರ್ರೇ! ಗೆಳತಿ ನೋಡಿದರೆ ತನ್ನಣ್ಣನ ಪಾರ್ಟು ನೋಡಲೇ ಬೇಕೆಂದು ತಾಕೀತು ಮಾಡಿದ್ದಳು. ರಾತ್ರಿ ಸುಮಾರು ಮೂರು ಗಂಟೆಯವರೆಗೆ ಕುಳಿತುಕೊಂಡು ಆಮೇಲೆ ಸಾಧ್ಯವಿಲ್ಲದೇ ಎದ್ದುಬಿಟ್ಟೆ. ಮನೆಗೆ ಹೋಗೋಣವೆಂದರೆ ಯಾರೂ ಬರಲು ತಯಾರಿಲ್ಲ. 'ಧೈರ್ಯಮ್ ಸರ್ವತ್ರ ಸಾಧನಂ' ಎಂದುಕೊಂಡು ಸುಮ್ಮನೆ ಜಾರಿಕೊಂಡು ನಾಟಕದ ಜಾಗದಿಂದ ಹೊರಗಡೆ ಬಂದೆ ನೋಡಿ, ಭರ್ ಎಂಬ ಚಳಿಗಾಳಿ ಬೀಸಿ ಸತ್ತೇ ಹೋದೆ ಅಂದುಕೊಂಡೆ! ಕೆಟ್ಟ ನಾಟಕ ನೋಡೋದಕ್ಕಿಂತ ಸಾವೇ ವಾಸಿ ಎನ್ನುತ್ತ ಅಂಥಾ ರಾತ್ರಿಯಲ್ಲಿ ಒಬ್ಬಳೇ ನಡೆದು ಮನೆ ಸೇರಿದೆ. ನಡೆದುಕೊಂಡು ಹೋದ ಆ ಕೆಲವು ನಿಮಿಷಗಳಲ್ಲಿ ಕೈಲಾಸವಾಸಿಯಾಗಿಬಿಡುವೇನೋ ಅನ್ನುವಷ್ಟು ಭಯ, ಚಳಿ ಎಲ್ಲ ಸೇರಿ ನಡುಗುತ್ತ ಮನೆ ಸೇರಿದ ಅನುಭವ ಮರೆತುಹೋಗುವುದೇ ಇಲ್ಲ. ಆಮೇಲೆ ರಾತ್ರಿ ಒಬ್ಬಳೇ ಬಂದಿದ್ದಕ್ಕೆ ಸರ್ವ ರೀತಿಯ ಅರ್ಚನೆ ನಡೆದಿದ್ದು ಕೂಡ ಕೋರ್ಟ್ ಸೀನನ್ನು ನೆನಪಿಸುವಷ್ಟೇ ಅವಿಸ್ಮರಣೀಯ.

ಇನ್ನು ಊರಿನಲ್ಲಿ ನಡೆಯುವ ಅಹೋರಾತ್ರಿ ಯಕ್ಷಗಾನಗಳು ಕೂಡ "ಚಳಿ ಚಳಿ ತಾಳೆನು ಈ ಚಳಿಯಾ.." ಎಂದು ಹಾಡುವುದಕ್ಕೆ ಅಂತಲೇ ಇರುತ್ತಿದ್ದವು. ರಾತ್ರಿ ಕಂಠಮಟ್ಟ ಊಟ ಮುಗಿಸಿ ಹೋಗಿ ಆರಾಮ ಕುರ್ಚಿಯಲ್ಲಿ ಹೆಮ್ಮೆಯಿಂದ ಕುಳಿತು ಯಕ್ಷಗಾನ ಬೇಗ ಶುರುವಾಗಲಿ ಎಂದು ಕಾಯುತ್ತಿದ್ದೆವು. ಆದರೆ ಕೋಡಂಗಿ, ಬಾಲ ಗೋಪಾಲ, ಪೀಠಿಕೆ ಸ್ತ್ರೀ ವೇಷ, ಓಡ್ಡೋಲಗ ಮುಂತಾದವು ಶುರುವಾದವೆಂದರೆ ಮುಗಿಯುತ್ತಲೇ ಇರಲಿಲ್ಲ. ಅದನ್ನೇ ಬಾಯಿ ಬಾಯಿ ಬಿಟ್ಟುಕೊಂಡು ನೋಡುತ್ತ ಇರುವಾಗ ಚಳಿರಾಯ ಎಲ್ಲಿರುತ್ತಿದ್ದನೋ!

ನಮಗೆಲ್ಲ ಸರಿಯಾಗಿ ಎಚ್ಚರ ಇರುವಾಗ ಚಳಿಯೂ ಇಲ್ಲ, ಕಥೆಯ ಪ್ರಾರಂಭವೂ ಇಲ್ಲ! ಇನ್ನೇನು ಜೋರು ನಿದ್ರೆ ಬರಬೇಕು ಅನ್ನುವಾಗ ಚಳಿಯೂ ಶುರು, ಬೈ ವನ್ ಗೆಟ್ ವನ್ ಫ್ರೀ ಅಂತ ಯಕ್ಷಗಾನವೂ ಶುರುವಾಗುತ್ತಿತ್ತು. ತೆಗೆದುಕೊಂಡು ಹೋದ ಸ್ವೆಟರು, ಟೊಪ್ಪಿ, ಶಾಲಲ್ಲಿ ತಲೆ ಅಥವಾ ಮೈ ಮುಚ್ಚಿಕೊಂಡರೆ ಕಾಲು ಚಳಿಗೆ ಮರಗಟ್ಟು ಹೋಗುತ್ತಿತ್ತು. ಆಗೆಲ್ಲ ಯಕ್ಷಗಾನ ನೋಡುವುದಾ, ಚಳಿ ತಡೆದುಕೊಳ್ಳುವುದಾ ಅಥವಾ ನಿದ್ರೆಯನ್ನು ಓಡಿಸುವುದಾ ಗೊತ್ತಾಗುತ್ತಿರಲಿಲ್ಲ. ಅಂತೂ ಮೂರು ಮೂರು ಸವಾಲಿನ ಭೂತಗಳು ಒಟ್ಟಾಗಿ ಯಕ್ಷಗಾನದ ಪಾತ್ರಧಾರಿಗಳಿಗಿಂತ ಜೋರಾಗಿ ಕಣ್ಮುಂದೆ ಕುಣಿಯುತ್ತಿದ್ದವು. ಚಳಿರಾಯನೊಟ್ಟಿಗೆ ಹೊಡೆದಾಟಕ್ಕೆ ಬೇಕೆಂದು ಹುರಿದ ಶೇಂಗಾ, ಬಿಸಿ ಬಿಸಿ ಈರುಳ್ಳಿ ಬಜ್ಜಿ, ಚಹಾಪಾನಗಳಂತಹ ಜಿಗ್ರಿ ದೋಸ್ತರನ್ನು ಹೊಟ್ಟೆಯೊಳಗೆ ಕರೆದುಕೊಂಡು ಹೋದರೂ ಅವುಗಳ ವಿಜಯ ತಾತ್ಕಾಲಿಕವಾಗಿರುತ್ತಿತ್ತು. ಮತ್ತೆ "ಬಂದನಾ ಚಳಿರಾಯನು"!

ಚಿಕ್ಕವರಿದ್ದಾಗ ಸ್ಟೈಲಾಗಿ ಉಣ್ಣೆಯ ಟೊಪ್ಪಿ, ಶಾಲು, ಸ್ವೆಟರು ಹಾಕಿಕೊಂಡು ಜಂಬದಿಂದ ಕುರ್ಚಿಯ ಮೇಲೆ ಕುಳಿತುಕೊಂಡರೆ ಮಹಾಸಂತೋಷ ನಮಗೆಲ್ಲ.

ಬಿದ್ದು ಮೊನ್ನೆ ಮನೆಯಲ್ಲೇ ಟೀವಿ ಹಚ್ಚಿಟ್ಟೆ. ಪೆನ್ಶೈವಿನಲ್ಲಿದ್ದ, ಯೂಟ್ಯೂಬಿನಲ್ಲಿದ್ದ ಕಂಡ ಕಂಡ ಯಕ್ಷಗಾನ ಹಾಕಿಕೊಂಡು ಶಿಸ್ತಾಗಿ ಟೀವಿಯ ಮುಂದೆ ಚಾಪೆ ಹಾಸಿಕೊಂಡು ಮಲಗಿ ನೋಡಿ ಅಲ್ಪಸ್ವಲ್ಪ ತೃಪ್ತಿಪಟ್ಟೆ. ಆದರೆ ಇದರಲ್ಲಿ ಆ ನೈಜ ಅನುಭವ ಉಂಟೇ? ಬರೀ ಬುರ್ನಾಸು!

ಹೋಯ್, ನಿಮ್ಮೂರಲ್ಲಿ ಮೇಳದ ಆಟಕ್ಕೆ ಚಾಪೆ ಸಿಸ್ಟಮ್ ಇದ್ದರೆ ಸ್ವಲ್ಪ ಕರೆಯಿರಿ ಮಾರಾಯ್ರೇ. ಇಲ್ಲವೇ ನನ್ನ ಸಲುವಾಗಿಯೇ ಅಂತ ಒಂದು ಯಕ್ಷಗಾನ ಮಾಡಿಸಿ ಕುರ್ಚಿ, ನೆಲ ಅಂತ ಪ್ರತ್ಯೇಕ ವ್ಯವಸ್ಥೆ ಮಾಡಿ.

ಬಂದು ಚಾಪೆಯಲ್ಲಿ ಮಲಗಿಕೊಂಡು ಯಕ್ಷಗಾನ ನೋಡಿ ಕುರ್ಚಿಯಲ್ಲಿ ಕುಳಿತವರ ಮೇಲೆ ಸೇಡು ತೀರಿಸಿಕೊಳ್ಳುವ ನನ್ನ ಆಸೆ ಈಡೇರಲಿ.

ಚಳಿರಾಯನನ್ನು ಸೋಲಿಸುವ ಸುಖವೂ ನನ್ನದಾಗಲಿ. ಆಯ್ತಾ?

■

ಇವರಿಗೆ ಬಂದಿರೋದು ಚಳಿ ಜ್ವರ ಅಲ್ಲ..?
ಚುನಾವಣೆ ಜ್ವರ....!?

ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

● ದಂನಆ

- ✓ ಚಳಿಗಾಲದಲ್ಲಿ ಮೈ ನಡಗುವುದನ್ನು ಸಹ ವ್ಯಾಯಾಮ ಎಂದು ಕರೆಯಬಹುದೆ?
- ✓ ಚಳಿಗಾಲದ ಬಗ್ಗೆ ಒಂದು ದೊಡ್ಡ ಲೇಖನ ಬರೆಯಲು ಹೊರಟೆ. ಆದರೆ ತುಂಬಾ ಚಳಿ ಆಗತೊಡಗಿದ್ದರಿಂದ ಒಂದು summery ಬರೆದು ಮುಗಿಸಿದೆ.
- ✓ ಇಟ್ ಈಸ್ ನೆವರ್ ಟೂ ಕೋಲ್ಡ್ ಫಾರ್ ಐಸ್ಕ್ರೀಂ.
- ✓ ಚಳಿಗಾಲದಲ್ಲೂ ವಾಕಿಂಗ್ ಮಾಡ್ತಾರೆ ಅಂದ್ರೆ ಅವರ ಮನೇಲಿ ಗೋಳು ಹೊಯ್ಕೋಳೋರು ಇದ್ದಾರೆ ಎಂದು ಭಾವಿಸಬಹುದು.
- ✓ ಎ ಮ್ಯಾನ್ ಸೇಸ್ ಎ ಲಾಟ್ ಆಫ್ ಥಿಂಗ್ಸ್ ಇನ್ ಸಮರ್ ಹಿ ಡಸ್ ನಾಟ್ ಮೀನ್ ಇನ್ ವಿಂಟರ್.
- ✓ ಚಳಿಗಾಲದಲ್ಲಿ ಹವಾಮಾನ ವರದಿ ಎಲ್ಲಿಂದ ಬರುತ್ತದೆ? ವಿಂಟರ್‌ನೆಟ್‌ನಿಂದ.
- ✓ ವೈ ಡು ಲೆಸ್ ಮ್ಯಾರೇಜಸ್ ಟೇಕ್ ಪ್ಲೇಸ್ ಇನ್ ವಿಂಟರ್? ಬಿಕಾಸ್ ಮೋಸ್ಟ್ ಆಫ್ ದಿ ಬ್ರೈಡ್ಸ್ ಡೆವಲಪ್ ಕೋಲ್ಡ್ ಫೀಟ್.
- ✓ ಚಳಿ ಎಷ್ಟು ಭಯಂಕರವಾಗಿತ್ತೆಂದರೆ ಕಿಸೆಗಳ್ಳರು ತಮ್ಮ ಕೈಗಳನ್ನು ತಮ್ಮ ಜೇಬಿನಲ್ಲೇ ಬೆಚ್ಚಗಿಟ್ಟುಕೊಂಡಿದ್ದರು.
- ✓ ಎವೆರಿ ಕಿಲೊಮೀಟರ್ ಈಸ್ 2 ಇನ್ ವಿಂಟರ್.
- ✓ ಕೋಣೆಯಲ್ಲಿ ಚಳಿ ಆಗುತ್ತಿದ್ದರೆ ಒಂದು ಮೂಲೆಯಲ್ಲಿ ನಂತುಕೊಳ್ಳಿ. ಏಕೆಂದರೆ ಅಲ್ಲಿ 90 ಡಿಗ್ರೀ ಇರುತ್ತದೆ.
- ✓ ಇಟ್ಸ್ ಹಾರ್ಡ್ ಟು ಲುಕ್ ಕೂಲ್ ಅಂಡ್ ಬಿ ವಾರ್ಮ್ ಅಟ್ ದಿ ಸೇಮ್ ಟೈಂ.
- ✓ ಖುಷಿಯಿಂದ ಇರುವವರಿಗೆ ಚಳಿಗಾಲ ಬೇಸಿಗೆ ಕಾಲಗಳ ವ್ಯತ್ಯಾಸವೇ ತಿಳಿಯುವುದಿಲ್ಲ.
- ✓ ವಿಂಟರ್ ಮಸ್ಟ್ ಬಿ ಕೋಲ್ಡ್ ಫಾರ್ ದೋಸ್ ವಿತ್ ನೊ ವಾರ್ಮ್ ಮೆಮರೀಸ್.
- ✓ ಬಿಸಿ ಬಿಸಿ ಚಾ ಕಾಫೀ ಪದೇ ಪದೇ ಕುಡಿಯಲು ಚಳಿ ಒಂದು ನೆಪ.
- ✓ ಖುಷಿಯಿಂದ ಇರುವವರಿಗೆ ಚಳಿಗಾಲ ಮತ್ತು ಬೇಸಿಗೆ ಕಾಲ ಎರಡೂ ಒಂದೇ.

■

ಚಳಿಯ ಹಾಡು ಪಾಡು

● ಕಂ ಕ ಮೂರ್ತಿ

ಪಾರಿಜಾತದ ಗಿಡದಲ್ಲಿ ಹೂ ಕಡಿಮೆ ಆಗಿದೆ. ಹಾಲು ಚೆಲ್ಲಿದಂತೆ ಕರಿ ಡಾಂಬರು ರಸ್ತೆಯನ್ನು ತುಂಬಿ ಬೀಳುತ್ತಿಲ್ಲ, ಅಲ್ಲಲ್ಲಿ ರಸ್ತೆ ಅಂಚಿನಲ್ಲಿ ಒಂದೊಂದು ಹೂವುಗಳು. ಅದನ್ನು ಸಂಗ್ರಹಿಸಲು ಬರುವವರೂ ಕಡಿಮೆ ಆಗಿದ್ದಾರೆ. ಮೊದಲೆಲ್ಲ ಬೆಳಿಗ್ಗೆ ಆರಕ್ಕೆ ಬರುತ್ತಿದ್ದವರು ಈಗ ಏಳಾದರೂ ಬರುವುದಿಲ್ಲ. ಚಳಿ ಹಾಗೆ ತಣ್ಣಗೆ ಕೊರೆಯುತ್ತಿದೆ. ಯಾರಿಗೆ ಬೇಕು ಬೆಳಗಿನ ಉಸಾಬರಿ ತಣ್ಣಗೆ ಹೊದ್ದು ಮಲಗಿ ಬಿಡುವುದೇ ಸುಖ. ಹೀಗೆ ಚಾದರವನ್ನು ಬೆಚ್ಚಗೆ ಹೊದ್ದು ಮಲಗುವುದೆಂದರೆ ಕನಸನ್ನು ಮೆಲಕು ಹಾಕುವುದು. ನಾಳೆಯೋ ನಾಡಿದ್ದೋ ಅರಳಲಿರುವ ಕನಸನ್ನು ಅಥವಾ ಈಗಾಗಲೇ ಸತ್ತು ಹೋಗಿರುವ ಕನಸನ್ನು ನೆನೆದು ಮೂಸಿ ನೋಡುವುದು. ಹೀಗೆ ಎಲ್ಲ ಉಸಾಬರಿಗೆ ಮುಸುಕಿ ಹಾಕಿಕೊಂಡು ಮಲಗಿ ಕನಸಿನ ಜತೆ ಕನವರಿಸುತ್ತ ಸುಮ್ಮನೆ ಇದ್ದು ಬಿಡುವುದು ಎಷ್ಟು ಖುಷಿ.

ಚಳಿಗೆ ಒಂದು ಗುಣವಿದೆ. ಅದು ನಮ್ಮಸೋಮಾರಿತನವನ್ನು ಬೆಚ್ಚಗಾಗಿಸುತ್ತದೆ. ಮಗುವಿನಂತೆ ನಮ್ಮನ್ನು ಎತ್ತಿಕೊಂಡು ತೊಟ್ಟಿಲಿಗೆ ಹಾಕಿ ತೂಗಿ ಜೋಗುಳ ಹಾಡುತ್ತದೆ. ಹೊರಗೆ ಹೋಗಬೇಡ ಗುಮ್ಮ ಇದೆ, ಇನ್ನೊಂದಿಷ್ಟು ಹೊತ್ತು ಮಲಗು ಎಂದು ಮುದ್ದು ಮಾಡಿ ಹೇಳುತ್ತ ಬೆಚ್ಚನೆಯ ಚಾಮರ ಬೀಸುತ್ತಲೇ ಇರುತ್ತದೆ. ಚಳಿಯಲ್ಲಿ ಮನಸ್ಸಿನ ಉದ್ವಿಗ್ನತೆ ಕಡಿಮೆ ಎನ್ನುವುದು, ಇದನ್ನು ಯಾರಾದರೂ ಅಧ್ಯಯನ ಮಾಡಿ ಹೇಳಬೇಕು.

ಆದರೆ ಒಂದು ಮಾತಂತೂ ನಿಜ ಅದು ತಾಯಿಯಂತೆ ಅಪ್ಪಿ ಸಂತೈಸುತ್ತದೆ. ಹೊದ್ದಿರುವ ಬೆಡಶೀಟ್ ಅನ್ನು ತೆಗೆದು ಬಿಸಾಕಿ ಅದನ್ನು ಹಾಗೆಯೇ ನಿರುದ್ವಿಗ್ನತೆಯಿಂದ ಅನುಭವಿಸಬೇಕು ಅನಿಸುತ್ತದೆ. ಈ ಚಳಿಯೊಂದು ಇಲ್ಲದಿದ್ದರೆ ಎದುರಿನ ಹೊಂಗೆಮರದಲ್ಲಿ ಕಾಗೆ ಮರಿಯೊಂದು ತನ್ನ ತಾಯಿಗೆ ಮೈ ಅಂಟಿಸಿ ಕೂತ ಚಿತ್ರ ಕಾಣಿಸುತ್ತ ಇರಲಿಲ್ಲವೇನೋ?

ಹೇಗೋ ಮೈ ಕೊಡವಿಕೊಂಡು ತಲೆಗೆ ಉಲ್ಲನ್ ಟೋಪಿ ಹಾಕಿಕೊಂಡು ಕೆರೆಗೆ ಪ್ರದಕ್ಷಿಣೆ ಹಾಕಲು ಬಂದರೆ ಎಲ್ಲರೂ ನನ್ನಂತೆ ಕಾಣುತ್ತಾರೆ. ಒಂದು ಅಂಗುಲ ಮೈಯ್ಯೂ ಕಾಣದಂತೆ ಎಂತೆಂತೋ ಹೊದ್ದಿದ್ದಾರೆ. ಉಲ್ಲನ್ ಬಟ್ಟೆಯ ಗಂಟಿನಂತೆ ವೇಷ ಮಾಡಿಕೊಂಡು ಆಕಳಿಸುತ್ತ ನಡೆಯುತ್ತಿದ್ದರೆ ಅವರ ಬಾಯಿಂದ ಹೊರಡುವ ಹೊಗೆ ಉದಾಸೀನವಾಗಿ ಪರಿಸರಕ್ಕೆ ಹರಡುತ್ತದೆ.

ಅಲ್ಲಾದರೂ ಅಂತ ಚೈತನ್ಯ ಏನಿದೆ? ಕೆರೆಯ ನೀರಿನಲ್ಲಿ ಆವಿ ಸೋಮಾರಿಯಂತೆ ಏಳುತ್ತಿದೆ. ಆಕಾಶದಲ್ಲಿ ಕಣ್ಣು ಬಿಡುತ್ತಿರುವ ಸೂರ್ಯನಿಗೂ ಉತ್ಸಾಹವಿಲ್ಲ. ಎಳೆಕಂದ ಬಾಯಿ ತೆರೆದಂತೆ ಕಾಣುತ್ತಿದ್ದಾನೆ. ಕೆರೆಯ ಮರದ ಮೇಲೆ ಬಿಳಿ ರೆಕ್ಕೆಯ ಗರುಡ ಸೋಮಾರಿಯಂತೆ ಮಲಗಿದೆ. ಬಾತುಗಳು ನಾಳೆ ಎದ್ದರಾಯಿತು ಎಂದು ಆಕಳಿಸುತ್ತಿವೆ. ಬಣ್ಣದ ಗರಿಗಳ ಬಿಚ್ಚಿ ಬೆಳಗಿನ ರಂಗಿಗೆ ಮತ್ತೇರಿಸುತ್ತಿದ್ದ ನವಿಲುಗಳು ಹಸಿರು ಉಡಿಯಿಂದ ಹೊರ ಬಂದೇ ಇಲ್ಲ.

ಠಣಕ್ ಎಂದು ಶಬ್ದ ಮಾಡುತ್ತ ಮನದ ಚೈತನ್ಯವನ್ನು ಅರಳಿಸುತ್ತಿದ್ದ ಮೀನು ಎಲ್ಲಿ ಪಾತಾಳ ಸೇರಿವೆಯೋ? ಆದರೂ ಏನು ಸುಖ. ಮೈಕೊರೆಯುವ ಚಳಿಯಲ್ಲಿ ವೀರ ಯೋಧರಂತೆ ಹೆಜ್ಜೆ ಹಾಕುವುದು, ಎದುರಿಗೆ ಬಂದವರು ಪರಿಚಿತರಾದರೂ ಗುರುತಿಸುವುದು ಕಷ್ಟ. ಮೈ ತುಂಬಿರುವ ಬಟ್ಟೆ, ಅವರ ನಡಿಗೆಯ ಲಾಲಿತ್ಯದಿಂದಲೇ ಗುರುತಿಸಬೇಕು. ಸಣ್ಣಗೆ ಹಿಮ ಬೀಳುತ್ತಿರುವ ಈ ಬೆಳಗಿನ ಹೊತ್ತು ಎಲ್ಲ ಎಷ್ಟು ಚೆಂದ ಕಾಣುತ್ತಾರೆ. ಒಬ್ಬರ ನೊಬ್ಬರು ತಬ್ಬಿ ನಡೆಯುವ ಜೋಡಿಗಳು ಚಳಿಗಾಲವೇ ಇರಲಿ ಎಂದು ಹಾರೈಸುತ್ತವೆ. ಮುಂದೆ ಬರುವುದು ಬಿರು ಬೇಸಿಗೆ. ಬದುಕು ನಾವೆಣಿಸಿದಂತೆ ಇರುವುದಿಲ್ಲ ಮಾರಾಯರೆ ಎಂದು ಹೇಳಲು ಮನಸ್ಸು ಬರುವುದಿಲ್ಲ. ಏಕೆಂದರೆ ಸುಖದ ಕಾವಿನಲ್ಲಿ ಇರುವಾಗ ಕಷ್ಟವನ್ನು ನೆನೆಯಬಾರದು.

ಯಾರೋ ದೋಣಿಯಲ್ಲಿ ಮೀನು ಹಿಡಿಯುತ್ತಿದ್ದಾರೆ.ಮುಂದಿನ ತಿಂಗಳು ಕೆರೆ ಹೂಳೆತ್ತುತ್ತಾರಂತೆ. ಆಗ ಸಾಯುವ ಮೀನನ್ನು ಈಗಲೇ ಹಿಡಿದು ಬಿಡುವ ಕಾಯಕ. ಒಂದಲ್ಲ, ಸಹಸ್ರಾರು ಜಲಚರಗಳಿವೆ ಅವುಗಳ ಪಾಡೇನು? ಯೋಚಿಸಿದರೆ ಸಂಕಟವಾಗುತ್ತದೆ. ಚಳಿಗಾಲ ಕಳೆದು ಬೇಸಿಗೆ ಬರುವ ಹೊತ್ತಿಗೆ ಕೆರೆ ಹೊಸ ನೀರಿನಲ್ಲಿ ಶೃಂಗಾರಗೊಂಡಿರುತ್ತದೆ. ಮತ್ತೆ ಹೊಸ ಮಿಲನ, ಹೊಸ ಹುಟ್ಟು. ಹೊಸ ಮೀನು, ಹಕ್ಕಿಗಳ ಹಾಡು. ಸೃಷ್ಟಿ ನಿರಂತರ.

ಥತ್ತೇರಿ, ಎಂತ ಚಳಿ ಅನಿಸಿದಾಗ ಊರಿನ ಅಮ್ಮ ನೆನಪಾಗುತ್ತಾಳೆ. ಬೆಳಿಗ್ಗೆ ಐದಕ್ಕೆ ಎದ್ದು ಒಲೆಗೆ ಬೆಂಕಿ ಹಾಕಿ ಇಷ್ಟೊತ್ತಿಗೆ ಹಾಲು ಕರೆದು, ದೇವರಿಗೆ ತುಪ್ಪದ ದೀಪ ಹಚ್ಚಿಟ್ಟು ಎಲ್ಲಿಯೋ ಇರುವ ಮಕ್ಕಳಿಗೆ, ಮೊಮ್ಮಕ್ಕಳಿಗೆ, ಕೊಟ್ಟಿಗೆಯ ಹಸುವಿಗೆ ಮನಸ್ಸಿನಲ್ಲಿಯೇ ಪ್ರಾರ್ಥಿಸುತ್ತ ಅಗಳದಲ್ಲಿ ಆಗತಾನೇ ಅರಳಿದ ತುಂಬೆ ಗಿಡದ ಬುಡಕ್ಕೆ ತಂಬಿಗೆ ನೀರು ಹಾಕಿ ನಿಂತ ಅವಳ ಭಂಗಿ ಕಣ್ಮುಂದೆ ಕಾಣುತ್ತದೆ. ಎಲ್ಲ ಅಮ್ಮಂದಿರೂ ಹಾಗೆ.

ಚಳಿಗೆ ಮೈಯೊಡ್ಡಿ ನಿಲ್ಲಬೇಕು ಎಂಬ ಬಯಕೆ ಆಗುತ್ತದೆ. ಏಕೆಂದರೆ ಅದಕ್ಕೆ ಪ್ರೀತಿಯನ್ನು ಅರಳಿಸುವುದು ಗೊತ್ತು. ಕೆರಳಿಸುವುದು ಗೊತ್ತು. ಬೆಚ್ಚಗೆ ಆಗಬೇಕಾದರೆ ಮೊದಲು ತಣ್ಣಗಾಗಬೇಕು.

ಪರವಾಗಿಲ್ಲ, ಪಾರಿಜಾತದ ಗಿಡ ಬೇಸಿಗೆಯಲ್ಲಿಯೇ ಜೊಂಪೆಜೊಂಪೆ ಹೂ ಬಿಡಲಿ, ಈಗ ಎಲೆ ಹಸಿರಾಗಿದೆಯಲ್ಲ ಅಷ್ಟೇ ಸಾಕು. ಏಕೆಂದರೆ ಅದರ ಎಲೆಯೊಂದರ ಮೇಲೆ ಯಾವುದೋ ಕೀಟ ಎಷ್ಟು ಸಮಾಧಾನದಿಂದ ಗೂಡು ಕಟ್ಟಿದೆ ಎಂದರೆ ಅದಕ್ಕೆ ಕಾಲದ ಹಂಗೇ ಇಲ್ಲ.

ಕಾಲದ ಹಂಗಿಲ್ಲದೇ ಬದುಕುವುದು ಧ್ಯಾನಸ್ಥ ಸ್ಥಿತಿ. ಅದಕ್ಕೆ ಹಂಬಲಿಸದವರು ಯಾರು?.

ಸೌಜನ್ಯ ಅವಧಿ

■

ಚಳಿಗಾಲದ ಚುರುಮುರಿ

● ಇ. ಆರ್. ರಾಮಚಂದ್ರನ್

ಈ ವರ್ಷ ವಿಪರೀತ ಚಳಿ! ಚಳಿಯೋ ಚಳಿ. ವಾರ ವಾರ ಸೈಕ್ಲೋನ್. ಮೋಡದ ಮೇಲೆ ಮೋಡ. ಮತ್ತೆ ಮಳೆ. ಮೇ ಜೂನ್ ನಿಂದ ಸೂರ್ಯ ಪತ್ತೇನೇ ಇಲ್ಲ...ಕಾಶಿಯಾತ್ರೆಗೆ ಹೋಗಿರ್ಬೇಕು.

ಅಜ್ಜಿ, ಅಜ್ಜನ ಎರಡು ಷರ್ಟು, ಅದರ ಮೇಲೆ ನಾ ತಂದ ಸ್ವೆಟರ್, ನನ್ನ ಅಣ್ಣ ಸೂರಿ ಅಮೆರಿಕಾದಿಂದ ತಂದ ಜರ್ಕಿನ್ ಹಾಕಿಕೊಂಡಿದ್ದರು. ತಲೆಗೆ ಬಣ್ಣದ ಸಿಲ್ಕ್ ಸ್ಕಾರ್ಫ್.

'ಅಜ್ಜಿ! ನೀನು ಕ್ವತಾರ್ ನಲ್ಲಿ ಇರಬೇಕಾಗಿತ್ತು ಈಗ. ಅಲ್ಲಿ ನಿನ್ನನ್ನು ಮೆಸ್ಸಿ ಅಜ್ಜಿ ಮಸ್ಸಿ ಅಥವಾ ಎಂಬಾಪ್ಪೆ ಅಮ್ಮ ಎಂಬಾಮ್ಮೆ ಅಂತ ಕನ್ಫ್ಯೂಸ್ ಮಾಡಿಕೊಂಡು ಯಾರಾದ್ರೂ ಆಟೋಗ್ರಾಫ್ ಕೇಳಕ್ಕೆ ಬಂದು ಸತಾಯ್ಸಿರೋವ್ರು.'

'ಕ್ವತಾರ್, ಮೆಸ್ಸಿ ಎಂಬಾಮ್ಮೆ ಏನೇನೋ ಹೇಳ್ತಿದೀಯ. ಬಹಳ ಚಳಿಯಾದ್ರೆ ಒಂದೊಂದು ಸಲ ಪಿತ್ಥ ನೆತ್ತಿಗೇರುತ್ತೆ. ನಿನ್ನ ಆರೋಗ್ಯ ಮೊದಲಿನಿಂದಲೂ ಐಬೇ. ಒಂದೆರೆಡು ಬೆಳ್ಳುಳ್ಳಿ ಬಿಡಿಸಿ, ಅದಕ್ಕೆ ಬೇಯಿಸಿದ ಬದನೇಕಾಯಿಯನ್ನು ಸೇರ್ಸಿ ಎಲ್ಲ ಅರೆದು, ಕಲ್ಲುಪ್ಪು ಹಾಕಿ ಲೇಹ್ಯ ಮಾಡಿ ನೆತ್ತಿಗೆ ಹಚ್ಚಿದರೆ ತಲೆ ತಣ್ಣಗಾಗುತ್ತೆ. ಹೊಟ್ಟೆಗೆ ತೊಗೊಂಡ್ರೆ ನಿನ್ನ ಹೊಟ್ಟಬಾಕತನಕ್ಕೆ ಬ್ರೇಕ್ ಹಾಕುತ್ತೆ. ಮೂರು ಹೊತ್ತು ಮೂವತ್ತು ದಿನ ತೊಗೊಂಡ್ರೆ ರಾಮಬಾಣದ ಹಾಗೆ ಕೆಲಸ ಮಾಡುತ್ತೆ. ಚಳೀನೂ ಓಡ್ಸುತ್ತೆ. ಇವತ್ತೇ ನಿನ್ನ ಪಥ್ಯ ಶುರು ಮಾಡ್ತೀನಿ'.

'ಅಜ್ಜಿ! ನಿನ್ನ ಮನೆ ಹೆಲ್ತ್ ಕಿವಿ ಮಾತನ್ನ ನೀನು ಕಾರ್ಯ ರೂಪಕ್ಕೆ ಇಳಿಸಿ ನನ್ನ ಹಾರ್ಟನ್ನ ತೂತು ಮಾಡಲು ಎರಡು ಸಲ ಟ್ರೈ ಮಾಡಿದ್ದೆ.. ಆವಾಗಿನಿಂದ ನಿನ್ನ ನಾನು ಹತ್ರ ಬಿಟ್ಟಿಲ್ಲ..ಅದರ್ಲಿ ಅಜ್ಜನೂ ಹೀಗೇ ಚಳಿಗೆ ಒದ್ದಾಡೋವ್ರಾ..?'

'ಅವ್ರ ತೋಟದ ಮಾಲೀನೇ ಅವರ್ನ ಕೊಲ್ಲಕ್ಕೆ ಬಂದ ಅಂತ ಎಲ್ಲರ್ಗೂ ಹೇಳ್ಕೊಂಡು ಬರೋವ್ರು..'

'ಅಯ್ಯೊ! ಹಾಗ್ಯಾಕೆ ಮಾಡ್ದ?'

'ನಮ್ಮನೇಲಿ ತೋಟ ಇತ್ತಲ್ಲ.. ದಿನಾ ಮಾಲಿ ಬಸಪ್ಪ ಬಕೆಟ್‌ನಲ್ಲಿ ನೀರು ತುಂಬ್ಸಿ ಗಿಡಗಳ್ಗೆಲ್ಲಾ ನೀರು ಹಾಕೋನು. ಆಗ ಮಾರ್ಗಶಿರ ಮಾಸ. ವಿಪರೀತ ಚಳಿ. ಒಂದು ದಿವ್ಸ ಸ್ನಾನಕ್ಕೆ ಅಂತ ಬಾಯ್ಲರ್ ನಿಂದ ಬಕ್ಕಟ್ಗೆ ನೀರು ತೋಡಿ ಅವರ ಸ್ನಾನಕ್ಕೆ ಆಂತ ಇಟ್ಟಿದ್ದೆ. ಷೇವ್ ಮಾಡಿಕೊಂಡು ಬರ್ತಿನೀ ಅಂತ ಅಜ್ಜ ಒಳಗೆ ಹೋದ್ರು. ಅಷ್ಟರಲ್ಲಿ ಬಸಪ್ಪ ಬೆಳಿಗ್ಗೆ ಬಂದವ್ನೇ ಬಕೆಟ್ ತೊಗೊಂಡು ನೀರು ಹಾಕಿ ತಿರುಗ ಬಕೆಟ್ನಲ್ಲಿ ತಣ್ಣೀರು ತುಂಬ್ಸಿ ಇಟ್ಟಿದ್ದ. ಅಜ್ಜ ಸ್ನಾನಕ್ಕೆ ಅಂತ ಹೋದವ್ರು ಹಾವು ಕಚ್ಚಿದ ಹಾಗೆ ಕಿಟಾರ್ ಅಂತ ಕಿರಿಚ್ಕೊಂಡು ಬರೀ ಟವೆಲ್ ಸುತ್ಕೊಂಡು ಹೊರಗಡೆ ಓಡ್ಬಂದ್ರು! ಮೈ ಎಲ್ಲಾ ಗಡಾಗಡಾ ನಡುಗ್ತಾ ಇತ್ತು. ಆಗ್ಲೆ

ಗೊತ್ತಾಗಿದ್ದು ಅವ್ರು ಬಸಪ್ಪ ಬಕೆಟ್ನಲ್ಲಿದ್ದ ಕೊರಿಯೋ ತಣ್ಣೀರ್ನ ತಲೇ ಮೇಲೆ ಸುರ್ಕೊಂಡಿದಾರೇಂತ!'

'ಹ್ಹ ಅಜ್ಜಿ! ಬಿಸಿ ನೀರು ಅಂತ ತಣ್ಣೀರ್ನ ತಲೆಗೆ ಸುರ್ಕೊಂಡ್ರಲ್ಲಾ ಅಜ್ಜ.. ಆ ಶಾಕ್ ನೆನೆಸ್ಕೊಂಡ್ರೆ ನನಗೇ ಮೈಯೆಲ್ಲಾ ಜುಂ ಅನ್ನುತ್ತೆ.'

'ಇನ್ನೊಂದು ಸಲ ಅವರ ಸ್ಕೂಲ್ ಫ್ರೆಂಡ್ ಮಡಕೇರಿ ಕಾಫಿ ಪ್ಲಾಂಟರ್ ನಾಣಪ್ಪ ಅಜ್ಜ ಮತ್ತು ಅವರ ಸ್ನೇಹಿತ್ರನ ಡಿಸೆಂಬರ್ನಲ್ಲಿ ಅವನ ಮನೆಗೆ ಕರೆದಿದ್ದ.'

'ಒಳ್ಳೆ ಫ್ರೆಂಡ್ಸ್ ಅಜ್ಜನಿಗೆ'.

' ಎಲ್ಲಾ ಸ್ಕೂಲಿನಲ್ಲಿ ಒಟ್ಟಿಗೆ ಓದಿದ್ರಂತೆ. ಎರಡು ಮೂರು ದಿನ ಇದ್ದು ಬರ್ತೀವಿ ಅಂತ ಹೋದ್ರು. ಬರ್ತಾ ಅವನ ತೋಟದ ಕಾಫಿ ಪುಡಿ, ಮೆಣಸು ಎಲ್ಲಾ ತರ್ತೀನಿ ಅಂತ ಎರಡು ಮೂರು ಚೀಲ ತೊಗೊಂಡು ಹೋದ್ರು. ಆ ಪುಣ್ಯಾತ್ಮ ಇವ್ರು ಬರೋದನ್ನ ಮರೆತು ಅವನ ಮನೇವ್ರನ್ನೆಲ್ಲಾ ಕರ್ಕೊಂಡು ತೀರ್ಥಯಾತ್ರೆಗೆ ಕಾಶಿಗೆ ಹೋಗಿದ್ದ. ಇವ್ರು ಹೋದಾಗ ಅಲ್ಲಿ ಇದ್ದಿದ್ದು ಅವನ ಹಸುಗಳು, ನಾಯಿ ಮತ್ತು ಒಂದೆರೆಡು ಕೋಳಿಗಳು. ಮನೆ ನೋಡಿಕೊಳ್ತಿದ್ದವ್ನು ಪಕ್ಕದ ಊರಿಗೆ ಹೋಗಿದ್ದ. ಅಲ್ಲೆ ರಾತ್ರಿ ಕೊರಿಯೊ ಚಳೀಲಿ ಪಡಸಾಲೆಲಿ ಮಲಗಿದ್ದು, ಸೊಳ್ಳೆಗಳ ಕೈಲಿ ಕಚ್ಚಿಸ್ಕೊಂಡು ಬೆಳಿಗ್ಗೆ ಫಸ್ಟ್ ಬಸ್ನಲ್ಲಿ ಬಂದು ಮನೆ ಸೇರಿದ್ರು. ಮೂರು ದಿವಸ ಬೆನ್ನು ನೋವ್ರೂಂತ ಮುಲಗುಟ್ತಾ ಮಲಗಿದ್ದರು. ಚಳಿಜ್ವರ ಹೋಗಕ್ಕೆ ಒಂದು ವಾರ ಆಯ್ತು.'

'ಅಜ್ಜಂಗೂ ಚಳಿಗೂ ಎನೋ ನಿಕಟ ಸಂಬಂಧ ಅನ್ಸುತ್ತೆ'.

'ನಿನಗೆ ಜಾಪಕ ಇದ್ಯೋ ಇಲ್ವೋ ಗೊತ್ತಿಲ್ಲ, ನಮ್ಮ ಮನೇಲೆ ಗಿರಿ ಅನ್ನೋ ಹುಡುಗಿ ಕೆಲಸ ಮಾಡ್ತಿತ್ತು'.

'ಚೆನ್ನಾಗಿ ಜ್ಞಾಪಕ ಇದೆ ಅಜ್ಜಿ'.

'ಬೆಳಿಗ್ಗೆ ಲಿಂಗಾಂಭುಧಿ ಕೆರೆಯಿಂದ ನಡಕೊಂಡು ಬರೋವ್ಳು. ಚಳಿಗೆ ಮಳೆಗೆ ಆಗ್ಲಿ ಅಂತ ಅವ್ಳಿಗೆ ಮನೇಲಿದ್ದ ಪಲ್ಲದ ಗೋಣಿಚೀಲ ಕೊಟ್ಟಿದ್ದೆ.'

'ಅದು ಇದ್ರೂ ನಡುಗ್ತಾ ಬರೋವ್ಳು ಪಾಪ'.

'ಅದಾದ ಮೂರು ವರ್ಷಕ್ಕೆ ನಮ್ಮ ಸೂರಿ ಮಕ್ಕಳ ಜೊತೆಗೆ ಅಮೆರಿಕಾದಿಂದ ಇಲ್ಲಿಗೆ ಬಂದಾಗ ಎಲ್ಲಾರೂ ಅದೇ ತರಹದ ಬಟ್ಟೆಲಿ ವಿಂಡ್ ಟೀಚರ್ ಅಂತ ಹೆಸರು ಇರೋ ಗೋಣಿಚೀಲದಲ್ಲಿ ಮಾಡಿದ್ದು ಹಾಕಿಕೊಂಡು ಬಂದಿದ್ರು!'

'ಅದು ವಿಂಡ್ ಚೀಟರ್ ಅಜ್ಜಿ ಟೀಚರ್ ಅಲ್ಲ'.

ಏನೋ ಸುಡುಗಾಡು'.

' ಅದನ್ನು ಸೂರಿ ಅಲ್ಲಿ ಎನ್ವೈರ್ನಮೆಂಟ್ ಜಾಕೆಟ್ ಅಂತ ಕರೀತಾರೆ ಅದನ್ನ ಅಂತ ಹೇಳಿದ್ದ! ಅದನ್ನು ಇಲ್ಲಿ ಕೋಣನ ಕುಂಟೆಲಿ ಮಾಡ್ತಿರ್ಬೇಕು. ಅದನ್ನು ಹತ್ರಷ್ಟು ಬೆಲೆಗೆ ಹೊರಗಡೆ ಮಾರ್ತಾರಂತೆ'.

'ಇನ್ನೊಂದು ಕೆಟ್ಟ ವಿಷಯ...ನಾನು ಹೋದವಾರ ಬೆಳಿಗ್ಗೆ ಪುರಾಣಕ್ಕೆ ಹೋದಾಗ ಒಂದಿಷ್ಟು ಸ್ಕೂಲು ಬಸ್ಸಿಗೆ ಕಾಯ್ತಿರೋ ಹುಡುಗ್ರು ಗುಂಪಲ್ಲಿ ಕೂತ್ಕೊಂಡು ಸಿಗೆರೇಟ್ ಸೇದ್ತಿದ್ರು. ಎಲ್ಲಾರೂ ಬಾಯ್ಲಿ ಹೊಗೆ ತುಂಬಿಕೊಂಡಿದ್ರು. ಅವ್ರ ಅಪ್ಪ ಅಮ್ಮ ಯಾರೂ ಇರ್ಲಿಲ್ಲ...ಅವ್ರ ಚೀಲದಲ್ಲಿ ಇನ್ನೂ ಏನೇನೋ ಇಟ್ಕೊಳ್ತಿದಾರೇಂತ ಗೊತ್ತಾಗಿ ಹಿಡಿದ್ರಂತೆ..ಎಂಥಾ ಕಾಲ ಬಂತಪ್ಪಾ ರಾಮ ರಾಮ!'.

'ಆಜ್ಜಿ! ನಾನು ಆ ಹುಡುಗ್ರನ್ನ ಬೆಳಿಗ್ಗೆ ವಾಕಿಂಗ್ ಮಾಡುವಾಗ ನೋಡ್ತಿನಿ ದಿನಾ. ನೀನು ಪುರಾಣಕ್ಕೆ ಹೋಗುವಾಗ ನೋಡಿ, ನೋಡ್ರೋ ಅಜ್ಜಿ ಈ ವಯಸ್ನಲ್ಲಿ ಶೋಕಿ ಮಾಡ್ತಾ ಸಿಗರೇಟ್ ಕುಡಿತಾಳೆ ಅಂತ ಮಾತಾಡ್ಕೊಂಡ್ರೋ ಏನೋ!'

'ಏನೋ ತಲೆಹರಟೆ ಮಾಡ್ತಿದೀಯ?'

'ಅಜ್ಜಿ! ಹುಡುಗ್ರು ಸಿಗರೇಟ್ ಕುಡೀತಿರಲ್ಲಾ.. ಚಳಿಗೆ ನಾವು ಉಸಿರಾಡ್ದಾಗ ಅದು ಹೊರಗಡೆಗಿಂತ ತೇವಾಂಶ ಬಿಸಿ ಇರುತ್ತೆ. ಅದು ಚಳಿಲಿ ಹೊರಗಡೆ ಬಂದಾಗ ಆವಿಯಾಗಿ ಬಾಯಿಂದ ಹೊಗೆ ಬರೋಹಾಗೆ ಕಾಣ್ಸುತ್ತೆ. ನೀನು, ನಾನು, ಹುಡುಗ್ರು ಎಲ್ಲಾರೂ ಸಿಗರೇಟ್ ಕುಡಿತಿರೋ ಹಾಗೆ ಕಾಣ್ಸುತ್ತೆ...ಅದು ನಮ್ಮ ಬಾಯಿಂದ ಬರೋ ಆವಿ ಅಷ್ಟೆ'.

'ಒಂದು ಚಾನ್ಸ್ ಸಿಕ್ಕಿದ್ರೆ ನೋಡು... ದೊಡ್ಡ ಕ್ಲಾಸ್ ತೊಗೊಳ್ತಿಯಾ ನೀನು'.

'ಹೌದಜ್ಜಿ. ನನಗೆ ಚಾನ್ಸು ಸಿಗೋದೇ ಬಹಳ ಅಪರೂಪ.

.....

■

ಹೊಸ ವರ್ಷದ ರೆಸಲ್ಯೂಷನ್



ಆಹಾ ಥಂಡಿ... ಹಾ ಥಂಡಿ...

● ಆರ್ನಿ

ಆಹಾ ಥಂಡಿ... ಅಪ್ಪಿ ಕುಂಡಿ.. ಆಹಾ ಥಂಡಿ... ಅವ್ವಿ ಕುಂಡಿ.. ಹಿಂಗ ಹೇಳ್ಕೊಂತ ಥಂಡಿನ್ನ ಕರೀತಿದ್ರೊ... ಕೆರೀತಿದ್ರೊ ಅಥವಾ ಬೈತಿದ್ರೊ ಗೊತ್ತೇ ಇಲ್ಲ. ಆದ್ರ ಈಗೂ ಸ್ವಲ್ಪ ಹೆಚ್ಚಿ ಥಂಡಿ ಅನಿಸ್ತಂದ್ರ ನನ್ನ ಬಾಯಿಗೆ ಇದೇ ಉದ್ಗಾರ ಬರ್ತದ. (ಮತ್ತೆಲ್ಲಿಯೂ ಉದ್ಗಾರ ಬರೂದಿಲ್ಲ ಬಿಡ್ರಿ..) ನನ್ನ ಮಕ್ಕಳೂ ಇದೇ ಕಲ್ತಾವ... ಈ ಸಾಲಿನ ನಾಲ್ಕನೆ ಪದದ ಬಗ್ಗೆ ಅದ್ಯಾಕಷ್ಟು ಪ್ರೀತಿ ಅಂತ ಗೊತ್ತಿಲ್ಲ...

ಅವರು ಅನ್ನೂದು, ನಾ ಗದರಿದ್ಹಂಗ ಕಣ್ಣು ಕಿಸಿಯೂದು, ನಕ್ಕೊಂತ ನಾನೂ ಮನಸಿನಾಗ ಆಗಾಗ ಅಂದ್ಕೊಳ್ಳೂದು ನಡದೇ ಇರ್ತದ. ಇದ್ಯಾವುದರ ಗಮನವೇ ಇರದ್ಹಂಗ ಥಂಡಿಗಾಳಿ ಮಾತ್ರ ಸೂಸ್ಕೊಂತ, ಬಾಗಿಲ ಸಂದಿಯಿಂದ, ಕಿಟಕಿ ಸಂದಿಯಿಂದ ಸೂಸಿ ಬಂದು ನಮಗ ಅಪ್ಪಿರ್ತದ...

ಈ ಥಂಢಿಗೂ ಅಪ್ಪುಗೆಗೂ ಭಾರಿ ಸಮೀಪದ ಸಂಬಂಧ ಐತಿ ನೋಡ್ರಿ. ಚೂರು ಥಂಡಿ ಅನಿಸಿದ್ರ ಸಾಕು... ನನ್ನ ಮಕ್ಕಳು, ನಾಯಿ ಮರಿ ತಾಯಿನಾಯಿ ಹೊಟ್ಟಿಗೆ ಅಪ್ಪೊಂಡು ಮಲಗೂಹಂಗ ಬಂದೇ ಬಿಡ್ತಾರ. ನನ್ನ ಮೈನೆ ನನಗ ಭಾರ ಆಗಿ, ಉಸ್ಸಪ್ಪ ಅಂತ ಮಲಗಿದಾಗ.. ಇವು ಬಂದು ಮೆತ್ಕೊಂಡ್ರ, ಮೊದಲ ಬೈಗುಳ ಥಂಡಿಗೆ ಸಲ್ಲಿದ್ರೂ, ನಾನೂ ಬೆಚ್ಚಗ ಮಕ್ಕೊಂತೀನಿ.

ಚಳಿಗಾಲಕ್ಕೂ ಬೆಚ್ಚ ಮಕ್ಕೋಳೂದಕ್ಕೂ ಸೋಮಾರಿತನದ ಸಂಬಂಧ ಅಗ್ದಿ ಗಾಢ ಅದ ನೋಡ್ರಿ. ಚಳಿನೂ ಹಂಗೆ.. ಹಗುರಕ್ಕ ಅದೇ ಆಗ ಜಿಂಕಿನೋ, ಕೋಳಿನೋ ನುಂಗಿದ ಹೆಬ್ಬಾವು ಸಾವಕಾಶ ತೆವಳಕೊಂತ ಹೋಗುಹಂಗ ಸಣ್ಣಗೆ, ತಣ್ಣಗೆ ನಮ್ಮನ್ನ ಆವರಸ್ತದ. ಕಾಲಿನಿಂದ... ಅಂಗಾಲಿನಿಂದ.. ಶುರುವಾದ್ರ ಮೊಣಕಾಲಿನ ತನಾನೂ ತನ್ನ ದಂಡಯಾತ್ರೆ ಜೋರೆ ಇಟ್ಕೊಂಡಿರ್ತದ.

ನೋಡ್ರಿ ಬೇಕಾದ್ರ... ನಾ ಏನು ಸುಳ್ಳು ಹೇಳೂದಿಲ್ರೀಪಾ... ಆ ಥಂಡಿ ಮ್ಯಾಲಿನಾಣಿ. ನಾಲ್ಕನೆ ಪದದ ಮ್ಯಾಲೆ ಅಲ್ಲ ಮತ್ತ!! ತಾ ಹೋದಲ್ಲಿ ಎಲ್ಲ, ಚರ್ಮ ಬಿರುಕು ಮೂಡಿಸಿ, ಅಗ್ದಿ ಬರ ಬಿದ್ದ ಎರಿ ಹೊಲದ್ಹಂಗ ಚಿತ್ತಾರ ಬಿಡಿಸಿರ್ತದ. ಅಷ್ಟೇ ಅಲ್ಲ, ಕೆರೆತ ಆಗೂಹಂಗೂ ಮಾಡ್ತದ. ಈ ಮೀನಖಂಡ, ಮೊಣಕಾಲಿನ ಹಿಂಭಾಗ... ಅದಕ್ಕ ಕನ್ನಡದಾಗ ಏನಂತಾರ ಗೊತ್ತಿಲ್ರಿಪಾ... ನನ್ನ ಮಗಳು ಕೈತೋಳುಗಳ ಕೆಳಗಿರೂದು ಕಂಕುಳ ಆದ್ರ, ಇದು ಮೊಂಕುಳ ಇರಬಹುದು ಅಂತಿದ್ಲು.. ಅಲ್ಲೆಲ್ಲ ತುರಿಕಿ ಹುಟ್ಟಿಸಿ, ಯಾರಿಗೂ ತಗ್ಗಿಬಗ್ಗಿ ನಡಿಯೋರು ಅಲ್ದೇ ಇದ್ರು, ತಮ್ಮ ಕಾಲಿಗೆ ತಾವೇ ಬೀಳುಹಂಗ ಮಾಡ್ತದ.. ಈ ಥಂಡಿ.

ಇರಲಿ... ಇರಲಿ.. ಸೋಮಾರಿಹಂಗ ಮಾರಿಯ ಮ್ಯಾಲಿನ ಗಲ್ಲದ ಮ್ಯಾಲೆ, ಮೂಗಿನ ಬದಿ ತನ್ನ ಚಿತ್ತಾರ ಬಿಟ್ರೂ ಇದನ್ನ ಓಡಸಾಕ ಮಾತ್ರ ತೆಂಗಿನೆಣ್ಣಿಯ ಜಿಡ್ಡೇ ಬೇಕು. ನನಗ ಇದೇ ಮಜಾ ಅನಸ್ತದ. ತೆಂಗಿನೆಣ್ಣಿಯ ಜಿಡ್ಡು ಈ ಒಣ ಚರ್ಮದ ಶುಷ್ಕತನ ಹೋಗ್ತದಂತ... ಗೊತ್ತಾಯ್ತಲ್ಲ... ಚರ್ಮಕ್ಕೂ ಎಣ್ಣೀನೇ ಬೇಕಂತ...

ಕರುಳಿಗೂ ಬೇಕವಾ ತಂಗಿ ಅಂತ ನಮ್ಮನಿ ಮುಂದಿನ ಕುಡುಕ ಚೀರಿಚೀರಿ ಹೇಳ್ತಿರ್ತಾನ. ಈ ಮಾತು ತಪ್ಪನಿಸಿದ್ರ ಹೊಟ್ಯಾಗ ಹಾಕ್ಕೋರಿ. ನಮ್ಮವ್ವ, ನಮ್ಮಜ್ಜ, ನಮ್ಮಮ್ಮ (ಅಮ್ಮನ ಅಮ್ಮ) ಇವರು ಹೊಟ್ಟೀಗೆ ಎಣ್ಣಿ ಹಾಕ್ಕೊಂತಿರಲಿಲ್ಲ. ಅದು ಗಟ್ಟಿಯಾದಾಗ ಹೊಟ್ಯಾಗ ಇಟ್ಕೊಂಡು ಕೂಡ್ತಿದ್ರು. ದೇಹದ ಶಾಖಕ್ಕ ಅದು ಲಗುಟ ಕರಗ್ತದ. ಅವ್ವಾ... ಹಿಂಗ ಹೇಳೂದ್ರಾಗ ಎಲ್ಲರೆ ಮತ್ತ ನಮ್ಮಜ್ಜ, ನಮ್ಮವ್ವ, ನಮ್ಮಮ್ಮ ಎಣ್ಣಿ ಹೊಟ್ಟಿಗೆ ಹಾಕ್ಕೊಂತಿದ್ರು ಅಂತ ಅಂದ್ನೇನು.. ಈ ಚಳಿಗಾಲದ ನಶಾನೆ ಹಂಗ...

ಬೆಚ್ಚಗ ಹೊದ್ದು ಮಲಗಿದಾಗ, ಗಂಟಲಗುಂಟ ಕರುಳಿಗೆ ಇಳಿಯೂತನಾನೂ ಬಿಸಿ ಇರುವ ಚಹಾ ಗುಟಕರಿಸಬೇಕನಸ್ತದ. ಸಂಜೀಕ ಎಳೀಬಿಸಿಲಿನ ಕೋಲುಗಳು, ಬೆಳಕಿನ ರೇಕುಗಳಾಗಿ ಹಿತ ಅನಿಸುಹಂಗ ನಮಗ ಸೋಕಬೇಕಾದ್ರ, ಹೊಗಿಯಾಡುವ ಕಾಫಿಯ ಬಿಸುಪು ಅಂಗೈಗೆ ತಾಕಲಿ ಅಂತ ಮನ ಬಯಸ್ತದ.

ತಣ್ಣನೆಯ ಕುಳಿರ್ಗಾಳಿ ಕೆನ್ನೆಗೆ ತಾಕಿ ಹೋಗೂಮುಂದ, ಬ್ಯಾಡಬ್ಯಾಡಂದ್ರೂ ಎಳೀಮಕ್ಕಳ ಕಿರುಬೆರಳು ಹಾಲುಣ್ಣಿಸುಮುಂದ ಗಲ್ಲಕ ತಾಕಿದ ನೆನಪು ತರ್ತಾವ. ಎದಿಗೂಡು ಬೆಚ್ಚಗ ಆಗ್ತದ. ಹಂಗೇ ಕಾಲನ ಕರೆಗೆ ಓಗೊಟ್ಟು ಮರೆಯಾದ ತಾಯಂದಿರ ಬೆಚ್ಚನೆಯ ಅಪ್ಪುಗೆಯೂ ನೆನಪಾಗಿ, ಹೊಟ್ಯಾಗ ಬೆಂಕಿ ಬಿದ್ದಂಗ ಆಗ್ತದ.

ಚಳಿಗಾಲಂದ್ರ ಹಂಗ.. ಮರಗಳು ಬಟಾಬಯಲಾದ್ಹಂಗ, ನೂರು ಬಯಕಿಗಳಿದ್ರೂ, ಬಯಕಿಗಳನ್ನೆಲ್ಲ ಉದುರಿಸಿ, ನಿರೀಕ್ಷೆಗಳಿಲ್ಲದೆ, ಬಾಂಧವ್ಯಗಳನ್ನು ಅಪ್ಪೊಂಡ್ರ ಬೆಚ್ಚಿರ್ತೇವಿ. ಇಲ್ಲಾಂದ್ರ ತರಗೆಲೆಗಳಿಗೆ ಬೆಂಕಿ ಇಟ್ಟಂಗ ನಮ್ಮನ್ನ ನಾವೇ ಸುಟ್ಕೊಂತ ಇರ್ತೇವಿ. ಇಲ್ಲಾಂದ್ರ... ಆಹಾ ಥಂಡಿ... ಮುಂದಿಂದು ನಾ ಹೇಳಾಂಗಿಲ್ಲ ಈಗ... ನಿಮಗ ಗೊತ್ತದ.. ಇದು ಮೂಲಾಧಾರದ ಮಾತು ಅಂತ..! ಬುಡಕಿನ ಮಾತು.. ಮರದ ಅಮರದ ಬುಡದ ಮಾತಂತ!!

■

ಯಮ ನನ್ನ ಬೆನ್ನು (ಸ್ಕೂಟರ್) ಹತ್ತಿದ್ದಾಗ!

●ಪ್ರಕಾಶ್ ಶೆಟ್ಟಿ

ನಿಮಗೆ ಸಖೇದಾಶ್ಚರ್ಯವಾಗಬಹುದು. ನಂಬಿದರೆ ನಂಬಿ ಬಿಟ್ಟರೆ ಬಿಡಿ. ಆದದ್ದು ಆಗಲಿ ಎಂದು ಭಾರಿ ಸಾಹಸ ಮಾಡುವುದಕ್ಕೆ ಇವತ್ತು ಹೊರಟೇ ಬಿಟ್ಟೆ. ಅದೆಲ್ಲಿಂದ ನನಗೆ ಈ ಧೈರ್ಯ ಬಂತೋ! ಹೆಂಡತಿ ಕೈಮುಗಿದು ನಿಂತಿದ್ದಳು. ಅದ್ಯಾವುದೋ ಭೂತಕ್ಕೆ ಕೋಲ ಮಾಡಿಸುತ್ತೇನೆ ಎಂದು ಹರಕೆ ಹೊತ್ತಿರಬೇಕು. ನನ್ನ ಸ್ಕೂಟರ್ ರಸ್ತೆಗಿಳಿಯಿತು! ಅದೇನಪ್ಪ ಸಾಹಸ ಎಂದು ನೀವಿನ್ನೂ ಕಾಯುತ್ತಿದ್ದೀರಿ ಎಂದು ನನಗೆ ಗೊತ್ತು. ಅದೇ, ಹೇಳಿದೆನಲ್ಲ ನಾನು ರಸ್ತೆಯಲ್ಲಿ ಸ್ಕೂಟರ್ ಓಡಿಸುವ ಧೈರ್ಯ ಮಾಡಿದ ಸಾಹಸದ ಬಗ್ಗೆಯೇ ಹೇಳುತ್ತಿದ್ದೇನೆ. ಹಲವಾರು ವರ್ಷಗಳು ಸ್ಕೂಟರ್ ಓಡಿಸಿದ ನಾನು ಇದೀಗ ಏನು ಹೇಳುತ್ತಿದ್ದೇನೆ ಎಂದು ನನಗೇ ಅಚ್ಚರಿಯಾಗುತ್ತಿದೆ. ಹೀಗಾಗಲೂ ಕಾರಣ ಬೆಂಗಳೂರಿನ ರಸ್ತೆ ಗುಂಡಿಗಳು!

ಸ್ವಲ್ಪ ದೂರ ಹೋಗಿದ್ದೆನಷ್ಟೇ. ನನ್ನ ಸ್ಕೂಟರ್ ಎದುರು ಒಬ್ಬ ವ್ಯಕ್ತಿ ಡ್ರಾಪ್ ಕೇಳಿದ. ತಲೆಯಲ್ಲಿ ಕಿರೀಟವಿತ್ತು. ದಪ್ಪ ಮೀಸೆ, ದಪ್ಪ ದೇಹ. ರಾಜನ ವೇಷ ಹಾಕಿಕೊಂಡಿದ್ದ. ಹೆದರಿ ಸ್ಕೂಟರ್ ನಿಲ್ಲಿಸಿದೆ. ಅಸಾಮಿ ಕುಳಿತೇ ಬಿಟ್ಟ.

ಎಲ್ಲಿ ಹೋಗಬೇಕಾಗಿತ್ತು ಎಂದು ಕೇಳಿದೆ.

"ನೀವು ಎಲ್ಲಿ ಹೋಗ್ತೀರಾ.. ಅಲ್ಲಿಗೆ" ಅಂದ.

ಒಳ್ಳೇ ಕತೆಯಾಯಿತ್ತಲ್ಲ...!

"ರೀ, ನಿಮ್ಮ ಹೆಲ್ಮೆಟ್ ಸರಿಯಿಲ್ಲ. ಪೊಲೀಸ್ ಹಿಡೀತಾರೆ" ನಾನು ಎಚ್ಚರಿಸಿದೆ. ಆತ ಗಬ್ಬರ್ ಸಿಂಗ್ ನಂತೆ ನಕ್ಕು ಹೇಳಿದ.

"ಬೆಂಗಳೂರಿನ ಟ್ರಾಫಿಕ್ ಪೊಲೀಸರೆಲ್ಲ ನನಗೆ ಗೊತ್ತು. ನಾನು ಯಮರಾಜ ಕಣ್ರೀ. ಇಲ್ಲಿ 38000 ಗುಂಡಿಗಳಿವೆ ಎಂದು ಅವರೇ ಮಾಹಿತಿ ನೀಡಿದ್ದು .. ಅದಕ್ಕೆ ಬಹಳ ದಿನಗಳಿಂದ ಇಲ್ಲೇ ಮೊಕ್ಕಾಂ ಹೂಡಿದ್ದೇನೆ..."

ಈತ ನಿಜವಾಗ್ಲೂ ಯಮರಾಜನೇ???!!! ಇಂಪಾಸಿಬಲ್! ಎಲ್ಲೋ ಛದ್ಮವೇಷ ಸ್ಪರ್ಧೆಗೋ, ನಾಟಕ ಮುಗಿಸಿಯೋ ಬರುತ್ತಿರಬೇಕು. ಸುಮ್ಮನೆ ನನ್ನನ್ನು ಯಾಮಾರಿಸುತ್ತಿದ್ದಾನೆ ಅಂದುಕೊಂಡರೂ, ಆತ ಯಮನೆಂದೇ ನಂಬಿದಂತೆ ಅವನ ಜತೆ ಮಾತು ಮುಂದುವರಿಸಿದೆ.

****

"ಯಮರಾಜರೇ, ನಿಮ್ಮ ವಾಹನ ಎಲ್ಲಿ?"

"ಅದೇನಾಯಿತೂಂದ್ರೆ ಮೊನ್ನೆ ನನ್ನ ಕೋಣ ಇಂದಿರಾನಗರದ ಹತ್ರ ಗುಂಡಿಗೆ ಬಿದ್ದು ಕಾಲು ಮುರಿದು ಹೋಗಿದೆ"

"ನಿಮ್ಮ ಅದೃಷ್ಟ! ಯಾವುದಾದರೂ ದೊಡ್ಡ ವಾಹನ ನಿಮ್ಮ ಮೇಲೆ ಹಾದು ಹೋಗಿ, ಯಮನ ಮರಣದ ಸುದ್ದಿ ಕೇಳಬೇಕಾಗಿ ಬರಲಿಲ್ಲ!"

"ಏಯ್, ಹುಲುಮಾನವ... ನಾನು ಸಾಯುವುದುಂಟೇ? ಸಾಯುವವನಾಗಿದ್ದರೆ

ನಿನ್ನ ಈ ಗುಜರಿ ಸ್ಕೂಟರ್‌ನಲ್ಲಿ ಬರುತ್ತಿದ್ದೆನೋ?"

'ಅಂದ ಹಾಗೇ ನೂರಾರು ಕೆರೆಗಳನ್ನು ನಿರ್ಮಿಸಿದ ಕೆಂಪೇಗೌಡರು ಇಷ್ಟೊಂದು ಗುಂಡಿಗಳನ್ನು ನಿರ್ಮಿಸುವುದಕ್ಕೆ ಸ್ಫೂರ್ತಿ ಇರಬಹುದೇ?'

'ಇರಲಿಕ್ಕಿಲ್ಲ ಯಮರಾಜ....ಕೆಂಪೇಗೌಡ ಪ್ರತಿಮೆಗೆ ಗುಂಡಿಗಳು ಕಾಣಬಾರದೆಂದೇ ಅದನ್ನು 108 ಅಡಿ ಎತ್ತರಕ್ಕೆ ನಿರ್ಮಿಸಿದ್ದು!'

'ಅಲ್ಲಪ್ಪಾ... ಪಿ ಎಂ ಬರುವ ದಾರಿಯಲ್ಲಿ ತಕ್ಷಣ ಗುಂಡಿಗಳನ್ನು ಮುಚ್ಚುತ್ತಾರಲ್ಲ... ಅದೇ ಸಿಎಂ ಹೋಗುವ ಕಡೆ ಹಾಗೇ ಮಾಡಲ್ವಲ್ಲ!'

'ನಮ್ಮ ಸಿಎಂ ಗೆ ಗುಂಡಿಗಳೆಂದರೆ ಬಹಳ ಇಷ್ಟ. ಕಾರಿನಲ್ಲಿ ಹೋಗುವಾಗ ಕುದುರೆ ಸವಾರಿ ಮಾಡುವಂತಿರಬೇಕಂತೆ... ಅಹ್ಹ ಹ... ಹ.... '

'ಗುಂಡಿಗಳ ಸಮಸ್ಯೆ ಇಷ್ಟೊಂದು ಇದ್ದರೂ ಒಬ್ಬ ಗುಂಡಿ ಸಚಿವರನ್ನು ಇಟ್ಟುಕೊಳ್ಳಬೇಡವೇ?'

'ನಿಮ್ದೊಳ್ಳೆ ತಮಾಷೆ. ಗುಂಡಿ ಸಮಸ್ಯೆ ಬಿಡಿ, ತಮ್ಮ ಮಂಡಿ ಸಮಸ್ಯೆ ಪರಿಹರಿಸುವುದನ್ನೇ ಅವರು ಮರೆತಿದ್ದಾರೆ. ಅದೆಲ್ಲ ಸರಿ, ನೀವಿಲ್ಲಿ ಗುಂಡಿಗಳನ್ನಷ್ಟೆ ನೋಡಿದ್ದೀರಾ. ಗುಂಡು ಹಾಕುವ ಜಾಗಗಳು ಎಷ್ಟಿವೆ ಗೊತ್ತಾ?'

'ಗುಂಡು! ಹ ಹಾ...ಗೊತ್ತು. ಅದಕ್ಕೆ ಬಲಿಯಾದ ಅನೇಕರು ಯಮಲೋಕದಲ್ಲಿದ್ದಾರೆ'

'ಹೌದು, ಗುಂಡಿ ಮತ್ತು ಗುಂಡು ಎರಡೂ ಅಪಾಯಕಾರಿ! ನೀವು ನನ್ನ ಸ್ಕೂಟರ್ ಐ ಮೀನ್...ಬೆನ್ನು ಹತ್ತಿದ್ದು ನೋಡಿದ್ರೆ ನನ್ನ 'ಡಿಸ್ಟಿನೇಶನ್' ಹತ್ತಿರ ಬರುವಂತಿದೆ. ಸಾಯೋದ್ರಾಗೆ ಒಮ್ಮೆಯೂ ನೋಡಲಿಲ್ಲ ಜೋಗದ ಗುಂಡಿ...ಅಟ್ಲಿಸ್ಟ್ ನೋಡಿದೆನಲ್ಲ...ಬೆಂಗಳೂರ ಗುಂಡಿಗಳನ್ನ!'

'ಓಹ್! ಇನ್ನೂ ಜೋಗ ಕಂಡಿಲ್ವಾ? ಹಾಗಾದ್ರೆ ಗಾಡಿ ನಿಲ್ಲಿಸು. ಬೇರೆ ಯಾರದ್ದಾದರೂ ಸ್ಕೂಟರ್ ನಲ್ಲಿ ಹೋಗ್ತೀನಿ.'

****

ಹಾಗೇ ನಾನು ಯಮನ ಜತೆ ಸವಾರಿ ಮಾಡಿದ ಮೇಲೂ ಆರಾಮವಾಗಿ ಮನೆಗೆ ವಾಪಾಸಾದೆ. ಹೆಂಡತಿ ಹರಕೆ ಹೊತ್ತಿದ್ದು ನೆನಪಾಗಿ ಕೋಲ ಯಾವಾಗ ಮಾರಾಯ್ತಿ? ಎಂದು ಕೇಳಿದೆ.

ಚೆಂಗನ 'ಭಯೋತ್ಪಾದನೆ'

● ಜಿ.ವಿ. ಅರುಣ

ಮೊನ್ನೆ ನವೆಂಬರಿನಲ್ಲಿ ಒಂದು ದಿನ, ಬೆಳಿಗ್ಗೆ ಮನೆಯ ಮುಂದೆ ಪೇಪರ್ ಓದುತ್ತಾ ಕುಳಿತಿದ್ದೆ.

"ನಂಸ್ಕಾರ ಸಾ " ಪರಿಚಿತ ಧ್ವನಿ; ತಲೆಯೆತ್ತಿ ನೋಡಿದೆ. ಚೆಂಗ ಬಹಳ ದಿನಗಳ ಅನಂತರ ಮನೆಗೆ ಬಂದಿದ್ದ.

"ಓಹೋ , ಬಾ, ಬಾ ಚೆಂಗ, ಎಷ್ಟು ದಿನ ಆಗೋಗಿತ್ತು ನಿನ್ನನ್ನು ನೋಡಿ! ನಮ್ಮನ್ನೆಲ್ಲ ಮರೆತುಬಿಟ್ಟೆಯೋ ಹೇಗೆ ? ಹೇಗಿದ್ದೀ?" ನಾನು ಕೇಳಿದೆ.

"ಏ ಅಂಗೇನೂ ಇಲ್ಲ ಸಾ ನಾನು, ನಮ್ಮ ಎಂಡ್ರು, ಮಕ್ಳು ಎಲ್ಲಾ ಸೆಂದಾಗೇ ಅವ್ರೆ. ನಿಮ್ಮತ್ರ ಮಾತಾಡಕ್ಕೆ ಬೇಕಾದಷ್ಟು ಇಚಾರಗಳು ಇದ್ವೋ. ಆದ್ರೆ ಒಂದು ಕೇಳೋಮಾ ಅನ್ನೋ ಹೊತ್ತಿಗೆ ಮತ್ತೊಂದು ಇಚಾರ ಬಂದ್ಬಿಡೋದಾ ಅದಕ್ಕೆ ಫೋನ ಮಾಡಕ್ಕೆ, ಬರಕ್ಕೆ ಆಗ್ನಿಲ್ಲ ಸಾ "

"ಮತ್ತೆ ಆ ನಿನ್ನ ಸಮಸ್ಯೆಗಳಿಗೆ ಪರಿಹಾರವನ್ನು ಹೇಗೆ ಕಂಡುಕೊಂಡೆ ಚೆಂಗ?" ಕೇಳಿದೆ. ಯಾವುದೇ ಸಮಸ್ಯೆ ಬಂದರೂ ಅದಕ್ಕೆ ಪರಿಹಾರ ಸಿಕ್ಕುವವರೆಗೆ ಅವನು ಸುಮ್ಮನೆ ಇರುವ ಅಸಾಮಿನೇ ಅಲ್ಲ. ಹಾಗಾಗಿ ನನಗೆ ಕುತೂಹಲವಾಗಿತ್ತು.

"ಅನ್ಪವ ಸಾ, ಅನ್ಪವ. ಕೆಲವಕ್ಕೆ ಎಂಡ್ರ ಅತ್ರ, ಇಲ್ಲ ಮಕ್ಕನ್ನ ಕೇಳ್ತಿದ್ದೆ. ನಿಮಗೆ ಗೊತ್ತಲ್ಲ, ರವಷ್ಟು ಬೀಡಿ ಮ್ಯಾಕೆ ನಂಗೆ ಪಿರೀತಿ ಅಂತ. ನಾನು ಬೀಡಿ ತಗೊಳ್ಳೋ ಗೂಡಂಗಡಿಯವನು ದಕ್ಷಿಣ ಕನ್ನಡದವ್ನು. ಅವ್ನು ಅದೇನು ಚೂಟಿ ಅಂತೀನೀ. ಏನೇ ಸಮಸ್ಯೆ ಕೇಳಿದ್ರು, ಥಟ್ಟಂತ ಪರಿಹಾರ ಯೋಳ್ತಾನೆ "

"ಯಕ್ಷಗಾನ ತಾಳಮದ್ದಳೆ ಪ್ರಭಾವ ಇರುತ್ತಪ್ಪ ಅವರ ಮೇಲೆ."

"ನಿಮಗೆ ಹೆಂಗೆ ಗೊತ್ತಾಯ್ತು ಸಾ ! ನಿಜ ಸಾ , ಯಕ್ಷಗಾನ, ತಾಳ ಅಂತ ಓಯ್ತಾನೇ ಇರ್ತಾನೆ ಸಾ ಅವನ್ನ ಹೆಂಗಿದ್ರು ದಿನಕ್ಕೆ ಎರಡು ಕಿತ ನೋಡ್ತೀನಲ್ಲ. ಅದಕ್ಕೆ ಎಲ್ಲಾ ಡೌಟನ್ನು ಅವ್ನ್ ಅತ್ರನೇ ಕೇಳಿಬಿಡ್ತೀನಿ. ಅದ್ಕೆ ನಿಮಗೆ ತೊಂದರೆ ಕೊಡ್ತಾ ಇಲ್ಲ ಸಾ "

"ಒಳ್ಳೇದಪ್ಪ ಚೆಂಗ, ಒಟ್ಟಿನಲ್ಲಿ ನಿನ್ನ ಸಂದೇಹಗಳು ಪರಿಹಾರ ಆಗ್ತಿದ್ರೆ ಅದೇ ನನಗೆ ಸಂತೋಷ.

"ಆದ್ರೆ ನಿಮ್ಮ ಮೇಲೆ ಗೌರ್ವ ಕಮ್ಮಿ ಆಗಿಲ್ಲ ಸಾ , ನಮ್ಮ ಗುರುಗೋಳು ಹಿಂಗೇ ಏಳೋರು ಅಂತ ಅವ್ನೆ ಏಳ್ತಾನೆ ಇರ್ತೀನಿ ಸಾ "

"ಸಂತೋಷ ಆಯ್ತು ಚೆಂಗ. ಈಗೇನು ಇದ್ದಕ್ಕಿದ್ದ ಹಾಗೆ ನನ್ನ ನೆನೆಸಿಕೊಂಡು ಬಂದದ್ದು?" ಚೆಂಗನನ್ನು ಜಾಡಿಗೆ ತರಲು ಕೇಳಿದೆ.

"ಅದೇ ಸಾ , ಭಾರಿ ಡೌಟು. ಅದಕ್ಕೆ ನಿಮ್ಮ ತಾವ ಬಂದೆ."

"ಏನಪ್ಪ ಅಂಥ ಭಾರಿ ವಿಚಾರ?"

"ಹೂಂ ಸಾ , ಬಯೋತ್ಪಾಧಕರ ವಿಚಾರ ಸಾ "

"ಓಹೋ ಅವರ ವಿಚಾರ ಕೇಳಿದ್ರೆ ನನಗೆ ಮೈಯೆಲ್ಲಾ ಉರಿಯುತ್ತೆ ಚೆಂಗಾ "

"ಅಲ್ಲವ್ರಾ ಸಾ, ನಂಗೂ ಅಸ್ಟೇಯಾ, ಈಗ ನೀವೇ ಯೋಳಿ ಸಾ , ಈ ಬಯೋತ್ಪಾಧಕರ ಹೊಟ್ಟೆ ಸೀಳಬೇಕಲ್ವಾ ಸಾ "

"ಹೊಟ್ಟೆ ಸೀಳೋದೇನು, ಅವರ ವಂಶನೇ ನಿರ್ವಂಶ ಮಾಡಬೇಕು; ಈಗ ಹುಟ್ಟಿಲ್ಲ, ಮುಂದೆ ಹುಟ್ಟೋದು ಇಲ್ಲ ಅನ್ನಿಸಬೇಕು". ಆವೇಶದಿಂದ ಹೇಳಿದೆ.

"ಸಾ , ನಾನು ಯೋಳಿದ್ದು ಅದಲ್ಲ ಸಾ "

"ಮತ್ತೆ ಇನ್ನೇನಪ್ಪ?" ಕೇಳಿದೆ.

"ಈ ಬಯೋತ್ಪಾಧಕ ಪದದಲ್ಲಿ 'ಧ' ಇದ್ಯಲ್ಲ ಸಾ, ಅದ್ರ ಹೊಟ್ಟೆ ಸೀಳಬೇಕೊ ಇಲ್ಲವೋ. ಅದು ವಸಿ ಯೋಳಿ ಸಾ."

ಚೆಂಗನ ಈ ಕನ್ನಡ ಪ್ರೀತಿಯಿಂದ ನನ್ನ ಆವೇಶವೆಲ್ಲ ಇಳಿದು ಹೋಯಿತು.

"ಇದನ್ನ ನಿನ್ನ ಗೂಡಂಗಡಿ ಸ್ನೇಹಿತರು ಸ್ಪಷ್ಟವಾಗಿ ತಿಳಿಸ್ತಾ ಇದ್ರು. ಅವ್ರನ್ನ ಕೇಳಲಿಲ್ವ?"

"ಕೇಳ್ದೆ, ಅವ್ನು ನಕ್ಕುಬಿಟ್ಟ. ಆಮ್ಯಾಕೆ ಅಲ್ಪಪ್ರಾಣಿ ಅಂತ ನನಗೆ ಹೆಸರು ಇಟ್ಟು ಕರ್ದ."

ನನಗೆ ಬಂದ ನಗುವನ್ನು ತಡೆದುಕೊಂಡು, "ಅವರು ಸರಿಯಾಗೇ ಹೇಳಿದ್ದಾರಲ್ಲಪ್ಪ, ನಿನಗೆ ಅಲ್ಪಪ್ರಾಣಿ ಎಂದಿಲ್ಲ. ಅವರು ಭಯೋತ್ಪಾದಕದಲ್ಲಿ 'ದ' ಅಲ್ಪಪ್ರಾಣ, ನೀನು ಹೇಳಿದಂತೆ ಹೊಟ್ಟೆ ಸೀಳಬೇಕಾಗಿಲ್ಲ ಅಂತ ಅದರರ್ಥ" ಅಂದೆ.

"ಓ ಸರಿ ಅಂಗಾದ್ರೆ. ಆದ್ರೂ ಹೊಟ್ಟೆಸೀಳಿದರೇನೇ ಆ ಪದಕ್ಕೆ, ಅವರು ಮಾಡೋ ಕೇಡಿನ ಕೆಲ್ಸ ತಿಳಿಸೋ ಒಂದು ಸಕ್ತಿ ಬರುತ್ತೆ ಸಾ "

"ಅದಿರ್ಲಿ, ಅಲ್ಪಪ್ರಾಣ ಮಹಾಪ್ರಾಣಗಳ ಬದಲು ಹೊಟ್ಟೆ ಸೀಳೋದು ಅಂತ ಯಾರು ನಿನಗೆ ಹೇಳಿಕೊಟ್ಟಿದ್ದು?"

"ನಮ್ಮ ಮಾಧ್ಯಮಿಕ ಸಾಲೆ ಕನ್ನಡ ಮೇಷ್ಟ್ರು ಸಾ. ಆ ಪ್ರಾಣ ಗೀಣ ಅಂದ್ರೆ ನಮ್ ತಲೆಗೆ ಹೆಂಗೆ ಹೋಯ್ತದೆ ನೀವೇ ಯೋಳಿ. ಅದ್ಕೆ ನಮ್ಗೆ ಹೊಟ್ಟೆ ಸೀಳೋದು ಅಂತ ಅರ್ತ ಆಗೋ ಹಂಗೆ ಯೋಳಿಕೊಟ್ಟಿದ್ರು. ಬಾಳ ಒಳ್ಳೆ ಮೇಷ್ಟ್ರು ಸಾ."

ಅವನು ಹೇಳಿದ್ದು ಒಂದು ರೀತಿ ಸರಿಯಾಗಿದೆ ಅನಿಸಿತು.

"ಅವರು ಇನ್ನೇನೇನು ಹೇಳಿಕೊಟ್ಟಿದ್ದರಪ್ಪ?" ಕುತೂಹಲದಿಂದ ಕೇಳಿದೆ.

"ಒಂದು ನಂಗೆ ಇನ್ನೂ ಗೆಪ್ತಿಲ್ಯೆತೆ ಸಾ , ನಾನು 'ಕ' ಅಕ್ಷರ ಬರೀಬೇಕಾದ್ರೆ ಮೇಲಿನ ಸೊನ್ನೆ, ಕೆಳಗಿನ ಸೊನ್ನೆ ಎರಡ್ನು ಒಂದೇ ಸೈಜ್ ಬರಿತಿದ್ದೆ. ಅವರು 'ಚೆಂಗಾ, 'ಕ' ಬರೀಬೇಕಾದ್ರೆ ಹಂಡೆ ಮೇಲೆ ಹಂಡೆ ಕೂರಿಸಬೇಡಪ್ಪ. ಹಂಡೆ ಮೇಲೆ ಚೊಂಬು ಕೂರಿಸು' ಅಂತ ಯೋಳಿದ್ರು ಸಾ " ಅಂದ.

ಆ ಅಧ್ಯಾಪಕರ ಈ ನೂತನ ಸೃಜನಶೀಲ ಪಾಠಕ್ರಮದಿಂದ ಅವರ ಮೇಲೆ ನನಗೆ ಗೌರವ ಮೂಡಿತು. ಮನದಲ್ಲೇ ಅವರಿಗೆ ವಂದಿಸಿದೆ.

ಈ ರೀತಿ ಇನ್ನೂ ಇರಬಹುದಾದ ಹೊಸ ಪಾಠದ ಮಾದರಿಗಳನ್ನು ತಿಳಿಯಬೇಕು ಅನ್ನಿಸಿತು. ಅಂಥವು ನಿಮಗೆ ಗೊತ್ತಿದ್ದರೆ ದಯವಿಟ್ಟು ನನಗೆ ತಿಳಿಸಿ.

■

ಸವಿ ನೆನಪಿನ ಸಂಗಡ..

● ಮಂಗಳ ಎಂ. ನಾಡಿಗ್

ನನ್ನ ಬಾಲ್ಯವೆಲ್ಲಾ ಮಲೆನಾಡಿನ ಮಡಿಲಿನಲ್ಲಿ .ತಪ್ಪು ಮಾಡಿದವರನ್ನು ಕೊಪ್ಪಕ್ಕೆ ಹಾಕು ಎಂಬ ಮಾತಿತ್ತಂತೆ, ತಪ್ಪು ಮಾಡಿದ್ದೆನೋ ಬಿಟ್ಟಿದ್ದೆನೋ ಗೊತ್ತಿಲ್ಲ. ಹುಟ್ಟಿ ಬೆಳೆದ ಊರಂತೂ ಬಹಳ ಸುಂದರ, ಸೊಬಗಿನ ಪ್ರಕೃತಿಯ ಮಡಿಲು. ಒಮ್ಮೊಮ್ಮೆ ಮೂರು ನಾಲ್ಕು ದಿನಗಳಾದರೂ ಬಿಡದೆ ಸುರಿಯುವ ಮಳೆಯಲ್ಲಿ ಸದಾ ಮುಸ್ಸಂಜೆಯಂತೆಯೇ ಇರುವ ವಾತಾವರಣ, ಜೀರುಂಡೆಗಳ ಶಬ್ಧ, ಕಪ್ಪೆಗಳ ವಟರ್ ವಟರ್, ಒಮ್ಮೊಮ್ಮೆ ಮನೆಯೊಳಗೂ ಅವುಗಳ ಅಧಿಕೃತ ಪ್ರವೇಶ. ಎಲ್ಲಿ ಕುಪ್ಪಳಿಸುತ್ತಾ ಕುಪ್ಪಳಿಸುತ್ತಾ ಬಚ್ಚಲ ಒಲೆಯೊಳಗೆ ಹೋಗುತ್ತವೋ ಎಂದು ಹಿಡಿದು ಹೊರಗೆ ಬಿಡಲು ನಮ್ಮದು ಹರಸಾಹಸ. ಮಲೆನಾಡಿನ ಮಳೆ, ಚಳಿಗೆ ಒಲೆಬುಡವೆ ಗಟ್ಟಿ. ಈಗಲೂ ಊರಿಗೆ ಹೋದರೆ ಅದೇ ನನ್ನ ಅಚ್ಚುಮೆಚ್ಚಿನ ಜಾಗವೆಂದರೆ ತಪ್ಪಲ್ಲ. ಓದುವುದಕ್ಕೂ ಒಲೆಬುಡವೇ ಬೇಕಿತ್ತು, ಬರೆಯುವಾಗ ಮಾತ್ರ ಬೇರೆ ಕಡೆ.

ಇನ್ನು ಮಳೆಗಾಲ ಪ್ರಾರಂಭವಾಗುವಾಗ ಒಮ್ಮೊಮ್ಮೆ ನಾವು ಕೆಲಸದವರ ಜೊತೆ ಗದ್ದೆ ನೆಟ್ಟಿಗೆ ಗದ್ದೆಗೆ ಹೋಗುತ್ತಿದ್ದೆವು. ಪಿರಿಪಿರಿ ಮಳೆಯಲ್ಲಿ ನೆನೆಯುತ್ತಾ ಅವರು ಹೇಳುವ ಹಾಡು, ಒಗಟು ಕೇಳುತ್ತಾ ಸಸಿಯ ಕಟ್ಟಿನಿಂದ ನಾಲ್ಕು ನಾಲ್ಕು ಸಸಿಗಳನ್ನು ಒಟ್ಟಾಗಿ ನೆಟ್ಟು, ಕೊನೆಗೆ ಎಷ್ಟೊಂದು ಜಾಗಕ್ಕೆ ನಾನು ನೆಟ್ಟಿದ್ದೇನೆ ಎಂದು ನೋಡುವಾಗ ಸಂತೃಪ್ತ ಭಾವ. ಹೂಟಿಯಾದ ಗದ್ದೆಯಲ್ಲಿ, ಕೆಸರು ಬಣ್ಣದ ನೀರಲ್ಲಿ ಎಲೆ ಹಸಿರು ಭತ್ತದ ಸಸಿಗಳು ಒಂದರ ಪಕ್ಕ ಒಂದರಂತೆ ಸಾಲಾಗಿ ಕಾಣುವಾಗ ಕಣ್ಣುಗಳಿಗೆ ತಂಪು. ಇನ್ನು ಅಪರೂಪಕ್ಕೆ ಬರುತ್ತಿದ್ದ ಬೆಳಗಿನ ಎಳೆ ಬಿಸಿಲಿನಲ್ಲಿ ನೋಡಿದರಂತೂ ಅದರ ವೈಭವ ಹೇಳಲು ಪದಗಳಿಲ್ಲ. ಸುತ್ತ ಕಾಡು ಮಧ್ಯದಲ್ಲಿ ಗದ್ದೆ, ಬೆಳ್ಳಕ್ಕಿಗಳು, ಹಳ್ಳ, ಅದರ ದಂಡೆಯಲ್ಲಿದ್ದ ಅತ್ತಿಯ ಮರದಲ್ಲಿ ಜೋತಾಡುವ ಗೀಜಗನ ಗೂಡುಗಳು ಆಹಾ, ಕಣ್ಣಿಗೆ ಹಬ್ಬ. ಆಗ ಕ್ಯಾಮೆರಾ ಏನೂ ನಮ್ಮಲ್ಲಿ ಇಲ್ಲದಿದ್ದ ಕಾಲ. ಇದಿದ್ದರೆ ಈಗ ಸ್ಮೃತಿ ಪಟಲದಲ್ಲಿ ಸೆರೆಯಾಗಿರುವ ಅದೆಷ್ಟೋ ಚಿತ್ರಗಳು ಫೋಟೋಗಳಲ್ಲಿ ಸೆರೆಯಾಗಿರುತ್ತಿದ್ದವು. ಈಗ ಮೊದಲಿನಷ್ಟು ಕಾಡು ಇಲ್ಲ. ಹೂಟಿ, ಒಕ್ಕಲಾಟಕ್ಕೆ ಎತ್ತುಗಳ ಜಾಗದಲ್ಲಿ ಟಿಲ್ಲರ್ರು ಬಂದಿದೆ. ಇದನ್ನು ತಪ್ಪು ಎನ್ನಲು ಖಂಡಿತಾ ಸಾಧ್ಯವಿಲ್ಲ. ಹಿಂದೆ ಕೆಲಸ ಮಾಡುತ್ತಿದ್ದವರ ಮಕ್ಕಳಿಗೆಲ್ಲ ಸರ್ಕಾರಿ ಶಾಲೆಗಳಲ್ಲಿ ಬಿಸಿಊಟ, ಸಮವಸ್ತ್ರ, ಪುಸ್ತಕಗಳ ಸೌಲಭ್ಯ, ಹೆಣ್ಣು ಮಕ್ಕಳಿಗೆ ಸೈಕಲ್ ಹೀಗೆ ಅನೇಕ ಸೌಲಭ್ಯಗಳು ದೊರೆತು, ತಾವೂ ಓದಿ ಕೆಲಸಕ್ಕೆ ಸೇರಬೇಕೆಂಬ ಅವರಲ್ಲಿನ ಅನೇಕರ ಕನಸುಗಳು ಪೂರೈಸಿವೆ. ಅವರೆಲ್ಲಾ ಸಿಟಿ , ಬೇರೆ ಬೇರೆ ಊರು ಸೇರಿರುವುದರಿಂದ ಹಳ್ಳಿಗಳಲ್ಲಿ ಈಗ ಕೆಲಸಕ್ಕೆ ಜನರು ಸಿಗುವುದಿಲ್ಲ. ಮೊದಲಿನವರಿಗೆಲ್ಲ ಈಗ ವಯಸ್ಸಾಗಿ, ಅವರ ಮಕ್ಕಳು ನೀವು ದುಡಿದದ್ದು ಸಾಕು ಆರಾಮಾಗಿರಿ ಎಂದು ಮನೆಗೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡಿರುವುದೂ ಸಹ ಇದಕ್ಕೆ ಮುಖ್ಯ ಕಾರಣ. ಮೊದಲೆಲ್ಲ ಕೂಲಿ ಕೆಲಸಕ್ಕೆ ಬರುತ್ತಿದ್ದ ಜನರ ಮಕ್ಕಳು, ಮೊಮ್ಮಕ್ಕಳು ಹೀಗೆ ಎಲ್ಲರೂ ಒಂದು ಹಂತದವರೆಗೆ ಓದಿಯೋ, ಓದದೆಯೋ ತಮಗೇ ಗೊತ್ತಿಲ್ಲದಂತೆ ಜೀವನೋಪಾಯಕ್ಕಾಗಿ ಅದೇ ಕೆಲಸವನ್ನೇ ಮಾಡುತ್ತಿದ್ದರು. ಆದರೆ ಈಗ ಎಲ್ಲ ಬದಲಾಗಿದೆ. ಕೆಲಸಕ್ಕೆ ಜನ ಸಿಗುವುದಂತೂ ಕಷ್ಟ, ಸಿಕ್ಕರೂ ಅವರಿಗೆ ಸಂಬಳ ಕೊಟ್ಟು ಪೂರೈಸುವುದು ಈಗಿನ ರೈತರಿಗೆ ಕಷ್ಟ ಸಾಧ್ಯ. ಏಕೆಂದರೆ, ಅಕಾಲಿಕ ಮಳೆಯಿಂದ ಪ್ರತಿ ವರ್ಷ ರೈತರ ಬೆಳೆಗಳು ಹಾಳಾಗಿ, ಕೈಗೆ ಬಂದ ತುತ್ತು ಬಾಯಿಗೆ ಇಲ್ಲದಂತಾಗಿದೆ.

ಸಂಜೆಯಾದಂತೆ ಕೆಲಸದವರೆಲ್ಲ ಮನೆಗೆ ಹೋದ ಮೇಲೆ ನಾವು ಚಳಿಯಿಂದ ನಡುಗುತ್ತಲೇ ಮನೆಗೆ ಬಂದು ಬಿಸಿಬಿಸಿ ನೀರಿನಿಂದ ಸ್ನಾನ ಮಾಡಿ, ಅಮ್ಮ ಮಾಡಿದ ಮನೆಯಲ್ಲೇ ಬೆಳೆದ ಕೆಂಪಕ್ಕಿಯ (ಪಾಲಿಶ್ ಮಾಡದ) ತಿಳಿ ಬಸಿದು ಮಾಡಿದ ಅನ್ನ ,ನಮ್ಮ ಕಡೆ ಬಣ್ಣದ ಸೌತೆಕಾಯಿ ಅಂತಲೇ ಕರೆಯುವ ಮಂಗಳೂರು ಸೌತೆಕಾಯಿಯ ಹುಳಿ(ಸಾಂಬಾರ್) ಕೆನೆಮೊಸರು, ಮಾವಿನ ಮಿಡಿ ಉಪ್ಪಿನಕಾಯಿ, ಹಲಸಿನ ಹಪ್ಪಳ, ಸಂಡಿಗೆ ಮೆಣಸಿನ ಕಾಯಿ ,ಹೊಟ್ಟೆ ತುಂಬಾ ಊಟ ಮಾಡಿ ಮಲಗಿದರೆ ತಕ್ಷಣ ಬರುತ್ತಿದ್ದ ನಿದ್ದೆಗೆ ಬೆಳಿಗ್ಗೆ ಮನೆಯೊಳಗೆ ಬಂದ ಬೆಳಕು, ಹಕ್ಕಿಗಳ ಕಲರವವೇ ಅಲಾರಾಂ. ಆಗೆಲ್ಲ ಮಲಗಿದ ತಕ್ಷಣ ನಿದ್ದೆ ಬರುತ್ತಿತ್ತು. ಹತ್ತೂವರೆಯೆಂದರೆ ನನಗೆ ಮಧ್ಯರಾತ್ರಿಯಂತೆ. ರೇಡಿಯೋ ಭದ್ರಾವತಿ ಸ್ಟೇಷನ್ ನಲ್ಲಿ ಯುವವಾಣಿ ಕಾರ್ಯಕ್ರಮ ಕೇಳಿ ಮಲಗಿದರೆ ಬೆಳಗ್ಗೆ ಆರರವರೆಗೆ ಸುಖ ನಿದ್ದೆ. ಮಲೆನಾಡಿನ ಮರಕೆಸುವಿನ ಎಲೆಯ ಪತ್ರೊಡೆ, ಹಲಸಿನ ಕಾಯಿಯ ಹಪ್ಪಳ,ಹಲಸಿನ ಕಾಯಿ ಚಿಪ್ಸ್, ಹಲಸಿನ ಹಣ್ಣಿನ ಕಡುಬು, ಬಿಸಿ ಬಿಸಿ ಗಂಜಿ ಅದಕ್ಕೆ ತುಪ್ಪ, ಉಪ್ಪಿನಕಾಯಿ ಇವೆಲ್ಲ ಈಗ ಆಗಾಗ ಮೆಲುಕು ಹಾಕುವ ಸವಿನೆನಪುಗಳು.

ಅಪ್ಪ, ಅಮ್ಮ ಗದ್ದೆಗೆ ಅಥವಾ ಹೊರಗಡೆ ಏನಾದ್ರೂ ಹೋದಾಗ ಜಗಲಿಯ ಬಾಗಿಲಿನಲ್ಲಿ ನಾಯಿಮರಿಯನ್ನು ಕಾಲ ಮೇಲೆ ಮಲಗಿಸಿಕೊಂಡು ಎಡಗೈಯಲ್ಲಿ ತಟ್ಟುತ್ತಾ ಇನ್ನೊಂದು ಕೈಯ್ಯಲ್ಲಿ ಪುಸ್ತಕ ಹಿಡಿದುಕೊಂಡು ಓದುತ್ತಿದ್ದರೆ ಪಾಪ ಅದು ಬೆಚ್ಚಗೆ ಮಲಗಿರುತ್ತಿತ್ತು. ಅಪ್ಪ, ಅಮ್ಮ ಬಂದದ್ದು ತಿಳಿದ ತಕ್ಷಣ ಬಯ್ಯುತ್ತಾರೆಂದು (ಅದರ ಮೈಯ್ಯಲ್ಲಿರುವ ಚಿಗಟ, ಕೂದಲು ಎಲ್ಲಾ ನಮ್ಮ ಬಟ್ಟೆಗೆ ಆಗುತ್ತದೆಂದು)ಮೆತ್ತಗೆ ಎತ್ತಿ ಗೋಣಿ ಚೀಲದ ಮೇಲೆ ಮಲಗಿಸಿದರೆ ಚಳಿಗೆ ಕುಯ್ ಕುಯ್ ಎಂದು ಕೂಗುತ್ತಿದ್ದುದನ್ನು ನೆನೆಸಿಕೊಂಡರೆ ಈಗಲೂ ಪಾಪ ಎನಿಸುತ್ತದೆ. ಇನ್ನು ಶನಿವಾರ ಭಾನುವಾರ ಬಂದರೆ ಮಧ್ಯಾಹ್ನ ಊಟದ ನಂತರ ಒಂದಿಷ್ಟು ಹೊತ್ತು ಕೊಟ್ಟಿಗೆಯಲ್ಲಿ ಎಮ್ಮೆ, ದನ ಕರುಗಳೊಂದಿಗೆ ಒಡನಾಟ. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಗದ್ದೆಯಲ್ಲಿ ಮೇಯ್ದು ಬಂದು ತಣ್ಣಗೆ ಹಸಿರು ಸೊಪ್ಪಿನ ಮೇಲೆ ಮಲಗಿರುವುದನ್ನು ನೋಡುವುದಕ್ಕೇ ಒಂದು ಖುಷಿ. ಒಂದೊಂದರ ಬಳಿಯೂ ಹೋಗಿ ಮೈಸವರಿ ,ಕತ್ತು ತುರಿಸಿ ಮೈಯ್ಯಲ್ಲಿ ಉಣುಗುಗಳಿದ್ದರೆ ತೆಗೆದುಹಾಕಿ ಮಾತನಾಡಿಸಿ ಮುದ್ದು ಮಾಡಿದರೆ ಏನೋ ಸಂತೋಷ, ಸಮಾಧಾನ , ತೃಪ್ತಿ. ಮಾತನಾಡಿಸುತ್ತಾ ಗಂಟಲ ಬಳಿ ತುರಿಸಿದಂತೆಲ್ಲ ಹಿತವಾಗುತ್ತಿದೆ ಇನ್ನೂ ತುರಿಸು ಎಂದು ಕತ್ತನ್ನು ಮೇಲೆತ್ತುತ್ತ ನೋಡುತ್ತಿದ್ದ ಆ ನೋಟ ಇನ್ನೂ ಕಣ್ಣೊಳಗೆ ಸೆರೆಯಾಗಿ ಹಾಗೇ ಇದೆ. ಪುಟ್ಟ ಕರುಗಳು ಬೆಳಿಗ್ಗೆ ಮುಂಚೆ ತಾಯ ಹಾಲ್ಕುಡಿದು ಕೊಟ್ಟಿಗೆ, ಕಣದ ಸುತ್ತ ಬಾಲ ಎತ್ತಿಕೊಂಡು ಕೂಗುತ್ತಾ ಓಡುತ್ತಿದ್ದರೆ ಅದೇನು ಚೆಂದ. ಕಣ್ಣಿಗೆ ಹಬ್ಬ ಅಂತಾರಲ್ಲ ಹಾಗೆ. ಗೊತ್ತಿಲ್ಲದೆ ಕಾಡೊಳಗೆ ಎಲ್ಲೆಲ್ಲೋ ಹೋಗುತ್ತದೆ ಹಿಡಿದು ಅದರ ಅಮ್ಮನ ಬಳಿಗೆ ಕಟ್ಟೋಣವೆಂದರೆ ಓಡಿಸಿ ಓಡಿಸಿ ಸುಸ್ತು ಮಾಡಿಸಿ ಬಿಡುತ್ತಿತ್ತು.

ಅಪ್ಪ ಮಲಗಿರುವಾಗ ಅವರಿಗೆ ಹಾಕುತ್ತಿದ್ದ ಜುಟ್ಟು, ಅಮ್ಮನ ಸೀರೆಯುಟ್ಟು ಆಡುತ್ತಿದ್ದ ಟೀಚರ್ ಆಟ , ಹುಷಾರಿಲ್ಲದಿದ್ದಾಗ ಅಪ್ಪ ಹೆಗಲ ಮೇಲೆ ಕೂರಿಸಿಕೊಂಡು ಪಟ್ಟಣದ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ವೈದ್ಯರು ಇಂಜೆಕ್ಷನ್ ಕೊಡಲೆಂದು ತಯಾರಿ ಮಾಡುತ್ತಿದ್ದಾಗ ಹೆದರಿಕೆಯಿಂದ ನಾನು ಹೊರಗಡೆ ಓಡಿ ಹೋಗಿದ್ದು ಇವೆಲ್ಲಾ ಈಗ ಆ ಜಾಗಗಳ ಜೊತೆಗೆ ಹಾಗೇ ಕಣ್ಣಿಗೆ ಕಟ್ಟಿದಂತಿದೆ. ಅಮ್ಮ ಹಾಗೂ

ಅಜ್ಜ (ಅಮ್ಮನ ತಂದೆ)ಹೇಳುತ್ತಿದ್ದ ಪುರಾಣದ ಕಥೆಗಳು, ಸಂಜೆಯಾದರೆ ಭಜನೆ, ಶಾಲೆಗೆ ಸೇರುವ ಮೊದಲು ಹಾಗೂ ರಜಾ ದಿನಗಳಲ್ಲಿ ಅಜ್ಜನ ಜೊತೆ ಹೂ ಕುಯ್ಯುವುದು, ಗಂಧ ತೇಯುವುದು, ರಂಗೋಲಿ ಹಾಕುವುದು, ಪೂಜೆಗೆ ತಯಾರಾಗಿ ಅಜ್ಜನ ಜೊತೆ ಕುಳಿತುಕೊಳ್ಳುವುದು, ಪೂಜೆ ಮುಗಿದ ನಂತರ ಸಿಹಿಯಾದ ಚೆಂದನದ ತೀರ್ಥ ಕುಡಿದ ನಂತರವೇ ತಿಂಡಿ. ಈ ಎಲ್ಲವೂ ನನಗೆ ಸವಿ ನೆನಪುಗಳ ಜೊತೆಗೆ ಬದುಕಿಗೆ ಬೇಕಾದ ರೀತಿ ನೀತಿ,ಸಂಸ್ಕಾರ ಕಲಿಸಿಕೊಟ್ಟಂತಹ ದಿನಗಳು.

ನಮ್ಮೂರಿನಲ್ಲಿ ವೀರಭದ್ರ ದೇವರ ಜಾತ್ರೆ ಬಹಳ ದೊಡ್ಡ ಜಾತ್ರೆ. ಜಾತ್ರೆಗೆಂದೇ ಬೇರೆ ಬೇರೆ ಊರುಗಳಿಂದ ಒಂದೆರಡು ದಿನ ಮುಂಚೆಯೇ ಬರುವವರೂ ಇದ್ದಾರೆ. ಬೆಳಿಗ್ಗೆ ಕೆಂಡ ಹಾಯುವುದರಿಂದ ಶುರುವಾಗಿ ಪೂಜೆ, ರಥ ಎಳೆಯುವುದು, ಕೋಡಂಗಿ ವೇಷ ,ವೀರಗಾಸೆ ನೃತ್ಯ, ಬೆಂಡು – ಬತ್ತಾಸು ,ಬಣ್ಣ ಬಣ್ಣದ ವಿದ್ಯುತ್ ದೀಪಗಳ ಅಲಂಕಾರ,ತರಾವರಿ ಆಟಿಕೆಗಳು, ಬಣ್ಣ ಬಣ್ಣದ ಹೊಳೆಯುವ ಬಳೆಗಳು, ಬಲೂನ್ಗಳು, ಬೇಕೆಂದೇ ಎಲ್ಲರ ಕಿವಿಯ ಹತ್ತಿರ ಹೋಗಿ ಜೋರಾಗಿ ಪೀಪಿ ಊದುವ ಒಂದಿಷ್ಟು ಹುಡುಗರು(ಈಗಲೂ ಇದು ಹೆಚ್ಚೇ) ಒಟ್ಟಿನಲ್ಲಿ ಹೇಳಬೇಕೆಂದರೆ ಸಂಭ್ರಮವೋ ಸಂಭ್ರಮ. ಒಂದು ವರ್ಷ ನಾಲ್ಕೈದು ಹುಡುಗರು ನಮ್ಮ ಕಾಡಿನಲ್ಲಿ ಬಂದು ಕಲ್ಲು ಸಂಪಿಗೆ ಹಣ್ಣು ಕೊಯ್ಯುತ್ತಿದ್ದರು. ನಮಗೆ ಪರಿಚಯವಿಲ್ಲ, ಕೇಳಿದಾಗ ನಾವು ಸೌತ್ ಕೇಂದ್ರದಿಂದ ವೀರಭದ್ರ ಜಾತ್ರೆಗೆ ಬಂದವರು , ಹಾಗೇ ಇಲ್ಲಿ ಎಲ್ಲಾ ಕಡೆ ಸುತ್ತಾಡುತ್ತಿದ್ದೇವೆ , ದಾರಿಯೂ ತಿಳಿದಿಲ್ಲ ಎಂದರು. ನಂತರ ಅವರಿಗೆ ಉಪಚರಿಸಿ ಮತ್ತೆ ಪೇಟೆಗೆ ಹೋಗುವ ದಾರಿ ಹೇಳಿ ಕಳಿಸಿದ್ದಾಯ್ತು. ಆಗಲೇ ಅಷ್ಟು ದೂರದಿಂದಲೂ ನಮ್ಮೂರ ಜಾತ್ರೆಗೆ ಜನ ಬರುತ್ತಾರೆ ಎಂದು ತಿಳಿದದ್ದು. ನಾನಂತೂ ಜಾತ್ರೆಯಲ್ಲಿ ಬಲೂನು ತೆಗೆದುಕೊಳ್ಳದೆ ಬರುತ್ತಿದ್ದ ಉದಾಹರಣೆಯೇ ಇಲ್ಲ. ಚಿಕ್ಕ ವಯಸ್ಸಿನಲ್ಲಿ ಅಜ್ಜ ಬೇಕಾದಷ್ಟು ಬಲೂನನ್ನು ತಂದು ಕೊಡುತ್ತಿದ್ದರು. ಬಹುಶಃ ಅದೇ ನನಗೆ ಬಲೂನನ್ನು ಅಷ್ಟೊಂದು ಇಷ್ಟಪಡಲು ಕಾರಣವಾಗಿರಬಹುದು.

ಶಾಲಾ, ಕಾಲೇಜುಗಳಿಗೆ ರಜೆಯಿದ್ದಾಗ ಗ್ರಂಥಾಲಯದಿಂದ ಕಥೆ, ಕಾದಂಬರಿ ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ಓದಲು ಕುಳಿತರೆ (ಬೇರೆ ಏನೂ ಅವಸರದ ಕೆಲಸವಿಲ್ಲದಿದ್ದಾಗ) ಒಮ್ಮೊಮ್ಮೆ ಅದು ಮುಗಿದ ಮೇಲೆಯೇ ಏಳುತ್ತಿದ್ದುದು. ಒಂದು ಬಾರಿ ಪುಸ್ತಕಗಳನ್ನು ತೆಗೆದುಕೊಂಡು ಹೋದರೆ ಹದಿನೈದು ದಿನದವರೆಗೆ ಇಟ್ಟುಕೊಳ್ಳಲು ಸಮಯವಿದ್ದರೂ ಎಷ್ಟೋ ಬಾರಿ ಒಂದೆರಡು ದಿನಗಳಲ್ಲೇ ಓದಿ ಮುಗಿಯುತ್ತಿತ್ತು. ಅಷ್ಟು ಓದುವ ತುಡಿತ. ನಿಜವಾಗಲೂ ಆ ದಿನಗಳು ಬಹಳ ಸುಖದ ದಿನಗಳು ಎಂದರೆ ತಪ್ಪಲ್ಲ. ಅಮ್ಮ ಮಾಡಿ ಹಾಕುತ್ತಿದ್ದ ರುಚಿ ರುಚಿಯಾದ ಅಡುಗೆ, ಬೇಕಾದದ್ದನ್ನೆಲ್ಲ ಕೊಡಿಸುತ್ತಿದ್ದ ಅಪ್ಪ, ಓದಲೊಂದಷ್ಟು ಪುಸ್ತಕಗಳು, ಕಣ್ತುಂಬಾ ನಿದ್ದೆ ನೆನೆಸಿಕೊಂಡರೆ ಆ ದಿನಗಳು ಮತ್ತೆ ಮರಳಿ ಬರಬಾರದೇ ಎನಿಸುತ್ತದೆ. ಇವೆಲ್ಲ ಮಧುರ ನೆನಪಿನ ಕೆಲವು ತುಣುಕುಗಳು ಅಷ್ಟೆ. ಈ ಡಿಸೆಂಬರ್ ನ ಚಳಿಗೆ ಬೆಚ್ಚನೆಯ ಹೊದಿಕೆಯಂತೆ ಹಿತವಾಗಿ ಕಾಡುವ ನೆನಪುಗಳ ಬುತ್ತಿಯ ಸಿಹಿ ತುತ್ತು.

■